
ಗೌರಿ ಲಂಕೇಶರ

ಲಂಕೇಶ್

ಮೇ 2, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ನರ್ಸ್ ಜಯಲಕ್ಷ್ಮಿ ರೇಣುಕಾಚಾರ್ಯ ಸೆಕ್ಸ್ ಹಗರಣ



ಯಡ್ಡಿಗೆ ಕುಮಾರನ ಫಿಟ್ಟಿಂಗ್!


ೋಣಬ ಮಠಾಧೀಶ ನಾಪತ್ತೆ





'ಬಸವಣ್ಣ ವೈದಿಕ ಬ್ರಾಹ್ಮಣನಲ್ಲ'

–ಎಂ.ಎಂ. ಕಲ್ಬುರ್ಗಿ



ಪೇಜಾವರ ಪೀಠತ್ಯಾಗ?



ಸಂಸ್ಕೃತಿ ಮತ್ತು ಲೈಂಗಿಕ ಶಿಕ್ಷಣ..!

ಶಾಲೆಯಲ್ಲಿ ವೈಜ್ಞಾನಿಕ ಲೈಂಗಿಕ ಶಿಕ್ಷಣ ಕೊಡಬೇಕೆ ಬೇಡವೇ ಎಂಬ ವಿವಾದ ಹೆಚ್ಚುಕಡಿಮೆ ಅವೈಜ್ಞಾನಿಕ ರೀತಿಯಲ್ಲಿ ಮುಗಿಯುತ್ತಾ ಬರುತ್ತಿದೆ. ವಾಸ್ತವವೆಂದರೆ ಈಗಾಗಲೇ ಮಕ್ಕಳಿಗೆ ಮಾಧ್ಯಮ, ಚಲನಚಿತ್ರ ಇತ್ಯಾದಿಗಳಿಂದ ಚಿಕ್ಕಂದಿನಿಂದಲೇ ಒಂದು ಬಗೆಯ ಲೈಂಗಿಕ ಶಿಕ್ಷಣ ದೊರೆಯುತ್ತಿದೆ. ಲೈಂಗಿಕತೆಯ ಬಗ್ಗೆ ಲೈಂಗಿಕ ಅನುಭವಗಳ ಬಗ್ಗೆ ಅಸಹಜವಾದ ಮತ್ತು ಏಕಪಕ್ಷೀಯವಾದ ಕುತೂಹಲ ಮತ್ತು ಗೀಳು ಬೆಳೆದಿರುತ್ತವೆ. ಹೀಗಾಗಿ ಒಂದು ರೀತಿಯಲ್ಲಿ ಲೈಂಗಿಕ ಶಿಕ್ಷಣವನ್ನು ಹೊಸದಾಗಿ ಕೊಡಬೇಕೆ ಎಂಬ ಪ್ರಶ್ನೆಯೇ ಅಸಂಬದ್ಧ.

ಪೋಷಕರ, ಉಪಾಧ್ಯಾಯರ, ಶಾಲೆಯ ಮತ್ತು ಮನೆಯ ಗೇಟುಗಳನ್ನು ದಾಟಿ ಒಂದು ನಿರ್ದಿಷ್ಟ ಉದ್ದೇಶ ಉಳ್ಳ ಲೈಂಗಿಕ ತಿಳಿವಳಿಕೆಯನ್ನು ಮಾಧ್ಯಮಗಳು ಬಿತ್ತರಿಸುತ್ತಿವೆ. ಅದಕ್ಕೆ ಈಗ ನೈತಿಕತೆಯ ಬಗ್ಗೆ ಮತ್ತು ಭಾರತೀಯ ಸಂಸ್ಕೃತಿಯ ಬಗ್ಗೆ ಬೊಬ್ಬೆ ಹೊಡೆಯುವ ಜನರೆ ರಹದಾರಿಯನ್ನು ಒದಗಿಸಿದ್ದಾರೆ.

ಈಗ ನಮ್ಮ ಮುಂದಿರುವ ಪ್ರಶ್ನೆ ಒಂದು ಅನಾರೋಗ್ಯಕರ ಲೈಂಗಿಕ ಪ್ರಜ್ಞೆಯನ್ನು ಈಗಾಗಲೇ ದಿನದ ಮೂರೂ ಹೊತ್ತು ನೀಡುತ್ತಿರುವ ಹೊತ್ತಿನಲ್ಲಿ ಒಂದು ಆರೋಗ್ಯಕರ, ವೈಜ್ಞಾನಿಕ ಲೈಂಗಿಕ ಶಿಕ್ಷಣ ನೀಡಬೇಕೆ ಬೇಡವೇ ಎಂಬುದು! ಅಷ್ಟೇ ಮುಖ್ಯವಾದದ್ದು ಆ ಉದ್ದೇಶವನ್ನು ಪಠಿಸುತ್ತಾ ಇಂದು ಕೇಂದ್ರ ಸರ್ಕಾರ ಪರಿಚಯಿಸುತ್ತಿರುವ ಲೈಂಗಿಕ ಶಿಕ್ಷಣದ ಪ್ರೈಮರ್‌ಗಳು ಈ ಆಶಯವನ್ನು ಈಡೇರಿಸುತ್ತವೆಯೇ ಎಂಬುದು!

ಮೊದಲನೆಯದಾಗಿ ಇಂದು ಕೇಂದ್ರ ಸರ್ಕಾರ ಸಲಹೆಯ ರೂಪದಲ್ಲಿ ಸರಬರಾಜು ಮಾಡಿರುವ ಪ್ರೈಮರ್‌ಗಳು ಮೂಲಭೂತವಾಗಿ ಲೈಂಗಿಕ ಶಿಕ್ಷಣವೆಂದರೆ ಆರೋಗ್ಯಕರ, ಅಲ್ಲ ಏಡ್ಸ್ ನಿಗ್ರಹ ಸಂಭೋಗದ ಬಗೆಗಿನ ಶಿಕ್ಷಣವೆಂದು ಮಾತ್ರ ಪರಿಭಾವಿಸಿರುವಂತಿದೆ. ಅದರೊಂದಿಗೆ ಏಡ್ಸ್‌ಅನ್ನು ತಡೆಗಟ್ಟಲು ಸುರಕ್ಷಿತ ಸಂಭೋಗ ಹಾಗೂ ಕಾಂಡೋಮ್ ಬಳಕೆ ಇವುಗಳನ್ನೇ ಗುರಿಯಾಗಿರಿಸಿಕೊಂಡಿದೆ. ಈ ಸ್ವರೂಪದಲ್ಲಿರುವ ಲೈಂಗಿಕ ಶಿಕ್ಷಣ ಸಹಜವಾಗಿಯೇ ಕಾಂಡೋಮ್ ಮಾರುಕಟ್ಟೆಯನ್ನು ಹೆಚ್ಚಿಸಬಹುದೇ ವಿನಃ ಲೈಂಗಿಕತೆ ಮತ್ತು ಲೈಂಗಿಕ ಸಂಬಂಧಗಳ ಬಗ್ಗೆ ಹದಿಹರೆಯದ ವಿದ್ಯಾರ್ಥಿಗಳಿಗೆ ಆರೋಗ್ಯಕರ ಧೋರಣೆಯನ್ನು ಬೆಳೆಸಿಕೊಳಲು ಸಹಾಯ ಮಾಡುವುದಿಲ್ಲ, ಸರಿಯಾದ ತಿಳಿವಳಿಕೆಯನ್ನೂ ಕೊಡುವುದಿಲ್ಲ.

ಅಷ್ಟು ಮಾತ್ರವಲ್ಲ, ಅದು ಏಡ್ಸ್ ಬಗೆಗೂ ಸಮಗ್ರ ಗ್ರಹಿಕೆಯನ್ನಾಗಲೀ, ತಿಳಿವಳಿಕೆಯನ್ನಾಗಲೀ ದೊರಕಿಸುವುದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದು ಪರೋಕ್ಷವಾಗಿ ಮತ್ತು ಆರೋಗ್ಯಕರವಾಗಿ ಹೇಗೆ ಲೈಂಗಿಕ ಅಶಿಸ್ತನ್ನು ಆಚರಿಸಬಹುದೆಂಬುದನ್ನೇ ಬಿತ್ತರಿಸುತ್ತದೆ. ಏಕೆಂದರೆ ಅದು ಕಾಂಡೋಮ್ ಮಾರುಕಟ್ಟೆಯ ವಿಸ್ತರಣೆಗೆ ಅಗತ್ಯವಿರುವ ಮೌಲ್ಯ. (ವಾಸ್ತವವಾಗಿ ಸೆಕ್ಸ್ ಶಿಕ್ಷಣವನ್ನು ಪಾಶ್ಚಿಮಾತ್ಯ ಮಾರುಕಟ್ಟೆಯ ಆಕ್ರಮಣವೆಂದು ಬಣ್ಣಿಸುವ ಚಡ್ಡಿಗಳು ಸಹ ಈ ಮಾರುಕಟ್ಟೆಯ ಆಕ್ರಮಣ ವಿಷಯವನ್ನು ಸಂಸ್ಕೃತಿ ಮತ್ತು ನೈತಿಕತೆಯ ಪ್ರಶ್ನೆಯಷ್ಟು ದೊಡ್ಡದಾಗಿ ಎತ್ತುವುದಿಲ್ಲ! ಪ್ರಾಯಶಃ ಕಾಂಡೋಮ್ ಮಾರುಕಟ್ಟೆಯಲ್ಲಿ ಅವರಿಗೂ ಪಾಲಿರಬಹುದು!).

ಅದೇನೇ ಇರಲಿ, ಲೈಂಗಿಕತೆಯನ್ನು ಅಂದರೆ ಗಂಡು ಮತ್ತು ಹೆಣ್ಣಿನ ದೇಹದಲ್ಲಿ ಸಹಜವಾಗಿ ಸಂಭವಿಸುವ ದೈಹಿಕ ಮತ್ತು ಮಾನಸಿಕ ಬದಲಾವಣೆಗಳನ್ನು, ಅಪ್ರಬುದ್ಧ ಭೋಗಾಸಕ್ತಿ ಮತ್ತು ವಿಕೃತ ಕುತೂಹಲಗಳಿಲ್ಲದೆ ಸಹಜ ಕುತೂಹಲದಿಂದ ಆರೋಗ್ಯಕರವಾಗಿ ಮತ್ತು ವೈಜ್ಞಾನಿಕವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಈ ಪಠ್ಯಗಳು ಯಾವ ರೀತಿಯಲ್ಲೂ ಸಹಾಯಕ್ಕೆ ಬರುವುದಿಲ್ಲ. ಇದು ಸಮಸ್ಯೆಯ ಒಂದು ಮುಖವಷ್ಟೆ.

ಸಮಸ್ಯೆಯ ಅಸಲಿ ಮುಖ ಒಂದು ವೈಜ್ಞಾನಿಕ ಮತ್ತು ಆರೋಗ್ಯಕರ ಲೈಂಗಿಕ ಶಿಕ್ಷಣದ ಅಗತ್ಯದ್ದು. ಅದನ್ನು ಸಂಸ್ಕೃತಿ ಮತ್ತು ನೈತಿಕತೆಯ ಹೆಸರಲ್ಲಿ ತಡೆಗಟ್ಟಲು ಯತ್ನಿಸುವ ಈ ದೇಶದ ಹಿಪಾಕ್ರಾಟಿಕ್ ಮತ್ತು ಪ್ರತಿಗಾಮಿ ಚಿಂತನೆಗಳದ್ದು. (ಮತ್ತು ಅಂಥವರು ಸರ್ಕಾರದಲ್ಲಿರುವುದು!) ಮತ್ತು ಅಂಥ ಆರೋಗ್ಯಕರ ಶಿಕ್ಷಣವನ್ನು ಸಾಧ್ಯವಾಗಿಸದ ಸಾಮಾಜಿಕ ಮತ್ತು ಶಾಲಾ ಸಂದರ್ಭದ್ದು! ಇದರ ಬಗ್ಗೆ ತೀವ್ರವಾದ ಚಿಂತನೆ ಮತ್ತು ಪ್ರಾಯೋಗಿಕ ಸಲಹೆಗಳ ಅಗತ್ಯವಿದೆ. ಅಂಥವೇನೂ ನಡೆಯುವ ಮುಂಚೆಯೇ ಈ ವಿವಾದ ಬಿಸಿ ಊಟದ ಮೊಟ್ಟೆ ವಿವಾದದ ತರ ಮುಚ್ಚಿಕೊಂಡು ಹೋಗುತ್ತಿದೆ.

ಲೈಂಗಿಕ ವಿಷಯಗಳ ಬಗೆಗೆ ಭಾರತೀಯ ಸಮಾಜದ ಹಿಪಾಕ್ರಸಿಗೆ ಬ್ರಾಹ್ಮಣವಾದದಷ್ಟೇ ಹಳೆಯ ಇತಿಹಾಸವಿದೆ. ಅದಕ್ಕೆ ಇತ್ತೀಚಿನ ಉದಾಹರಣೆ ಸಂಸ್ಕೃತಿಯ ಮತ್ತು ನೈತಿಕತೆಯ ಗುತ್ತಿಗೆ ಹೊತ್ತವರಂತೆ ಆಡುವ ಬಿಜೆಪಿ ಶಾಸಕ ಮತ್ತು ಸಂಸದರೇ ಅನೈತಿಕ ಸಂಬಂಧಗಳ ಪ್ರಕರಣಗಳಲ್ಲಿ, ದೇಹ ಮಾರಾಟದ

ಚಾರ್ವಾಕ
ಶಿವಸುಂದರ್

ಜಾಲಗಳಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿರುವುದು! ಅವರ ಭಜರಂಗದಳದ ಮುಖ್ಯಸ್ಥರು ಇತ್ತೀಚಿಗೆ ಜಲಂಧರದಲ್ಲಿ ಬ್ಲೂ ಫಿಲಂ ಮಾರಾಟ ಜಾಲದಲ್ಲೂ ಮುಖ್ಯಸ್ಥರಾಗಿ ಪತ್ತೆಯಾದದ್ದು! ಇದು ಕೇವಲ ಬಿಜೆಪಿಗೆ ಮಾತ್ರ ಅನ್ವಯವಾಗುವ ಸತ್ಯವೇನಲ್ಲ. ವೇಶ್ಯಾವಾಟಿಕೆಯಲ್ಲಿ ಅದರಲ್ಲೂ ಬಾಲವೇಶ್ಯೆಯರ ಸಂಖ್ಯೆಯಲ್ಲಿ ಭಾರತಕ್ಕೆ ವಿಶ್ವದಲ್ಲೇ ಎರಡನೇ ಸ್ಥಾನವಿರುವುದು, ಒಂದೆಡೆ ಪ್ರೇಮಿಗಳ ದಿನ ಇತ್ಯಾದಿಗಳನ್ನು ವಿರೋಧಿಸುತ್ತಲೇ ಅತ್ಯಂತ ಅಶ್ಲೀಲವಾದ ಮೈಕೆಲ್ ಜಾಕ್ಸನ್ ನೃತ್ಯಗಳನ್ನು ಪ್ರಾಯೋಜಿಸುವುದು, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಿ ಸಂಬಂಧೀ ಪ್ರಕರಣಗಳು ಭಾರತದಲ್ಲಿ ಅತಿ ವೇಗವಾಗಿ ಜಾಸ್ತಿಯಾಗುತ್ತಿರುವುದು, ಬಾಲಕಿಯರ ಮೇಲೆ ನಡೆಯುವ ಇಂಥ ಪ್ರಕರಣಗಳಲ್ಲಿ ಬಹಳಷ್ಟು ಕಡೆ ಲೈಂಗಿಕ ವಿಷಯಗಳಲ್ಲಿನ ಅಜ್ಞಾನವೂ ದುರ್ಬಳಕೆಯಾಗುತ್ತಿರುವುದು..



ಇವೆಲ್ಲವೂ ನಮ್ಮ ಭಾರತೀಯ ಸಮಾಜದ ನೈತಿಕತೆಯೆಂಬ ಪುರುಷಪ್ರಧಾನ ಹಿಪಾಕ್ರಸಿಯ ಬಗ್ಗೆ ಕಥೆಗಳನ್ನು ಹೇಳುತ್ತವೆ. ಹೀಗಾಗಿ ಲೈಂಗಿಕ ಶಿಕ್ಷಣದ ವಿಷಯವನ್ನು ಸಮಾಜದ ನೈತಿಕತೆಯ ಪರಿಧಿಯೊಳಗೆ ತಂದಿಟ್ಟು ಮಾತಾಡುವುದೇ ಒಂದು ಹಿಪಾಕ್ರಸಿಯಾಗುತ್ತದೆ.

ಹೆಣ್ಣು ಮತ್ತು ಗಂಡುಗಳ ದೈಹಿಕ ಬೆಳವಣಿಗೆಯ ಪ್ರಕ್ರಿಯೆಯು ಅವರ ವ್ಯಕ್ತಿತ್ವದಲ್ಲೂ, ಸಾಮಾಜಿಕ ಪ್ರವರ್ತನೆಯಲ್ಲೂ, ಮಾನಸಿಕತೆಯಲ್ಲೂ ಹಲವಾರು ಬದಲಾವಣೆಗಳನ್ನು ತರುತ್ತವೆ. ಆದರೆ ಇಂದಿಗೂ ನಮ್ಮ ಗ್ರಾಮೀಣ ಭಾರತದ ಬಹು ದೊಡ್ಡ ಭಾಗದಲ್ಲಿ ಹಾಗೂ ನಗರದಲ್ಲೂ ಮುಟ್ಟು ಇತ್ಯಾದಿ ವಯೋಸಹಜ ದೈಹಿಕ ಬೆಳವಣಿಗೆಯನ್ನು ಪಾಪಕರವೆಂದು ಪರಿಗಣಿಸುವ ಆಚಾರ ವಿಚಾರಗಳು ಅಸ್ತಿತ್ವದಲ್ಲಿವೆ. ಇತರ ಎಲ್ಲಾ ವಿಷಯದಲ್ಲೂ ಮನೆಯೇ ಮೊದಲ ಪಾಠಶಾಲೆಯಾಗಿ ತಾಯಿಯೇ ಮೊದಲ ಗುರುವಾಗಿದ್ದರೂ ಈ ಸಹಜ ವಿಷಯಗಳನ್ನು ತಾಯಿ ಮಕ್ಕಳು ಸಹ ಮುಕ್ತವಾಗಿ ಮಾತಾಡಲಾಗದ ಸಾಮಾಜಿಕ ಮತ್ತು ಕೌಟುಂಬಿಕ ಪರಿಸ್ಥಿತಿಗಳಿವೆ. ಇವೆಲ್ಲದರ ಹಿಂದೆ ಲೈಂಗಿಕ ಸಂಬಂಧಿ ವಿಚಾರಗಳ ಬಗ್ಗೆ ಇರುವ ಮೌಢ್ಯ ಮತ್ತು ಪುರುಷ ಪ್ರಧಾನ ಅಪಾಥಭೂತಿ ಮೌಲ್ಯಗಳೇ ಪ್ರಧಾನ ಪಾತ್ರ ವಹಿಸುತ್ತವೆ. ಒಂದು ಆರೋಗ್ಯಕರ ಸಮಾಜಕ್ಕೆ ಈ ಅಡ್ಡಿಗಳನ್ನು ಮೀರಿದ ವೈಜ್ಞಾನಿಕ ತಿಳಿವಳಿಕೆಯ ಅಗತ್ಯ ಇದೆ.

ಹೀಗಾಗಿಯೇ ಹೆಣ್ಣು ಮತ್ತು ಗಂಡು ಎಂಬ ಪ್ರಕೃತಿ ಸಹಜ ವ್ಯತ್ಯಾಸಗಳನ್ನು ಒಂದು ಜೈವಿಕ ವ್ಯತ್ಯಾಸವಾಗಿ ಮಾತ್ರ ಅರ್ಥ ಮಾಡಿಕೊಂಡು ಸಹಜ ಮತ್ತು ಸಮಾನ ಹಾಗೂ ತಾರತಮ್ಯ ರಹಿತ ಸಂಬಂಧವನ್ನು ರೂಢಿಸಿಕೊಳ್ಳಲು ಸಹ ಗಂಡು ಹೆಣ್ಣಿನ ನಡುವಿನ ವ್ಯತ್ಯಾಸ ಮತ್ತು ಸಂಬಂಧವನ್ನು ನಿರ್ದೇಶಿಸುವ ಲೈಂಗಿಕ ವಿಷಯಗಳ ಬಗ್ಗೆ ಆರೋಗ್ಯಕರ ವೈಜ್ಞಾನಿಕ ಗ್ರಹಿಕೆ ಬೆಳೆಸುವುದು ಅತ್ಯಗತ್ಯ. ಲೈಂಗಿಕತೆ ಎಂದರೆ ಸಂಭೋಗ ಎಂದೇ ಪರಿಭಾವಿಸುವ ತಿಳಿವಳಿಕೆ ಸಹ ಅವುಗಳ ಬಗ್ಗೆ ಸಹಜ ಸಂವಾದವನ್ನು ಮತ್ತು ಹದಿಹರೆಯದ ಗಂಡು ಹೆಣ್ಣುಗಳ ನಡುವೆ ಸಹಜ ಮನುಷ್ಯ ಸಂಬಂಧವನ್ನು ಕಷ್ಟಸಾಧ್ಯವಾಗಿಸುತ್ತದೆ. ಇದು ಒಂದು ಆರೋಗ್ಯವಂತ ಸಮಾಜ ಕಟ್ಟುವುದಕ್ಕಿಂತ ವಿಕೃತ ವ್ಯಕ್ತಿತ್ವಗಳನ್ನು ಮತ್ತು ಅನಾರೋಗ್ಯಕರ ಸಮಾಜವನ್ನು ಮಾತ್ರ ಹುಟ್ಟಹಾಕುತ್ತದೆ.

ಪರಂಪರಾನುಗತವಾಗಿ ಬಂದಿರುವ ಶೋಷಣೆಯ ರೂಪವನ್ನು ಹೊಸ ರೂಪದೊಂದಿಗೆ ಮುಂದುವರೆಸಲು ಮಾತ್ರ ಸಹಾಯ ಮಾಡುತ್ತದೆ. ಏಕೆಂದರೆ ಲೈಂಗಿಕತೆ ಎಂದರೆ ಸಂಭೋಗ ಎಂಬ ತಿಳಿವಳಿಕೆ, ಹೆಣ್ಣು ಎಂದರೆ ಭೋಗದ ವಸ್ತು ಎಂಬ ತಿಳಿವಳಿಕೆ ಇದರಿಂದಲೇ ಹುಟ್ಟುತ್ತದೆ. ಇದು ಕುಸಂಸ್ಕೃತಿ ಮತ್ತು ಅನೈತಿಕವಾದದ್ದು. ಇದು ಕೇವಲ ಜ್ಞಾನದ ಪ್ರಶ್ನೆಯಲ್ಲ. ಗಂಡು ಮತ್ತು ಹೆಣ್ಣಿನ ನಡುವೆ ಸಹಜ ಮತ್ತು ಸಮಾನ ಸಂಬಂಧಗಳನ್ನು ಬೆಳೆಸುವ ಕ್ರಮಗಳಲ್ಲಿ ಒಂದು. ಇದನ್ನು ವಿರೋಧಿಸುವುದೇ ಅನೈತಿಕತೆ ಮತ್ತು ಕುಸಂಸ್ಕೃತಿ.

ಆದರೆ ಇಷ್ಟೆಲ್ಲಾ ಹೇಳಿದ ಮೇಲೂ ಅತ್ಯಗತ್ಯವಾಗಿರುವ ಆರೋಗ್ಯಕರ ಲೈಂಗಿಕ ಶಿಕ್ಷಣವನ್ನು ಯಾವುದೇ ಅನಾರೋಗ್ಯಕರ ಪರಿಣಾಮ ಬೀರದಂತೆ ನೀಡುವುದು ಸುಲಭವೇನಲ್ಲ. ಅದರಲ್ಲೂ ಒಂದು ಏಡ್ಸ್ ಮಾರುಕಟ್ಟೆ ಪ್ರಾಯೋಜಿತ ಮತ್ತು ಗಂಡು ಹೆಣ್ಣಿನ ಸಮಾನತೆಯ ಬಗ್ಗೆ ಸಂವೇದನಾರಹಿತ ಮತ್ತು ಪ್ರತಿಗಾಮಿ ಆಲೋಚನೆಗಳುಳ್ಳ ಸರ್ಕಾರದ ಯೋಜನೆ ಮತ್ತು ಪಠ್ಯಗಳು ಪ್ರಶ್ನಾರ್ಹವೇ ಆಗಿರುತ್ತವೆ. ಅದರಲ್ಲೂ ಪ್ರಸ್ತುತ ಪಠ್ಯ ಮತ್ತು ಅದರ ಮಾದರಿ ಉಪಕಾರಕ್ಕಿಂತ ಅಪಕಾರ ಮಾಡುವುದೇ ಹೆಚ್ಚು. ಒಂದು ಗ್ರಾಮೀಣ ಅಥವಾ ದುರ್ಗಮ ಶಾಲಾ ಕೊಠಡಿಯ ಸಂದರ್ಭದಲ್ಲಿ ಅಷ್ಟೇನೂ ಆರೋಗ್ಯಕರ ಮನೋಭಾವ ಇಲ್ಲದ ಶಿಕ್ಷಕರುಗಳ ಕೈಯಲ್ಲಿ ಇದರ ದುರ್ಬಳಕೆ ಊಹಿಸುವುದು ಸುಲಭ. ಆದರೆ ಹಾಗಂತ ಈ ಬಗೆಯ ಶಿಕ್ಷಣವೇ ರದ್ದಾಗಬಾರದು.

ಆದ್ದರಿಂದಲೇ ಲೈಂಗಿಕ ಶಿಕ್ಷಣ ಬೇಕು. ಆದರೆ ಈ ರೂಪದಲ್ಲಲ್ಲ, ಬದಲಿಗೆ ಆರೋಗ್ಯಕರ ಧೋರಣೆ ಮತ್ತು ವೈಜ್ಞಾನಿಕ ಮನೋಭಾವವುಳ್ಳ ಶಿಕ್ಷಣ ತಜ್ಞರು, ಬಾಲಮನಶಾಸ್ತ್ರಜ್ಞರು, ವೈದ್ಯರುಗಳು ಅಂಥಾ ಪಠ್ಯಗಳನ್ನು ಸಿದ್ಧಪಡಿಸಬೇಕೆ ವಿನಃ ಕಂಪನಿಗಳ ಮಾರುಕಟ್ಟೆ ಪ್ರಾಯೋಜಕರ ಮಾರ್ಗದರ್ಶನದಲ್ಲಿ ಇಂಥ ಪಠ್ಯಗಳು ಸಿದ್ಧವಾಗಬಾರದು. ಯಾವ ಕಾರಣಕ್ಕೂ, ತಾರತಮ್ಯ ಸಿದ್ಧಾಂತವನ್ನೇ ಉಸಿರಾಡುವ ಸಂಸ್ಕೃತಿಹೀನರು ಮತ್ತು ಯಾವುದೇ ಧಾರ್ಮಿಕ ಮೂಲಭೂತವಾದಿಗಳು ಈ ವಿಷಯದಲ್ಲಿ ಮೂಗು ತೂರಿಸಲು ಬಿಡಬಾರದು. ●

No Comments

"ಲಾಟರಿ ನಿಷೇಧಕ್ಕೆ ತಡೆಯಾಜ್ಞೆ ತೆರವುಗೊಳಿಸಲು ಹೈಕೋರ್ಟಿನ ರಜಾ ಪೀಠದ ಮುಂದೆ ಸರ್ಕಾರದ ಮೇಲ್ಮನವಿ."

- ಪತ್ರಿಕಾ ವರದಿ



"ಉಪಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಮತ್ತು ಶಾಸಕಿ ಶೋಭಾ ಕರಂದ್ಲಾಜೆ ಸಹ ಎರಡನೇ ಮದುವೆಯಾಗಿದ್ದಾರೆ. ಆದ್ದರಿಂದ ನಾವು ಮದುವೆಯಾಗೋಣ, ನಮ್ಮನ್ನು ಯಡಿಯೂರಪ್ಪ ರಕ್ಷಿಸುತ್ತಾರೆ ಎಂದು ಶಾಸಕ ರೇಣುಕಾಚಾರ್ಯ ಪೀಡಿಸುತ್ತಿದ್ದರು."

-ನರ್ಸ್ ಜಯಲಕ್ಷ್ಮಿ



"ಕಾಂಗ್ರೆಸ್ ಒಂಥರಾ ಪ್ರಾಣಿ ಸಂಗ್ರಹಾಲಯವಿದ್ದಂತೆ. ಅಲ್ಲಿಂದ ಆದಷ್ಟು ಬೇಗ ಹೊರಬರದಿದ್ದರೆ ವಿನಾಶ ಖಂಡಿತಾ."

ಆಯನೂರು ಮಂಜುನಾಥ

"ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬೇಡ. ಜಮೀನು ಕಬಳಿಸಿರುವ ದೊಡ್ಡ ಕುಳಗಳ ಮೇಲೆ ಕ್ರಮ ತೆಗೆದುಕೊಳ್ಳಿ."

ಎ. ಟಿ. ರಾಮಸ್ವಾಮಿ

"ಬೆಂಗಳೂರಿನ ತಮಿಳರನ್ನೆಲ್ಲಾ ಅವರ ತವರೂರಾದ ತಮಿಳುನಾಡಿಗೆ ಕಳಿಸಿಬಿಡಬೇಕು."

- ಕೋಳದ ಮಠದ ಶಾಂತವೀರಸ್ವಾಮಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಬಿಜೆಪಿ ಶಾಸಕ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂಬ ಬಗ್ಗೆ ನಮಗೆ ಮಾಹಿತಿ ಬಂದಿಲ್ಲ."

- ಎಚ್. ಡಿ. ಕುಮಾರಸ್ವಾಮಿ

"ಈ ಬಾರಿ ಮಾನ್ಸೂನ್ ಮಳೆ ಶೆ.95 ರಷ್ಟು ಆಗಲಿದೆ."

- ಹವಾಮಾನ ಇಲಾಖೆ


"ನಮ್ಮ ಸಮ್ಮಿಶ್ರ ಸರ್ಕಾರದ ಕಾರ್ಯಕ್ರಮಗಳಿಗೆ ಬಸವ ತತ್ವವೇ ಆಧಾರ."

- ಎಚ್. ಡಿ. ಕುಮಾರಸ್ವಾಮಿ

"ಅಭಿ ಮತ್ತು ಐಶ್‌ಗೆ ಒಂದು ವರ್ಷದೊಳಗೆ ಒಂದು ಮಗು ಹುಟ್ಟುತ್ತದೆ ಮತ್ತು ಅದೂ ಹೆಣ್ಣು ಮಗುವಾಗಿರುತ್ತದೆ."

- ಜ್ಯೋತಿಷಿ ಚಂದ್ರಶೇಖರ

ಯಡ್ಡಿ ಪ್ರಸಂಗಗಳು



"ಸಮ್ಮಿಶ್ರ ಸರ್ಕಾರದ ಅವಧಿ ಮುಗಿದು ಮುಂದಿನ ಚುನಾವಣೆಯಲ್ಲಿ ಬಿಜೆಪಿ ಸಂಪೂರ್ಣ ಬಹುಮತ ಪಡೆದರೂ ಜೆಡಿಎಸ್‌ನೊಂದಿಗೆ ಸೇರಿಯೇ ಬಿಜೆಪಿ ಸರ್ಕಾರ ರಚಿಸಲಿದೆ."


"ಪ್ರತಿನಿತ್ಯ ಬೊಕ್ಕಸಕ್ಕೆ ಹಣ ಹರಿದು ಬರುತ್ತಿದೆ. ಹಾಗಿರುವಾಗ ಉಪ ಮುಖ್ಯಮಂತ್ರಿಯಾಗಿ ಹೊಸ ಯೋಜನೆಗಳನ್ನು ಘೋಷಿಸುವ ಅಧಿಕಾರ ನನಗಿಲ್ಲವೇ?"

ವಾರದ ಅವಿವೇಕ

"ದೇಶದಲ್ಲಿ ಯಜ್ಞಯಾಗಾದಿಗಳಿಗೆ ಸಾಕಷ್ಟು ಮಹತ್ವವಿದೆ. ಬರಗಾಲ, ಕಾವೇರಿ ಮೊದಲಾದ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶದಿಂದ ಸಹಸ್ರ ಚಂಡಿಕಾ ಯಾಗವನ್ನು ಹಮ್ಮಿಕೊಳ್ಳಲಾಗಿದೆ."

- ಜಿ. ಪರಮೇಶ್ವರ್, ಮಾಜಿ ಮಂತ್ರಿ

ವಾರದ ವಿಷಾದ



"ನನ್ನಿಂದ ಅಧಿಕಾರ ವ್ಯಾಮೋಹ ತೊರೆಯಲಾಗಲಿಲ್ಲ, ಆದ್ದರಿಂದಲೇ ಜೀವನದಲ್ಲಿ ಹಲವಾರು ಬಾರಿ ರಾಜಿ ಮಾಡಿಕೊಂಡಿದ್ದೇನೆ. ಈ ಮಾತನ್ನು ಈಗ ನಾಚಿಕೆಯಿಂದ ಹೇಳುತ್ತಿದ್ದೇನೆ."

- ಎಂ. ಪಿ. ಪ್ರಕಾಶ್

ವಾರದ ವಿವೇಕ

"ವೈಜ್ಞಾನಿಕ ಮತ್ತು ಬಾಲ ಮನಸ್ಸಿನ ಮೇಲೆ ಅನಾರೋಗ್ಯಕರ ಪರಿಣಾಮ ಬೀರದ ಲೈಂಗಿಕ ಶಿಕ್ಷಣಕ್ಕಿಂತ ಬೇರೆ ಪರ್ಯಾಯವಿಲ್ಲ"

- ಪತ್ರಿಕೆಯೊಂದರ ಶೀರ್ಷಿಕೆ

ಮಾಧ್ಯಮಗಳಿಗೆ ಹಿಡಿದಿರುವ ಸಮೂಹ ಸನ್ನಿ

"ಮೇಡಂ, ಇನ್ನೆರಡು ದಿನಗಳಲ್ಲಿ ಅಭಿಷೇಕ್ ಬಚ್ಚನ್ ುತ್ತು ಐಶ್ವರ್ಯ ರೈ ಮದುವೆಯಾಗುತ್ತಿದ್ದಾರೆ. ಇದರಿಂದ ಮ್ಮ ಮೇಲೆ ಏನು ಎಫೆಕ್ಟ್ ಆಗಲಿದೆ?" ಇಂತಹದ್ದೊಂದು ಶ್ನೆಯನ್ನು ಇಂಗ್ಲಿಷ್ ಪತ್ರಿಕೆಯ ವರದಿಗಾರ ನನ್ನ ತಂಗಿ ೇಬಿ (ಕವಿತಾ)ಗೆ ಕೇಳಿದಾಗ ಆಕೆಗೆ ಶಾಕ್!

"ಈ ಮದುವೆಯಿಂದ ನನ್ನ ಮೇಲೆ ತುಂಬಾ ಎಫೆಕ್ಟ್ ಗಿದೆ. ನನಗೆ ಅಭಿಷೇಕ್ ಬಚ್ಚನ್ ಬಗ್ಗೆ ತುಂಬಾ ಪ್ರೀತಿ. ದರೆ ಅದನ್ನು ಅರಿಯದ ಆತ ಹೋಗಿ ನಟರಾಜ ನ್ಸಿಲ್‌ನಂತಿರುವ ಐಶ್ವರ್ಯ ರೈಳನ್ನು ಮದುವೆಯಾಗು ದ್ದಾನೆ ಅಂತ ನನಗೆ ತುಂಬಾ ದುಃಖ ಆಗುತ್ತಿದೆ. ಗೇನಾದರೂ ಆ ಐಶ್ವರ್ಯ ರೈ ನನ್ನ ಮುಂದಿದ್ದರೆ ಾನು ಅವಳ ಮುಖವನ್ನೆಲ್ಲ ಪರಚಿ, ಅವಳ ಕಣ್ಣುಗಳನ್ನೆಲ್ಲ ತ್ತುಹಾಕುತ್ತಿದ್ದೆ ಅಂತ ಹೇಳುತ್ತೇನೆ ಎಂದು ಆ ವರದಿಗಾರ ಾವಿಸಿದನೋ ಏನೋ" ಎಂದು ನಕ್ಕಳು ಬೇಬಿ.

"ಹೋಗ್ಲಿ ಅವನಿಗೆ ಕೊನೆಗೆ ಏನಂದೆ?" ಎಂದು ಾನು ಕೇಳಿದೆ.

"ಅವರಿಬ್ಬರ ಮದುವೆ ನನ್ನ ಮೇಲೆ ಯಾವ ಎಫೆಕ್ಟ್ ನ್ನೂ ಮಾಡಿಲ್ಲ, ಇದು ಫೋನ್ ಅಂತ ಹೇಳಿದೆ" ಂದು ಆಕೆ ಹೇಳಿದಾಗ ನಾವಿಬ್ಬರೂ ಜೋರಾಗಿ ಗಲಾರಂಭಿಸಿದೆವು. ನಮ್ಮ ಪತ್ರಕರ್ತರಿಗೆ, ನಮ್ಮ ತ್ರಿಕೋದ್ಯಮಕ್ಕೆ ಏನಾಗಿದೆ? ನಮ್ಮ ಮಾಧ್ಯಮಗಳಿಗೆ ದ್ಯಾವ ಸಮೂಹ ಸನ್ನಿ ಹಿಡಿದಿದೆ?

ಬಾದಾಮಿಯಲ್ಲಿ ಚಿತ್ರೀಕರಣ ಮಾಡುತ್ತಿದ್ದಾಗ ೖಕಲ್‌ನಿಂದ ಬಿದ್ದು ಐಶ್ವರ್ಯ ರೈ ತನ್ನ ಕಿರುಬೆರಳಿಗೆ ಾಯ ಮಾಡಿಕೊಂಡಿದ್ದನ್ನೇ ಮುಖಪುಟ ವರದಿ ಾಡುವ (ಇಗೋ, ಇದೇ ಆ ದುಷ್ಟ ಸೈಕಲ್, ದೇ ಆ ದುರಂತ ಸಂಭವಿಸಿದ ಸ್ಥಳ ಎಂಬ ೋಟೋಗಳು ಬೇರೆ ವಿಶೇಷ ವರದಿಯೊಂದಿಗೆ!) ನ್ನಡ ಪತ್ರಿಕೆಗಳೂ ನಮ್ಮಲ್ಲಿವೆ.

ಇದಿಷ್ಟೇ ಅಲ್ಲದೆ 'ಅಭಿ-ಐಶ್' (ಈ ಜಂಟಿ ೋಡಿ ಹೆಸರನ್ನೂ ವಿದೇಶಿ ಮಾಧ್ಯಮಗಳಿಂದ ಮ್ಮವರು ಪಡೆದಿರುವ ಬಳುವಳಿ, ಇರಲಿ) ಮದುವೆ ಡೆಯಲಿದೆ ಎಂದಾಗ, ಅದ್ಯಾವುದೋ ಕಟ್ಟಡದ ಪ್ಪತ್ತನೇ ಮಹಡಿ ಏರಿ, ಅಲ್ಲಿಂದ ಟೆಂಟಿನ ಅಡಿ ುವ ಬರುಕಿನತ್ತ ಕ್ಯಾಮರಾವನ್ನು ಫೋಕಸ್ ಮಾಡಿ ರ್ಜರಿಯಾಗಿ ತಯ್ಯಾರಿಗಳು ನಡೆಯುತ್ತಿವೆ' ಎಂದು ೀ ಗಂಟೆ ವರದಿ ಮಾಡುವ ಟೀವಿ ಚಾನೆಲ್‌ಗಳು.

ಇನ್ನು ಮದುವೆ ನಡೆಯುತ್ತಿದ್ದ ಮನೆಯ ಮುಂದೆ ಗಲು, ರಾತ್ರಿಯೆನ್ನದೆ ನಿಂತು ಯಾರು ಬಂದ್ರು, ೋದ್ರು, ಯಾರು ಏನಂದ್ರು, ಮಾಡಿದ್ರು ಎನ್ನುವುದನ್ನೆಲ್ಲ ರದಿ ಮಾಡಲು ಭಿಕ್ಷುಕರಂತೆ ನಿಂತಿದ್ದ 'ವರದಿಗಾರರು'!

ಇದೆಲ್ಲಕ್ಕೂ ಕಳಶವಿಟ್ಟಂತಿತ್ತು ಟೈಮ್ಸ್ ಆಫ್ ಇಂಡಿಯಾ ತ್ರಿಕೆಯ ಧೋರಣೆ. ಈ ಮದುವೆಯ ಬಗ್ಗೆ ವಿವರವಾಗಿ ರದಿ ಮಾಡಲು ನಾಲ್ಕು ಪುಟಗಳನ್ನು ಮೀಸಲಿಟ್ಟಿದ್ದ ಾರತದ ಅತಿ ಹೆಚ್ಚು ಪ್ರಸಾರ ಸಂಖ್ಯೆಯನ್ನು ಹೊಂದಿರುವ ತ್ರಿಕೆ', ಆ ಪುಟಗಳಲ್ಲಿ ಪ್ರಕಟಿಸುವ ಜಾಹೀರಾತುಗಳಿಗೆ ಚ್ಚು ದರಗಳನ್ನು ನಿಗದಿಪಡಿಸಿತ್ತು. ಮಾತ್ರವಲ್ಲ, ಇಂತಹ ಝ್ದೂರಿ ಮದುವೆಗಳಿಂದಾಗಿ ಹೇಗೆ ಆಹ್ವಾನ ಪತ್ರಿಕೆಗಳನ್ನು ಂದ್ರಿಸುವವರಿಂದ ಹಿಡಿದು ಹೂ ಮಾರುವವರಿಗೂ ಚ್ಚು ಉದ್ಯೋಗಾವಕಾಶಗಳು ಸಿಕ್ಕಂತಾಗುತ್ತದೆ, ಅದರಿಂದ ಗೆ ನಮ್ಮ ದೇಶದ ಆರ್ಥಿಕ ಸ್ಥಿತಿ ಉದ್ಧಾರವಾಗುತ್ತದೆಂದು ದು ಸಂಪಾದಕೀಯವನ್ನೇ ಪ್ರಕಟಿಸಿತು. ಇದಕ್ಕೇ ಅಂದಿದ್ದು ್ಮ ಮಾಧ್ಯಮಗಳಿಗೆ ಯಾವುದೋ ಸಮೂಹ ಸನ್ನಿ ಿದಿರಬೇಕು ಅಂತ.

ನನಗೆ ಗಾಸಿಪ್ ಇಷ್ಟವಿಲ್ಲವೆಂದೇನಲ್ಲ ಅಥವಾ ನಾನು ತಹ ವರದಿಗಳ ಮೇಲೆ ಕಣ್ಣಾಡಿಸುವುದೇ ಇಲ್ಲ ದೂ ಅಲ್ಲ, ಆದರೆ ಇಂಥವುಗಳನ್ನು ಓದುವುದಕ್ಕೆಂದೇ ದು ನಿರ್ದಿಷ್ಟ ಜಾಗ, ಅದರೊಂದಿಗೆ ಒಂದು ಕಾರ್ಯ ತ್ತು ಹೆಚ್ಚೆಂದರೆ ಐದು ನಿಮಿಷ, ಸಮಯ ಅಷ್ಟೇ.. ತಹ ಪತ್ರಿಕೋದ್ಯಮಕ್ಕೂ, ಅದರೊಂದಿಗೆ ನಡೆಯುವ ರ್ಯಕ್ಕೂ ತುಂಬಾ ನಂಟಿದೆ ಅನ್ನಿಸುತ್ತದಲ್ಲವೇ?) ಆದರೆ ೀ ಲೂಸ್ ಮೋಷನ್‌ನಂತಾದರೆ, ಅದೇ ವ್ಯಾಧಿ ರಿಗೂ ಅಂಟಿಕೊಂಡರೆ ಏನು ಗತಿ?


ತಮಾಷೆ ಸಾಕು ಅನ್ನಿಸುತ್ತದೆ....

ಅಂದಹಾಗೆ ಈ ಆಡಂಬರದ ಮದುವೆ ನಡೆಯು ಗ, ದೇಶದಲ್ಲೇ ಪ್ರಮುಖವಾದ ಈ ಘಟನೆ ಜರುಗು ಗ, ನಮ್ಮ ರಾಜ್ಯದಲ್ಲಿ ಒಂದು ಸಣ್ಣ ಪ್ರಕರಣ ಸಂಭವಿ . ಅದರ ಬಗ್ಗೆ ಓದಿದ ವರದಿ ನನ್ನ ಮನಸ್ಸನ್ನು ಿಗೂ ಕಾಡುತ್ತಿದೆ....

ಆತ ಒಬ್ಬ ರೈತ, ಕಬ್ಬು ಬೆಳೆಗಾರ. ತನ್ನ ಜಮೀನಿನಲ್ಲಿ ಕಷ್ಟಪಟ್ಟು ಸಾಲಸೋಲ ಮಾಡಿ ಕಬ್ಬು ಬೆಳೆದಿದ್ದ ಕಬ್ಬೇನೋ ಚೆನ್ನಾಗೇ ಬೆಳೆದಿತ್ತು, ಅದನ್ನು ಕಟಾವು ಮಾಡಿ ಸಕ್ಕರೆ ಕಾರ್ಖಾನೆಗೆ ಮಾರಿದ್ದರೆ ಆತ ಮಾಡಿದ್ದ ನಲವತ್ತು ಸಾವಿರ ರೂ. ಸಾಲವನ್ನಾದರೂ ತೀರಿಸಿ ನೆಮ್ಮದಿಯಿಂದಿರ ಬಹುದಿತ್ತು.

ಆದರೆ ಈಗಾಗಲೇ ಸಾಕಷ್ಟು ಕಬ್ಬನ್ನು ಖರೀದಿಸಿದ್ದ, ತಾನು ತಯಾರಿಸಿದ ಸಕ್ಕರೆಗೇ ಖರೀದಿದಾರರಿಲ್ಲದೇ ಕಂಗಾಲಾಗಿದ್ದ ಕಾರ್ಖಾನೆ ಇವನ ಕಬ್ಬನ್ನು ಖರೀದಿಸಲು ನಿರಾಕರಿಸಿತು. ರೈತ ದಿಕ್ಕು ತೋಚದಾದ. ತಾನು ಉತ್ತಿ ಬಿತ್ತಿ ತನ್ನ ಮಕ್ಕಳಂತೆಯೇ ಪ್ರೀತಿಯಿಂದ ಬೆಳೆಸಿದ್ದ ಕಬ್ಬಿನ ಹೊಲಕ್ಕೆ ಹೋದ. ಬೇಸಿಗೆಯ ಝಳಕ್ಕೆ ಅವು ಆಗಲೇ ಒಣಗಿ ನಿಂತಿದ್ದವು. ತಾನು ಬೆಳೆಸಿದ ಕಬ್ಬಿಗೆ ಭವಿಷ್ಯವಿಲ್ಲ ವೆಂದಮೇಲೆ ತನಗೂ ಭವಿಷ್ಯವಿಲ್ಲ ಎಂದು ನಿರ್ಧರಿಸಿದ ಆತ ಒಂದು ಘೋರ ತೀರ್ಮಾನಕ್ಕೆ ಬಂದ.

ತನ್ನ ಹೊಲಕ್ಕೆ ಬೆಂಕಿಯಿಟ್ಟ ಆತ, ತನ್ನ ದೇಹಕ್ಕೂ ಅಗ್ನಿ ಸ್ಪರ್ಶ ನೀಡಿ ತನ್ನ ಕಬ್ಬಿನೊಂದಿಗೆ ಆತನೂ ಭಸ್ಮವಾದ... ಒಣಗಿದ್ದ ಕಬ್ಬೆಲ್ಲಾ ಬೂದಿಯಾದನಂತರವೇ ಆತನ ಅಳಿದುಳಿದ ದೇಹವನ್ನು ಹೊರತೆಗೆಯಲಾಯಿತು... (ಆತ್ಮಹತ್ಯೆ ಮಾಡಿಕೊಂಡ ರೈತ 65 ವರ್ಷ ವಯಸ್ಸಿನ



ರಾಮಣ್ಣ ಬಸವಂತಪ್ಪ ದುಂಡಣ್ಣವರ್. ಈತ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಬಳಂಬೀಡು ಹಳ್ಳಿಯವನು. ಆತನ ಕಬ್ಬನ್ನು ಖರೀದಿಸಲು ನಿರಾಕರಿಸಿದ್ದು ಸಂಗೂರು ಸಕ್ಕರೆ ಕಾರ್ಖಾನೆ.)

ಈ ಪ್ರಕರಣವನ್ನು ತನ್ನ 'ರಾಜ್ಯ' ಪುಟದಲ್ಲಿ ವರದಿ ಮಾಡಿದ್ದು ಒಂದೇ ಒಂದು ಪತ್ರಿಕೆ ('ದಿ ಹಿಂದೂ'). ಆದರೆ ಆ ಪತ್ರಿಕೆಯೂ ಇದನ್ನು ಒಂದು ರಾಜ್ಯ ವರದಿಯನ್ನಾಗಿ ಮಾತ್ರ ಭಾವಿಸಿ ಇದನ್ನು 'ರಾಷ್ಟ್ರ' ವರದಿಯಾಗಿ ಪರಿಗಣಿಸದೇ ಹೋಯಿತು. ನಮ್ಮ ಮಾಧ್ಯಮಗಳಿಗೆ ಹಿಡಿದಿರುವ ಸಮೂಹ ಸನ್ನಿಯ ಸೈಡ್ ಎಫೆಕ್ಟ್ ಇದಾಗಿರಬಹುದೇ?

ಇತ್ತೀಚೆಗೆ ಅರುಂಧತಿ ರಾಯ್‌ರವರ 'ದೇಶ ವಿಭಜನೆಗೊಂಡಿದೆ' ಎಂಬ ಶೀರ್ಷಿಕೆಯ ಸಂದರ್ಶನವನ್ನು ಅನುವಾದಿಸಿ ಇದೇ ಅಂಕಣದಲ್ಲಿ ನೀಡಿದ್ದೆ. ಅವರು ಹೇಳಿದ್ದು ಅಕ್ಷರಶಃ ನಿಜ. ಈ ರೈತನ ಆತ್ಮಹತ್ಯೆ ಮತ್ತು ಆದಕ್ಕೆ ದೊರಕಿದ ನಿರ್ಲಕ್ಷ್ಯವು ವಿಭಜನೆಗೊಂಡಿರುವ ನಮ್ಮ ದೇಶಕ್ಕೆ ಹಿಡಿದ ಕನ್ನಡಿಯಂತಿದೆ.

ಅಭಿಷೇಕ್-ಐಶ್ವರ್ಯ ಮದುವೆಯಲ್ಲಿ ಯಾರು ಉಂಡರು, ಯಾರು ಹೂಸಿದರು (ಯಾರಾದರೂ ಹೂಸಿದ್ದರೂ ಅದೂ ಒಂದು ಸ್ಕೂಪ್ ಆಗಿರುತ್ತಿತ್ತು) ಎಂದೆಲ್ಲಾ ವರದಿ ಮಾಡಿ ಜಾಹೀರಾತಿನ ಮೂಲಕ ಹಣ ಸಂಪಾದಿಸಿದ ಮಾಧ್ಯಮಗಳು ಪಾಪ ದುಂಡಣ್ಣವರ್‌ನಂತಹ ರೈತರ ಆತ್ಮಹತ್ಯೆಯನ್ನು ವರದಿ ಮಾಡಿ ಗಳಿಸಬೇಕಾದ್ದೇನೂ ಇಲ್ಲ. ಆತ ಮತ್ತು ಆತನಂಥವರು ಸತ್ತರೆಷ್ಟು, ಬಿಟ್ಟರೆಷ್ಟು....

ವಿಪರ್ಯಾಸದ ಸಂಗತಿ ಯಾವುದೆಂದರೆ ನಮ್ಮ ಮಾಧ್ಯಮಗಳು ಅಭಿಷೇಕ್-ಐಶ್ವರ್ಯ ಮದುವೆ ಬಗ್ಗೆ ಇಷ್ಟು ತಲೆ ಕೆಡಿಸಿಕೊಳ್ಳದಿದ್ದರೂ ಅವರು ಮದುವೆಯಾಗುತ್ತಿದ್ದರು. ಅದಕ್ಕೆ ಆಹ್ವಾನಿತರು ಬಂದು ಶುಭ ಹಾರೈಸಿ ಹೋಗುತ್ತಿದ್ದರು. ಅಕಸ್ಮಾತ್ ಪ್ರಚಾರ ಬೇಕು ಎಂದು ಬಚ್ಚನ್ ಅಥವಾ ರೈ ವಂಶದವರಿಗೆ ಅನ್ನಿಸಿದ್ದರೆ ಅವರು 'ಜೋಗಿ' ನಿರ್ದೇಶಕ ಪ್ರೇಮ್‌ನಂತೆ ತಮ್ಮ ವೈಯಕ್ತಿಕ ಸಮಾರಂಭವನ್ನೇ ಯಾವುದೋ ಮಾಧ್ಯಮಕ್ಕೆ ಮಾರಾಟ ಮಾಡಿಕೊಳ್ಳುತ್ತಿದ್ದರು. ಅದೆಲ್ಲಾ ಬದಿಗಿರಲಿ, ಈ ಮದುವೆ ಬಗ್ಗೆ ಅಷ್ಟೊಂದು ವಿವರಗಳನ್ನು ನೀಡಲಿಲ್ಲ ಎಂದು ಯಾವ ಓದುಗನೂ ಹತಾಶನಾಗುತ್ತಿರಲಿಲ್ಲ..

ಆದರೆ ಇವತ್ತು ತಮ್ಮ ದುಃಸ್ಥಿತಿಯ ಬಗ್ಗೆ ಯಾರೂ ಕ್ಯಾರೇ ಅನ್ನುತ್ತಿಲ್ಲ, ಜನರ ಮತ್ತು ಸರಕಾರದ ಗಮನ ಸೆಳೆಯುತ್ತಿಲ್ಲ ಎಂದು ಹತಾಶರಾಗಿರುವವರು ಈ ನಾಡಿನ ರೈತರು, ನೇಕಾರರು, ಸುಶಿಕ್ಷಿತ ನಿರುದ್ಯೋಗಿಗಳು, ಬಲವಂತವಾಗಿ ತಮ್ಮ ಮನೆಗಳಿಂದ ಒಕ್ಕಲೆಬ್ಬಿಸಲ್ಪಡುತ್ತಿರುವ ಆದಿವಾಸಿಗಳು, ವಿಆರ್‌ಎಸ್ ಪಡೆದು ದಿವಾಳಿಯಾಗಿರುವ ಮಧ್ಯಮವರ್ಗದವರು, ಹಲವಾರು ಯೋಜನೆಗಳಡಿ ಸರ್ಕಾರ ಮತ್ತು ಖಾಸಗಿ ಕಂಪನಿಯವರು ನೀಡುವ ಸಾಲಗಳಿಗೆ ಮರುಳಾಗಿ ತಮ್ಮ ಭೂಮಿ ಮತ್ತು ಅದರೊಂದಿಗೆ ತಮ್ಮ ಜೀವನೋಪಾಯವನ್ನೇ ಕಳೆದುಕೊಳ್ಳುತ್ತಿರುವ ಜನರು.....

ಆದರೆ ಇವತ್ತು ನಮ್ಮ ದೇಶ ಹೇಗೆ ಛಿದ್ರಗೊಂಡಿದೆಯೆಂದರೆ ನಮ್ಮ ಮಾಧ್ಯಮಗಳು ಮತ್ತು ಮೇಲ್ಮಧ್ಯಮ ವರ್ಗದವರಿಗೆ ಕಬ್ಬಿನ ಬೆಳೆಗಾರರು ಸತ್ತರೆ ಏನಂತೆ? ಸಕ್ಕರೆ ಬೆಲೆ ಹೆಚ್ಚಾಗದಿದ್ದರೆ ಸಾಕು. ನೇಕಾರರ ಸಮುದಾಯವೇ ನಿರ್ನಾಮವಾದರೇನಂತೆ ಫಾರಿನ್ ಕಂಪನಿಗಳ ಬ್ರಾಂಡೆಡ್ ಬಟ್ಟೆಗಳು ಸಿಕ್ಕರೆ ಸಾಕು. ಸುಶಿಕ್ಷಿತ ನಿರುದ್ಯೋಗಿಗಳಿಗೆ ವಾಚ್‌ಮನ್ ಕೆಲಸಗಳಿವೆ, ನಮ್ಮ ಮನೆಯ ಪಾತ್ರೆ ತಿಕ್ಕುವ ಅವಕಾಶವಂತೂ ಇದ್ದೇ ಇರುತ್ತದೆಂಬ ನೆಮ್ಮದಿ.... ಟೊಮಾಟೋ ಬೆಳೆದ ರೈತನಿಗೆ ಸೂಕ್ತ ದರ ಸಿಗದಿದ್ದರೇನಂತೆ ನಾವು ಕೆಚಪ್ ಮತ್ತು ಟೊಮಾಟೋ ಗೊಜ್ಜು ಮಾಡಿಕೊಳ್ಳಬಹುದಲ್ಲ ಎಂಬ ತೃಪ್ತಿ...

ಈ ಸಾಲಿನ ಬಜೆಟ್‌ಅನ್ನು ಮಂಡಿಸುವಾಗ ಕೇಂದ್ರ ಹಣಕಾಸು ಮಂತ್ರಿ ಪಿ. ಚಿದಂಬರಂರವರು ನೊಬೆಲ್ ಪ್ರಶಸ್ತಿ ಪಡೆದಿರುವ ಮೊಹಮದ್ ಯೂನಸ್‌ರವರ ಸಾಲೊಂದನ್ನು ಉಲ್ಲೇಖಿಸಿ, ತಾವು ಹೇಗೆ ಯೂನಸ್‌ರವರಂತೆ ಜನಸಾಮಾನ್ಯರ ಪರವಾದ ಬಜೆಟ್‌ಅನ್ನು ನೀಡಿದ್ದೇನೆ ಎಂದು ಹೇಳಿದರು. ಅದಕ್ಕೆಂದು ಅವರು ಉಲ್ಲೇಖಿಸಿದ ಸಾಲು "growth for growth's sake (ಅಭಿವೃದ್ಧಿಗಾಗಿಯೇ ಅಭಿವೃದ್ಧಿ) ಎಂಬುದೇ ನಮ್ಮ ಸಿದ್ಧಾಂತವಾಗಬೇಕು" ಎಂಬುದು.


ಅಂದರೆ ಚಿದಂಬರಂ ಪ್ರಕಾರ ಅಭಿವೃದ್ಧಿ ಮುಖ್ಯವೇ ಹೊರತು, ಯಾರ ಅಭಿವೃದ್ಧಿ ಎಂಬುದಲ್ಲ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ದುಂಡಣ್ಣವರ್‌ರಂತೆಯೇ ಲಕ್ಷಾಂತರ ರೈತರು ಆತ್ಮಹತ್ಯೆ ಮಾಡಿಕೊಂಡರೂ ಪರವಾಗಿಲ್ಲ, ನಾರಾಯಣ ಮೂರ್ತಿಗಳು ಹಾಗೂ ರಿಲಯನ್ಸ್‌ನ ಅಂಬಾನಿ ಗಳು ಕೋಟ್ಯಂತರ ರೂಪಾಯಿಗಳ ಲಾಭ ಮಾಡಿಕೊಂಡರೆ, 'ಅಭಿವೃದ್ಧಿ'ಯ ಸೂಚ್ಯಾಂಕ ಹೆಚ್ಚಾಗಿ ದೇಶವು ಅಭಿವೃದ್ಧಿಗೊಳ್ಳುತ್ತದೆ!

ಚಿದಂಬರಂ ಮತ್ತು ಅವರು ಪ್ರತಿಪಾದಿಸುತ್ತಿರುವ ಮತ್ತು ಪ್ರತಿನಿಧಿಸುತ್ತಿರುವ ಆರ್ಥಿಕ ಸಿದ್ಧಾಂತದ ಬಗ್ಗೆ ಪಿ. ಸಾಯಿನಾಥ್‌ರವರು (ನಮ್ಮ ದೇಶದ ಗ್ರಾಮೀಣ ಪ್ರದೇಶ ಮತ್ತು ಅದರಲ್ಲಿನ ಜನರ ಬದುಕಿನ ಬಗ್ಗೆ ಅಪಾರ ಕಾಳಜಿಯಿಂದ ಬರೆಯುತ್ತಿರುವ ಏಕೈಕ ಪತ್ರಕರ್ತ ಇವರು) ಒಂದು ಸಾಲಿನ ವಿಮರ್ಶೆ ನೀಡಿದ್ದರು. ಅದು ಹೀಗಿತ್ತು:

"ಅಭಿವೃದ್ಧಿಗಾಗಿ ಅಭಿವೃದ್ಧಿ ಎಂಬುದು ಕ್ಯಾನ್ಸರ್ ಸೆಲ್‌ನ ಸಿದ್ಧಾಂತ".

ಇತರರ್ಥ ಇಷ್ಟೇ; ತಾನು ಎಂತಹ ಅನಾಹುತಕ್ಕೆ ಕಾರಣವಾಗಲಿದ್ದೇನೆ ಎಂದು ಅರಿಯದ ಕ್ಯಾನ್ಸರ್ ಸೆಲ್ ಅಭಿವೃದ್ಧಿಗಾಗಿ ಅಭಿವೃದ್ಧಿ ಸಿದ್ಧಾಂತವನ್ನು ಅನುಸರಿಸುತ್ತದೆ. ಚಿದಂಬರಂ ಮತ್ತು ಅವರಂತಹವರು ಆ ಕ್ಯಾನ್ಸರ್ ಸೆಲ್‌ನ ಸಿದ್ಧಾಂತವನ್ನೇ ಅನುಸರಿಸುತ್ತಿದ್ದಾರೆ. ಆ ಕ್ಯಾನ್ಸರ್ ನಮ್ಮ ಮಾಧ್ಯಮಗಳಿಗೂ ಹರಡಿದೆ....

* * * * * * * * * *



ಇವತ್ತು ಯಾರಾದರೂ 'ಬ್ರಾಹ್ಮಣರಾಗಿಯೂ ರಿಕ್ಷಾ ತುಳೀತಿದೀಯಲ್ಲಾ' ಎಂಬ ಪ್ರಶ್ನೆ ಕೇಳಿದರೆ, ಅಂತಹ ಪ್ರಶ್ನೆ ಕೇಳಿದವರ ಬಗ್ಗೆ ನಿಮಗೇನನ್ನಿಸುತ್ತೆ?

ಪ್ರಶ್ನೆ ಕೇಳಿದವರಲ್ಲಿ ಬ್ರಾಹ್ಮಣ ಜಾತಿ ಉನ್ನತವಾದದ್ದು, ರಿಕ್ಷಾ ತುಳಿಯುವ ಕಾಯಕ ಕೀಳು ಮಟ್ಟದ್ದು ಎಂಬ ಭಾವನೆ ಇದೆ ಎಂದಲ್ಲವೇ? ಇಂತಹ ಒಂದು ಪ್ರಶ್ನೆಯನ್ನು ಕೇಳುವವಳು ಎಸ್.ಎಲ್. ಭೈರಪ್ಪನವರ ಕಾದಂಬರಿ 'ಆವರಣ'ದ ನಾಯಕಿ ಲಕ್ಷ್ಮಿ. ಆಕೆ ತನ್ನ ಸೃಷ್ಟಿಕರ್ತ ಭೈರಪ್ಪನವರ ಮನಸ್ಸಿನ ಭಾವನೆಯನ್ನೇ ವ್ಯಕ್ತಪಡಿಸುತ್ತಿದ್ದಾಳೆ ಎಂಬುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ.



ಕಂಡಹಾಗೆ

ಅಂದಹಾಗೆ, ಭೈರಪ್ಪನವರ ಪ್ರಕಾರ ಲಕ್ಷ್ಮಿ ಅಪಾರ ಪ್ರತಿಭೆಯುಳ್ಳ ಇತಿಹಾಸಗಾರ್ತಿ. ತನ್ನ ಅಪ್ಪ ಬರೆದಿದ್ದ ಪುಸ್ತಕಗಳ ಬಗೆಗಿನ ಟಿಪ್ಪಣಿಗಳು ಮತ್ತು ಬಿಡಿ ಇತಿಹಾಸಕಾರರು ಬರೆದಿರುವ ಪುಸ್ತಕಗಳನ್ನು ಮಾತ್ರ ಓದಿದ ಈಕೆ ಎಂತಹ ಪ್ರಖಾಂಡ ಪಂಡಿತೆಯೆಂದರೆ ರಿಕ್ಷಾ ತುಳಿಯುತ್ತಿರುವ ಬ್ರಾಹ್ಮಣ ಹೇಗೆ ತಮ್ಮ ಜಾತಿಯವರೇ ಭಾರತದಲ್ಲಿ ಹಿಂದೂ ಧರ್ಮವನ್ನು ಉಳಿಸಿದರು ಎಂದು ಐದಾರು ವಾಕ್ಯಗಳಲ್ಲಿ ವಿವರಿಸಿದ ನಂತರ, ಲಕ್ಷ್ಮಿ "ಇಷ್ಟೆಲ್ಲ ತಿಳಿದಿರುವ ನೀನು ಕಾಶಿಯ ಇತಿಹಾಸವನ್ನೂ ಚೆನ್ನಾಗಿ ತಿಳಿದಿರಬೇಕು" ಎಂದು ಮೆಚ್ಚುಗೆ ಸೂಚಿಸುತ್ತಾಳೆ.

ಹೀಗೆ ಜಾತಿ ಪೂರ್ವಗ್ರಹಗಳನ್ನೇ ಹೊಂದಿರುವವರನ್ನು ಇತಿಹಾಸ ತಜ್ಞ ಎಂದು ಭಾವಿಸುವವರು ಲಕ್ಷ್ಮಿ ಬಿಟ್ಟರೆ ಇನ್ನೊಬ್ಬರು ಇರಲಿಕ್ಕಿಲ್ಲ. ಹಾಗೆಯೇ ಈ ಪುಸ್ತಕವನ್ನು ಓದಿದ ನಂತರ ಭೈರಪ್ಪನವರೂ ಲಕ್ಷ್ಮಿ ಲೆವೆಲ್‌ನ ಇತಿಹಾಸಕಾರರೇ ಎಂಬುದರ ಬಗ್ಗೆಯೂ ಯಾವ ಅನುಮಾನಗಳೂ ಉಳಿಯುವುದಿಲ್ಲ.

ಇಂತಹದ್ದೇ ಹಲವಾರು ಪ್ರಹಸನಗಳು ಕಾದಂಬರಿಯ ಉದ್ದಕ್ಕೂ ನಡೆಯುತ್ತದೆ. ಉದಾಹರಣೆಗೆ ಹಂಪಿಯ ಮೇಲೆ ದಂಡೆತ್ತಿ ಬಂದ ಮುಸಲ್ಮಾನರೊಂದಿಗೆ ಶೈವರೂ ಕೈ ಜೋಡಿಸಿ ವಿಷ್ಣುವಿನ ದೇಗುಲಗಳನ್ನು ನಾಶ ಮಾಡಿದರು ಎಂಬ ಪ್ರಗತಿಪರ ಇತಿಹಾಸಕಾರರ ಅಭಿಪ್ರಾಯವನ್ನು ಅಲ್ಲಗೆಳೆಯುತ್ತಾ ಅಲ್ಲಿನ ಶಿವ ದೇಗುಲಗಳೂ ನಾಶವಾಗಿವೆ ಎಂದು ಲಕ್ಷ್ಮಿ/ಭೈರಪ್ಪ ಹೇಳುತ್ತಾರೆ. ಅಷ್ಟೇ ಅಲ್ಲದೆ, ಹಂಪೆಯ ವಿರೂಪಾಕ್ಷ ದೇವಾಲಯ ಮಾತ್ರ ಯಾಕೆ ಈ ದಾಳಿಯಲ್ಲಿ ಉಳಿದುಕೊಂಡಿತು ಎಂಬುದಕ್ಕೆ ಅವರಿಬ್ಬರೂ ನೀಡುವ ಉತ್ತರ: "ಹಂಪಿಯ ಮೂಲ ದೈವವನ್ನು ಉಳಿಸಿಕೊಳ್ಳಲು ಅಲ್ಲಿನ ಜನ ಒಗ್ಗಟ್ಟಾಗಿ ಮುಸ್ಲಿಮರ ಸೇನೆಯ ವಿರುದ್ಧ ನಿಂತದ್ದು ಕಾರಣವಾಗಿರಬಹುದು." ಅಂದರೆ, ಶಿವನ ದೇವಾಲಯಗಳೂ ನಾಶವಾಗಿದ್ದವು (ಅವು ಯಾವಾಗ, ಯಾರಿಂದ ನಾಶಗೊಂಡವು ಎಂಬುದರ ಬಗ್ಗೆ ಮೌನ ವಹಿಸುತ್ತಾ) ಎಂದು ಹೇಳುವುದಕ್ಕೆ ಜಾರ್ಜ್ ಮೈಕಲ್ ಮತ್ತು ಫಿಲಿಪ್ ಬಿ. ವಾಗ್ನರ್ ಎಂಬುವವರ ಪುಸ್ತಕವನ್ನು ಉಲ್ಲೇಖಿಸುತ್ತಾರೆ. ಆದರೆ ಅಲ್ಲಿನ ಜನರ ಒಗ್ಗಟ್ಟಾಗಿ ರಕ್ಷಿಸಿದರು ಎಂಬುದಕ್ಕೆ ಮಾತ್ರ ಯಾವ ಪುರಾವೆಗಳನ್ನೂ ನೀಡದೆ "ಇರಬಹುದು" ಎಂಬ ಘನ 'ಸಂಶೋಧನೆ'ಯನ್ನು ಲಕ್ಷ್ಮಿ/ ಭೈರಪ್ಪ ಮಂಡಿಸುತ್ತಾರೆ.

ಬಾಬ್ರಿ ಮಸೀದಿ ಎಂದು ಬರೆಯಲು ಭೈರಪ್ಪನವರಿಗೆ ಮನಸ್ಸು ಬಾರದೇ ಅದನ್ನು ರಾಮಜನ್ಮಭೂಮಿ ಮಸೀದಿ ಎಂದು ಕರೆಯುತ್ತಾರೆ. ಅಷ್ಟೇ ಅಲ್ಲ ಬಾಬ್ರಿ ಮಸೀದಿಯನ್ನು ನಾಶಗೊಳಿಸಿದ ಸಂಘ ಪರಿವಾರದ ವಿರುದ್ಧ ವಿಚಾರಣೆ ನಡೆಸುತ್ತಿರುವ ಲಿಬರ್‌ಹಾನ್ ಕಮೀಷನ ಅನ್ನು ಒಂದು ನಾಟಕದ ಪ್ರಸಂಗವಾಗಿ ರೂಪಿಸಿ ಲೇವಡಿ ಮಾಡುತ್ತಾರೆ.

ಕುರಾನ್ ಬಗ್ಗೆ ವ್ಯಾಖ್ಯಾನಿಸುತ್ತಾ 'ಮುಸಲ್ಮಾನನು ಮುಸಲ್ಮಾನನಲ್ಲದವನನ್ನು ಕೊಂದರೆ ಅದು ಅಪರಾಧವಲ್ಲ' ಎಂದು ಹೇಳುತ್ತಾರೆಯೇ ಹೊರತು ತಮ್ಮ ಮೆಚ್ಚುಗೆಯ ಮನುಸ್ಮೃತಿಯಲ್ಲೂ 'ಬ್ರಾಹ್ಮಣನು ಬ್ರಾಹ್ಮಣನಲ್ಲದವನನ್ನು ಕೊಂದರೆ ಅದು ಅಪರಾಧವಲ್ಲ' ಎಂಬುದರ ಬಗ್ಗೆ ಲಕ್ಷ್ಮಿ/ಭೈರಪ್ಪ ಜಾಣ ಕುರುಡನ್ನು ಪ್ರದರ್ಶಿಸುತ್ತಾರೆ.


ಇದು ಬರೀ ಜಾಣ ಕುರುಡುತನವಾಗಿದ್ದರೆ ಸಮಸ್ಯೆ ಇರಲಿಲ್ಲ. ಆದರೆ ಅಸಮಾನತೆಯನ್ನು, ಅನ್ಯಾಯವನ್ನು ಮತ್ತು ಶ್ರೇಣೀಕೃತ ವ್ಯವಸ್ಥೆ (ಇದನ್ನೇ ಹಿಂದೂ 'ಧರ್ಮ' ಎಂದು ಕರೆಯುತ್ತಾರೆ)

(12ನೇ ಪುಟಕ್ಕೆ)

ಬಸವಣ್ಣ ಮಾದಿಗನೇ..! ಈಗ್ಯಾಕೆ ಈ ಚರ್ಚೆ ಅಂದರೆ.....

ಬಸವಣ್ಣನ ಜಾತಿ ಮೂಲದ ಬಗ್ಗೆ ಡಾ. ಬಂಜಗೆರೆ ಜಯಪ್ರಕಾಶ್ ಬರೆದಿರುವ 'ಆನು ದೇವಾ ಹೊರಗಣವನು' ಎಂಬ ಸಂಶೋಧನಾ ಕೃತಿ ಎಬ್ಬಿಸಿರುವ ವಿವಾದ ರಾಜ್ಯಾದ್ಯಂತ ವಿಭಿನ್ನ ಪ್ರತಿಕ್ರಿಯೆಗಳನ್ನು ಹುಟ್ಟುಹಾಕಿದೆ.


ನಿರೀಕ್ಷಿಸಿದಂತೆ ಡಾ. ಎಂ. ಚಿದಾನಂದಮೂರ್ತಿ, ಮಾತೆ ಮಹಾದೇವಿ, ಬಿಜೆಪಿ ಶಾಸಕ ತೋಂಟದಾರ್ಯ ಮುಂತಾದವರು 'ಬಸವಣ್ಣ ಶೈವ ಬ್ರಾಹ್ಮಣನಾಗಿದ್ದ' ಎಂಬ ತಮ್ಮ ಹಳೆ ವಾದವನ್ನೇ ಮುಂದಿಟ್ಟಿದ್ದಾರೆ. ಆದರೆ ಜಯಪ್ರಕಾಶರ ನಿಲುವು, ವಿಶ್ಲೇಷಣೆಗಳನ್ನು ಒಂದು ಚರಿತ್ರೆ, ಸಂಸ್ಕೃತಿ ಅಧ್ಯಯನಗಳಿಗೆ ಬೇಕಾದ ಸಂಶೋಧನಾತ್ಮಕ ಮಾನದಂಡಗಳು ಅವರ ಪ್ರತಿಕ್ರಿಯೆಯಲ್ಲಿ ಕಾಣಸಿಗುತ್ತಿಲ್ಲ. ಅತ್ತ ಗುಲ್ಬರ್ಗಾದಲ್ಲಿ ನಾರಾಯಣಗೌಡನ ಕರ್ನಾಟಕ ರಕ್ಷಣಾ ವೇದಿಕೆಯವರು ಒಂದು ಮೆರವಣಿಗೆ ತೆಗೆದು 'ಆನು ದೇವಾ' ನಿಷೇಧಿಸುವಂತೆಯೂ ಜಯಪ್ರಕಾಶರನ್ನು ಬಂಧಿಸಬೇಕೆಂತಲೂ ಚೀರಿಕೊಂಡಿದ್ದಾರೆ. ಇದೊಂದು ದಷ್ಟರ ಗುಂಪಾಗಿದ್ದು ಅವರ ಪ್ರತಿಕ್ರಿಯೆಗೆ ಅಷ್ಟು ಮಹತ್ವ ನೀಡಬೇಕಿಲ್ಲ.



ಕೆಲವು ತೆಳು ಚಿಂತಕರು, ಸಾಹಿತಿ ಬುದ್ಧಿಜೀವಿಗಳಂತೂ 'ಈಗ್ಯಾಕೆ ಈ ಚರ್ಚೆ? ಬಸವಣ್ಣ ಯಾವ ಜಾತಿಯವನಾದರೇನು, ಅವನ ದರ್ಶನ, ಕಾಣ್ಕೆಗಳು ತಾನೇ ನಮಗೆ ಮುಖ್ಯ? ಅಂತಾ ಬಸವಣ್ಣನನ್ನು ಯಾವುದೋ ಒಂದು ಜಾತಿಗೆ ಸೀಮಿತ ಮಾಡಕೂಡದು' ಎಂದು ಹೇಳುತ್ತಿದ್ದಾರೆ. ಅಂತವರು ಬಸವಣ್ಣ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದ ಎಂಬುದನ್ನು ವಿವೇಚನೆಯಿಲ್ಲದೆ ಒಪ್ಪಿಕೊಳ್ಳುವ ಮೂಲಕ ಹಾಗೂ ಅದನ್ನೇ ಪ್ರತಿಪಾದಿಸುವ ಮೂಲಕ ತಾವು ಈಗ ಯಾವುದು ಆಗಬಾರದೆನ್ನುತ್ತಿದ್ದಾರೋ ಅದನ್ನೇ ಪ್ರತಿಪಾದಿಸಿದಂತಾಗುತ್ತಿಲ್ಲವೆ! ಬಿ.ಟಿ. ಲಲಿತಾನಾಯಕ್ ತರದವರು ಇದನ್ನು ಯೋಚಿಸಲಿ. ಈ ಮಧ್ಯೆ 'ಲಂಕೇಶ್' ಪ್ರಖ್ಯಾತ ಸಂಶೋಧಕ ಹಾಗೂ ಬರಹಗಾರರಾದ ಮೈಸೂರಿನ ಡಾ. ಎಲ್. ಬಸವರಾಜುರವರನ್ನು ಸಂಪರ್ಕಿಸಿ 'ಆನು ದೇವಾ' ಬಗ್ಗೆ ಪ್ರತಿಕ್ರಿಯೆ ಕೇಳಿದಾಗ 'ಅವರು ಈ ವಿಚಾರದ ಬಗ್ಗೆ ಮೌನ ವಹಿಸಬಯಸುತ್ತಿದ್ದಾರೆಂಬ' ಉತ್ತರ ಅವರ ಮನೆಯವರಿಂದ ಸಿಕ್ಕಿದೆ.

ನಿಜಕ್ಕೂ ಇದೊಂದು ವಿಪರ್ಯಾಸಕರ ಸನ್ನಿವೇಶ. ಏಕೆಂದರೆ ಹಿರಿಯರಾದ ಡಾ. ಎಲ್. ಬಸವರಾಜುರವರು ತಾನೇ ಸ್ವತಃ ಒಂದು ಕೃತಿಯಲ್ಲಿ (ಅಲ್ಲಮನ ವಚನಗಳು) ಅಲ್ಲಮ ಪ್ರಭುವಿನ ಜೀವನ ವೃತ್ತಾಂತದ ಬಗ್ಗೆ ಬರೆಯುತ್ತಾ ಅಲ್ಲಮ ಎಂಬ ಪದ ನಿಷ್ಪತ್ತಿಯ ಬಗ್ಗೆ ಚರ್ಚಿಸುತ್ತಾರೆ. ಅದು ದೂರದ ಟಿಬೆಟ್‌ನ ಬೌದ್ಧಧರ್ಮ ಗುರು ಪರಂಪರೆಯ 'ಲಾಮ' ಪದ ಅಥವಾ 'ಅಲ್ಲಾ' (ಸರ್ವವನ್ನು ಅರಿತವನು)ದಿಂದ ಹೊರಟು 'ಅಲ್ಲಾಮ' ಎಂದಾಗಿರಬಹುದು ಎಂದು ನಿರೂಪಿಸಿದ್ದಾರೆ.

'ಅಲ್ಲಮ' ಎಂಬ ಪದದ ಮೂಲ



ಹುಡುಕುತ್ತಾ ಹೀಗೆ ಭಿನ್ನ ನೆಲೆ ಆಯಾಮಗಳಲ್ಲಿ ಯೋಚಿಸಿ ನಿರೂಪಿಸಬಲ್ಲ ವಿದ್ವಾಂಸರೊಬ್ಬರ ಮೇಲೆ 'ಆನು ದೇವಾ'ದಂತ ಸಂಶೋಧನಾ ಕೃತಿ ಬಂದಾಗ ಪ್ರತಿಕ್ರಿಯಿಸಬೇಕಾದ ಹೊಣೆಗಾರಿಕೆಯೂ ಇರುತ್ತದಲ್ಲವಾ?

ಬೇರೇನು ಕಾರಣಗಳಿಲ್ಲದೇ ಹೋದರೂ ಅಂತವರ ಜ್ಞಾನ ವಿದ್ವತ್ತುಗಳ ಕಾರಣಕ್ಕೆ? ಅಷ್ಟೇ ಅಲ್ಲ, ನಮ್ಮ ಇತಿಹಾಸ, ಸಾಂಸ್ಕೃತಿಕ ಪರಂಪರೆಗಳ ಅಧ್ಯಯನ ಹಾಗೂ ವಿಶ್ಲೇಷಣೆಗೆ ಇದೇ ಮೊದಲ ಬಾರಿಗೆ (ವಿಸ್ತೃತ ರೂಪದಲ್ಲಿ) ಜಯಪ್ರಕಾಶ್‌ರು ಹೊಸ ಸಾಂಸ್ಕೃತಿಕ ಪರಿಕರಗಳನ್ನು ಬಳಸಿ ಆಗಿಹೋದ ಘಟನೆಗಳನ್ನು ನಿಖಷಕ್ಕೆ ಒಡ್ಡಿದ್ದಾರೆ. ಮುಂದೆಯೂ ನಡೆಯಬಹುದಾದ ಇಂತಾ ಇನ್ನೆಷ್ಟೋ ಸಂಶೋಧನೆಗಳಿಗೆ ಈ ವಿಧಾನಗಳು ಬಹಳಷ್ಟು ನೆರವು ನೀಡಲಿವೆ. ಈ ಎಲ್ಲಾ ಹಿನ್ನೆಲೆಯಲ್ಲಿ 'ಆನು ದೇವಾ' ನಮ್ಮ ಸಂದರ್ಭದ ಅತೀ ಮುಖ್ಯ ವೈಚಾರಿಕ ಸಂಶೋಧನಾ ಕೃತಿಯಾಗಿದೆ.

ನಮ್ಮ ಪರಂಪರೆ ಹಾಗೂ ಸಂಸ್ಕೃತಿ ನಿರ್ಮಾಣದಲ್ಲಿ ಕೇವಲ ಮೇಲ್ಜಾತಿಗಳವರ ಕೊಡುಗೆ ಮಾತ್ರವಿರುತ್ತದೆಂಬ ಭ್ರಮೆಯನ್ನು ತೊಡೆದು ಹಾಕುವ ಈ ಕೃತಿಯನ್ನು ಎಲ್ಲರೂ ಓದಬೇಕಿದೆ.

-ಪಾರ್ವತೀಶ್

ಪುಸ್ತಕ ನಮ್ಮಲ್ಲಿ ಲಭ್ಯ

'ಆನು ದೇವಾ ಹೊರಗಣವನು' ಕೃತಿಯು 'ಲಂಕೇಶ್' ಕಚೇರಿಯಲ್ಲೂ ಸಿಗುತ್ತದೆ. ಬೆಲೆ ರೂ. 60. ಪ್ರತಿಗಳು ಬೇಕಾದವರು ನೇರ ಕಚೇರಿಗೇ ಬಂದು ಪಡೆಯಬಹುದು. ಅಂಚೆ/ಕೊರಿಯರ್ ಮೂಲಕ ತರಿಸಿಕೊಳ್ಳಬಯಸುವವರು 20 ರೂ. ಹೆಚ್ಚು ಕಳುಹಿಸಿ. ಪುಸ್ತಕ ಬೆಂಗಳೂರು ವಿಶ್ವವಿದ್ಯಾಲಯದ ಡಾ. ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲೂ ಸಿಗುತ್ತದೆ. ಕೇಂದ್ರದ ನಿರ್ದೇಶಕ ಡಾ. ಜೋಗನ್ ಶಂಕರ್ (ಮೊಬೈಲ್ 9845508825)ರವರನ್ನು ಕೂಡ ಸಂಪರ್ಕಿಸಬಹುದು.

ಬಸವಣ್ಣ ಮಾದಿಗನೆಂದರೆ ಕಸಿವಿಸಿ ಯಾಕೆ?

ಡಾ.ಬಂಜಗೆರೆ ಜಯಪ್ರಕಾಶರ 'ಆನು ದೇವಾ ಹೊರಗಣವನು'... ಬಸವಣ್ಣನ ಮೂಲ ಜಾತಿ ವಿಶ್ಲೇಷಣೆಯ ಕೃತಿ ಹೊರಬಂದಿರುವ ಈ ಹೊತ್ತಿನಲ್ಲಿ 'ಲಂಕೇಶ್' ಸಕಾಲಕ್ಕೆ ಜಯಪ್ರಕಾಶರ ಸಂದರ್ಶನವನ್ನು ನೀಡಿ ಕೃತಿಯ ಹಿಂದಿರುವ ಸದುದ್ದೇಶವನ್ನು ತಿಳಿಸಿದೆ. ನಮ್ಮಲ್ಲಿ ಪ್ರಾಚೀನ ಕೃತಿಗಳಾಗಲಿ, ಐತಿಹಾಸಿಕ ವ್ಯಕ್ತಿಗಳ ಮೂಲ ಹೆಸರಿನ ಬಗೆಗಾಗಲಿ, ಐತಿಹಾಸಿಕ ಸ್ಥಳದ ಮೂಲಕ್ಕೆ ಸಂಬಂಧಿಸಿದಂತಾಗಲಿ, ಪ್ರತಿಯೊಬ್ಬ ಸಂಶೋಧಕನೂ ತಾನು ಮಂಡಿಸುವ ವಿಷಯಕ್ಕೆ ಸತ್ಯಕ್ಕೆ ಪೂರಕವಾಗಿಯೇ ಕಾರಣಗಳನ್ನು ಹುಡುಕುತ್ತಾ ಆ ಆಧಾರದಿಂದಲೇ ಒಂದು ಸತ್ಯದ ತುಣುಕನ್ನು ಕಾಣಲು ಯತ್ನಿಸಿದ್ದಾರೆ. ಈ ಮಾತು ಆ.ನೆ. ಉಪಾಧ್ಯೆ, ಡಿ.ಎಲ್. ನರಸಿಂಹಾಚಾರ್, ತೀ.ನಂ.ಶ್ರೀಯಿಂದ ಹಿಡಿದು ಬಂಜಗೆರೆ ಜಯಪ್ರಕಾಶರ ಬಸವಣ್ಣ ಜಾತಿ ಮೂಲದ ತಡಕಾಟದವರೆಗೂ ನಾವು ನೋಡುತ್ತಾ ಬಂದಿದ್ದೇವೆ.

ಕನ್ನಡದಲ್ಲಿ ಈಗಲೂ ಕುಮಾರವ್ಯಾಸನ ಕಾಲದ ವಿಷಯಕ್ಕೆ, ಸರ್ವಜ್ಞನ ಹಲವು ವಚನಗಳ ಕುರಿತು; ಅಷ್ಟೇ ಅಲ್ಲ ಹರಿಶ್ಚಂದ್ರ ಕಾವ್ಯದಲ್ಲಿ ಹೊಲತಿಯರನ್ನು ಅವಹೇಳನ ಮಾಡುವ ಪರಿಶ್ಚಂದ್ರನ ಪ್ರತಿಗಾಮಿ ಮನೋಧರ್ಮವನ್ನು ಹುಡುಕಿರುವ ವಿಮರ್ಶೆ ವಿಶ್ಲೇಷಣೆಗಳು ನಮ್ಮಲ್ಲಿವೆ ಎಂಬುದನ್ನು ನಾವು ಮರೆಯಬಾರದು. ಹೀಗಿರುವಾಗ ಬಸವಣ್ಣನ ಮೂಲ ಜಾತಿಯ ಬಗೆಗೆ ಆತ ಮಾದಿಗ ಎಂದು ಪ್ರತಿಪಾದಿಸಿದಾಗ ಈವರೆಗೂ ಆತ ಬ್ರಾಹ್ಮಣನಾಗಿದ್ದ, ಜನಿವಾರ ಕಿತ್ತೊಗೆದು ಶರಣನಾದ ಎಂದು ಪ್ರಾಥಮಿಕ ಶಾಲೆಯಿಂದಲೂ ಕಂಠಪಾಠ ಮಾಡಿಕೊಂಡು ಬಂದಿರುವ ಕನ್ನಡ ಮನಸ್ಸುಗಳಿಗೆ ಅದರಲ್ಲೂ ಬಸವಣ್ಣ ಮಾದಿಗ ಎಂದು ಹೇಳಿದಾಗ ಬಸವಣ್ಣನ "ಭಕ್ತ"ರಿಗೆ, ಬಸವಣ್ಣನಿಗೆ ಗುಡಿ ಗುಂಡಾರಗಳನ್ನು ಕಟ್ಟಿಸಿರುವವರಿಗೆ ಕಸಿವಿಸಿಯಾದರೆ, ಚಿದಾನಂದಮೂರ್ತಿಯಂತಹ ಸಂಪ್ರದಾಯಸ್ಥ ಸಂಶೋಧಕರು ಸೆಟೆದುಕೊಂಡರೆ ಅದು ಸತ್ಯವೊಂದನ್ನು ಗಲ್ಲಿಗೇರಿಸಿದಂತೆ. ಆನುದೇವಾ ಹೊರಗಣವನು... ಕೃತಿಯನ್ನು ಓದಿದಾಗ ನಮಗೆ ಸ್ಪಷ್ಟವಾಗುವ ಅಂಶಗಳೆಂದರೆ; ಚಿದಾನಂದಮೂರ್ತಿ, ಕಲ್ಬುರ್ಗಿ ಮೊದಲಾದವರು ವಚನದಾರಿಯಲ್ಲಿ ನಡೆಯುವಾಗ ಓಡಾಡದೆ ಇರುವ ಓಣಿಗಳಲ್ಲೆಲ್ಲ ಜಯಪ್ರಕಾಶ್ ಓಡಾಡಿದ್ದಾರೆ. ಮೂಲೆ ಮುಡುಕು ಸಂದಿಗೊಂದಿಲುಗಳನ್ನು ಮುಟ್ಟಿ ಮುರಿದು ನೋಡಿದ್ದಾರೆ. ಪ್ರತಿಯೊಂದಕ್ಕೂ ವಚನ ಸಹಿತ, ಆಧಾರ ಸಹಿತ ಕಾರಣ ಸಮರ್ಥನೆ ನೀಡಿದ್ದಾರೆ. ಈ ವಿಶ್ಲೇಷಣೆ ಅಂತಿಮವಾಗಿ ಬಸವಣ್ಣ ಮಾದಿಗ ಎಂಬಲ್ಲಿಗೆ ಬಂದು ನಿಲ್ಲುತ್ತದೆ.

ಇದು ಸಾಂಸ್ಕೃತಿಕ ನಾಯಕರನ್ನೆಲ್ಲ ಪರೀಕ್ಷೆಗೊಳಪಡಿಸುತ್ತಿರುವ ಕಾಲ. ತಲೆತಲೆಮಾರುಗಳಿಂದ ಪುರೋಹಿತಶಾಹಿಯ ಪ್ರತಿಗಾಮಿ ಮನಸ್ಸುಗಳನ್ನು ಬಡಿಬಡಿಯಾಗಿ ಬಿಚ್ಚಿ ಮನುಷ್ಯತ್ವದ ಕಡೆಗೆ ಮುಖ ಮಾಡಿ ನಿಂತ ಕಾಲ. ಅಷ್ಟೇ ಅಲ್ಲ ತಳಸಮುದಾಯಗಳ ಗರ್ಭದಲ್ಲಿ ಘನಗೊಂಡಿದ್ದ ಪಚ್ಚೆ ವೈಢೂರ್ಯ ವಜ್ರಗಳನ್ನು ಬಗೆದು ತೆಗೆಯುತ್ತಿರುವ ಕಾಲ. ಈ ವರ್ತಮಾನದಲ್ಲಿ ಜಯಪ್ರಕಾಶರಂಥವರು ನಡೆಸಿರುವ ಬಸವಣ್ಣನ ಜಾತಿಯ ವಿಶ್ಲೇಷಣೆಯನ್ನು ಯಾವೊಂದು ಜಾತಿಯೂ ಅತೀ ಭಾವುಕತೆಯಿಂದ ನೋಡದೆ. ಪೂರ್ವಾಗ್ರಹ ಮುಕ್ತವಾಗಿ ನೋಡಿದ್ದೇ ಆದರೆ ಸತ್ಯದ ಬೆಳಕು ಕಂಡೀತು.

ನಿಜ ಬಸವಣ್ಣ ಜಾತಿಯನ್ನು ಬೇಡವೆಂದವನು; ಆದರೆ ಆತನ ಜಾತಿಯನ್ನು ಹೇಳುವುದರಲ್ಲಿ ತಪ್ಪೇನಿದೆ. ಬಸವಣ್ಣ ಬ್ರಾಹ್ಮಣನೆ ಯಾಕಾಗಿರಬೇಕು? ಮಾದಿಗನೂ ಆಗಬಾರದೇಕೆ? ನಾವು ಚರ್ಚೆ ಸಂವಾದದ ಮೂಲಕ ಈ ಸತ್ಯವನ್ನು ಅರಿಯಬೇಕೆನ್ನಿಸುತ್ತದೆ.


-ಆರ್. ಸುಧೀಂದ್ರ ಕುಮಾರ್, ಮೈಸೂರು

ಬಸವಣ್ಣ ವೈದಿಕ ಬ್ರಾಹ್ಮಣನಲ್ಲ, ಆಗಮಿಕ ಶೈವ ಬ್ರಾಹ್ಮಣ

ಬಂಜಗೆರೆಯವರ 'ಆನು ದೇವಾ ಹೊರಗಣವನು' ಸಂಶೋಧನಾ ಕೃತಿ ಓದಿದ ನಂತರ ನನ್ನ ಕೆಲವು ಅನಿಸಿಕೆಗಳನ್ನು ವ್ಯಕ್ತಪಡಿಸಬಯಸುತ್ತೇನೆ.

ಬಸವಣ್ಣ ಶೂದ್ರ ಮೂಲದಲ್ಲಿ ಹುಟ್ಟಿದ್ದನೆಂದಾದರೆ ನಮ್ಮ ಅಭ್ಯಂತರ ಇರಬೇಕಿಲ್ಲ, ಆಗಲೂ ಬಸವಣ್ಣ ದೊಡ್ಡ ವ್ಯಕ್ತಿಯೇ ಆಗಿರುತ್ತಾನೆ. ಜ್ಞಾನ ಎಂಬುದು ಯಾವುದೋ ಒಂದು ಜಾತಿಗೆ ಸೀಮಿತ ಅಲ್ಲ, ಆದರೆ ಚರಿತ್ರೆ ಕುರಿತು ಚರ್ಚಿಸುವಾಗ 2 ಹಂತಗಳಿರುತ್ತವೆ. ಒಂದು ವಿಶ್ಲೇಷಣಾತ್ಮಕವಾದದ್ದು, ಇನ್ನೊಂದು ವ್ಯಾಖ್ಯಾನಾತ್ಮಕವಾದದ್ದು. ಈ ವ್ಯಾಖ್ಯಾನ ಮಾಡುವುದಿದೆಯಲ್ಲ ಅದು ಒಬ್ಬೊಬ್ಬರದು ಭಿನ್ನವಾಗಿರುತ್ತದೆ. ಬಂಜಗೆರೆಯವರದ್ದು ವ್ಯಾಖ್ಯಾನಾತ್ಮಕ ನಿಲುವು.

ಬಸವಣ್ಣ ಬ್ರಾಹ್ಮಣ ಮೂಲದವನೆ. ಆದರೆ ಈ ಬ್ರಾಹ್ಮಣ ಮೂಲದ ಬಗ್ಗೆ ಎಲ್ಲಾ ವೀರ ಶೈವರೂ ತಪ್ಪು ತಿಳಿದಿದ್ದಾರೆ. ಬ್ರಾಹ್ಮಣ ಅಂದರೆ ಈಗಿನ ಬ್ರಾಹ್ಮಣ ಅಂತಲ್ಲ, ಬಸವಣ್ಣ ವೈದಿಕ ಬ್ರಾಹ್ಮಣನಲ್ಲ, ವೈದಿಕ ಅಂದರೆ ಶಂಕರಾಚಾರ್ಯರ ರೀತಿ. ನಮ್ಮಲ್ಲಿ ಇನ್ನೊಂದು ಬ್ರಾಹ್ಮಣ ಪರಂಪರೆ ಇತ್ತು, ಆಗಮಿಕ ಶೈವ ಬ್ರಾಹ್ಮಣ ಅಂತಾ, ಬಸವಣ್ಣ ಈ ಮೂಲದವನು.


ಕಲ್ಬುರ್ಗಿ

ವೈದಿಕ ಶೈವ ಬ್ರಾಹ್ಮಣರು 4 ವೇದಗಳನ್ನೂ ಅನುಸರಿಸಿದರೆ ಆಗಮಿಕ ಶೈವ ಬ್ರಾಹ್ಮಣರು 28 ಆಗಮಗಳನ್ನು ಅನುಸರಿಸುತ್ತಿದ್ದರು. ಬಸವಣ್ಣ ತನ್ನ ಮನೆತನದ ಆಗಮಿಕ ಶೈವ ಬ್ರಾಹ್ಮಣ ಜನಿವಾರವನ್ನು ಹರಿದೆಸೆದು ಹೊರ ಬಂದ.

ಈ ಆಗಮಿಕ ಶೈವ ಬ್ರಾಹ್ಮಣರು ಯಾರೆಂದು ನೋಡಿದರೆ ಇವರೆಲ್ಲಾ ಕಾಲಾನುಕ್ರಮದಲ್ಲಿ ಶಾಖೋಪಶಾಖೆಯಾಗಿ ಒಡೆದು ಈಗ ರೂಪಾಂತರಗೊಂಡು assimilate ಆಗಿಹೋಗಿದ್ದಾರೆ. ಬಸವಣ್ಣ ಹೊಸ ಲಿಂಗಾಯತ ಸಿದ್ಧಾಂತ ಸ್ಥಾಪಿಸಿದ. ಎಲ್ಲಾ ಜಾತಿ, ಜನ, ವರ್ಗಗಳನ್ನೂ ಕೂಡಿಸಿ ವಿಸ್ತಾರವಾದ ಸಮಾಜ ಕಟ್ಟಿದ. ಮುಂದೆ ಇದೇ ಆಗಮಿಕ ಶೈವ ಬ್ರಾಹ್ಮಣರಲ್ಲಿ ಕೆಲವರು ಜಂಗಮರಾಗಿ ಇದರೊಳಗೆ ಬಂದರು. ಕೆಲವರು ಪಾಂಚಾಳರಾದರು. (ಅವರಿಗೂ ಜನಿವಾರ ಇತ್ತು)

ಉತ್ತರ ಕರ್ನಾಟಕದ ಜಂಗಮರಿಗೆ ಲಿಂಗಾಯತ ಬ್ರಾಹ್ಮಣ ಅಂತಾ ಕರೆಯುತ್ತಿದ್ದರು. ಈಗ್ಗೆ ನೂರು ವರ್ಷಗಳ ಹಿಂದೆ ವೀರಶೈವ ಲಿಂಗಾ ಯತ ಬ್ರಾಹ್ಮಣ ಗ್ರಂಥಮಾಲೆ ಅಂತಾ ಒಂದು ಇತ್ತು. ಹೀಗೆ ಇನ್ನೂ ಕೆಲವರು ವಿಶ್ವಬ್ರಾಹ್ಮಣ (ವಿಶ್ವಕರ್ಮ)ರಾದರು. ಇನ್ನೂ ಹಲವರು ಆರಾಧ್ಯ ಬ್ರಾಹ್ಮಣರೆನಿಸಿಕೊಂಡರು. ಈಗಲೂ ಮೈಸೂರಿನಲ್ಲಿ ಅದೇ ಹೆಸರಿನಲ್ಲಿ ಇವರದೊಂದು ಸಂಘ ಇದೆ.


ಹೀಗೆ ಉತ್ತರ ಕರ್ನಾಟಕದಲ್ಲಿ ಆಗಮಿಕ ಶೈವ ಬ್ರಾಹ್ಮಣರು, ಲಿಂಗಿ ಬ್ರಾಹ್ಮಣ, ವಿಶ್ವಕರ್ಮ ಬ್ರಾಹ್ಮಣ, ಆರಾಧ್ಯ ಬ್ರಾಹ್ಮಣ ಹಾಗೂ ಆರಾಧ್ಯ ವೀರಶೈವರೆಂದು ವಿಭಜನೆಗೊಂಡರು. ಉತ್ತರ ಕರ್ನಾಟಕದ ಬಹುತೇಕ ಜಂಗಮರು ಆಗಮಿಕ ಶೈವ ಬ್ರಾಹ್ಮಣ ಹಿನ್ನೆಲೆಯವರು. ಈ ಜಂಗಮರ ತಲೆ ಮೇಲೆ ಜುಟ್ಟಿರುತ್ತಿತ್ತು, ಇವರು ಜನಿವಾರ ಬಿಟ್ಟರೂ ಜುಟ್ಟು ಇರುತ್ತಿತ್ತು.

ಹೀಗೆ ಬಂಜಗೆರೆಯವರ ನಿಲುವನ್ನು ವ್ಯಾಖ್ಯಾನಾತ್ಮಕವಾಗಿರುವ ಒಂದು ಭಿನ್ನ ನಿಲುವು ಎನ್ನಬಹುದು. ನನಗೆ ಬಂಜಗೆರೆಯವರ ಸಮಾಜಮುಖಿ ಕಳಕಳಿ ಗೊತ್ತು. ಬಸವಣ್ಣ ವೈದಿಕ ಬ್ರಾಹ್ಮಣನಾಗಿರಲಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಅವನು ಆಗಮಿಕ ಶೈವ ಬ್ರಾಹ್ಮಣನಾಗಿದ್ದ ಎಂಬುದು ನನ್ನ ಅಭಿಪ್ರಾಯ.

-ಡಾ.ಎಂ.ಎಂ. ಕಲ್ಬುರ್ಗಿ, ಸಂಶೋಧಕರು


(ನಿರೂಪಣೆ: ಪಾರ್ವತೀಶ್)

ಯಡ್ಡಿ ವಿರುದ್ಧ 'ವಿ.ಕ.'ಭಟ್ಟರ ರಾಜಕೀಯ



ಪ್ರಚಾರ ಗಿಟ್ಟಿಸುವ ಬಜೆಟ್ ಮಂಡಿಸಿ ಮುಖ್ಯಮಂತ್ರಿ ಕುಮಾರ ಸ್ವಾಮಿಗೆ 'ನೀರು' ಕುಡಿಸಿರುವ ಯಡ್ಡಿಗೆ ಸಿಟ್ಟುಬಂದಿದೆ. ಇದರಲ್ಲೇನೂ ವಿಶೇಷವಿಲ್ಲ ಎಂದು ಯೋಚಿಸಬೇಡಿ, ಈ ಬಾರಿ ಯಡ್ಡಿ ಸಿಟ್ಟುಮಾಡಿಕೊಂಡಿರುವುದು ನಂ.1 ಚೆಡ್ಡಿಪತ್ರಿಕೆ 'ವಿಜಯ ಕರ್ನಾಟಕ'ದ ಬಗ್ಗೆ.

ಅನಂತು ಬಣದ ಕಾಟವಿಲ್ಲದಿದ್ದರೂ ಈ ಬಣದ ಮುಖವಾಣಿಯಂತೆ ಬರುತ್ತಿರುವ 'ವಿಜಯ ಕರ್ನಾಟಕ'ದ 'ರಾಜಕೀಯ'ದಿಂದ ಬೇಸತ್ತ ಯಡ್ಡಿ, ಕೈಮುಷ್ಠಿ ಬಿಗಿ ಹಿಡಿದು ಕೂತಿದ್ದಾರೆ. ಯಾರಾದರೂ 'ವಿಕ'ದ ಹೆಸರು ಹೇಳಿದರೆ, ಎದುರಿಗೆ ಅನಂತ್ ಕುಮಾರ್ ಬಂದವರಂತೆ ಕೋಪಗೊಳ್ಳುತ್ತಾರೆ. ತಾವು ನಂಬಿರುವ ಸಿದ್ಧಾಂತವನ್ನೇ ಸಾರುವ 'ವಿಕ'ಭಟ್ಟ ಈಗ ಯಡ್ಡಿಯ ನಂ.1 ಶತ್ರು.



ಹಿಂದೆ ಅನಂತ್‌ಕುಮಾರ್ ಪಿಎ ಆಗಿದ್ದ ವಿಶ್ವೇಶ್ವರ ಭಟ್ಟರು, ಬಿಜೆಪಿಯಲ್ಲಿಯೇ ಈಗ ಅನಾಥವಾಗಿರುವ ಅನಂತು ಬಣಕ್ಕೆ 'ವಿ.ಕ' ಮೂಲಕ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ. ಇದನ್ನೆಲ್ಲಾ ನೋಡಿಕೊಂಡು 'ವಿ.ಕ' ತೆಗೆದುಕೊಂಡ ಮಾರ್ವಾಡಿಗಳು ಏಕೆ ಸುಮ್ಮನಿದ್ದಾರೋ ಗೊತ್ತಾಗುತ್ತಿಲ್ಲ.

ಯಡ್ಡಿ ಉಪಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ, ಈ ಛಾನ್ಸ್ ನಮ್ಮ ಅನಂತುಗೆ ಸಿಗಲಿಲ್ಲವಲ್ಲ ಎಂದು ಮನಸ್ಸು ಹುಳ್ಳಗೆ ಮಾಡಿಕೊಂಡು 'ಯಡ್ಡಿ ಶೋಭಾಯಮಾನ' ಎಂಬ ಡಬ್ಬಲ್ ಮೀನಿಂಗ್ ಹೆಡ್ಡಿಂಗ್ ಕೊಟ್ಟು ಖುಷಿಪಟ್ಟಿದ್ದ ವಿಶ್ವೇಶ್ವರ ಭಟ್ಟರು ಈಗ ಯಡ್ಡಿಯ ಬೆನ್ನಿಗೆ ಬೇತಾಳದಂತೆ ಬಿದ್ದು ಸಂದರ್ಭ ಬಂದಾಗೆಲ್ಲಾ ಅವರನ್ನು ಅವಮಾನಿಸುತ್ತಿದ್ದಾರೆ. ಪತ್ರಿಕೆ ವಿರೋಧ ಪಕ್ಷದಂತೆ ಕೆಲಸ ಮಾಡುತ್ತಿದೆಯೇನೋ ಎಂದು ಸುಮ್ಮನಿದ್ದ ಯಡ್ಡಿಗೆ ಈಗ 'ವಿಕ' ಭಟ್ಟರ ರಾಜಕೀಯ ಅರ್ಥವಾಗಿದೆ. ಹಾಗಾಗಿಯೇ ಸಿಟ್ಟು ಬಂದಿದೆ.

ಕಳೆದ ತಿಂಗಳು ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ 'ಚೆಡ್ಡಿ ಸಿದ್ಧಾಂತ'ಕ್ಕೆ ಒತ್ತು ನೀಡುವ ಬಜೆಟ್‌ನ್ನು ಯಡ್ಡಿ ಮಂಡಿಸಿದಾಗ ಖುಷಿಯಾಗಬೇಕಿದ್ದ 'ವಿಕ' ಭಟ್ಟರು, 'ಮೊಸರಲ್ಲಿ ಕಲ್ಲು' ಹುಡುಕುವ ಕೆಲಸ ಮಾಡಿದ ಎಂದು ಯಡ್ಡಿ ಆಪ್ತರು ಸಿಟ್ಟಾಗಿದ್ದಾರೆ. ಬಜೆಟ್ ಮಂಡಿಸಿದ ಯಡ್ಡಿಯನ್ನು 'ಮುನ್ನಾಭಾಯಿ' ಎಂದು ಅಪಹಾಸ್ಯಮಾಡಿ, ರಾಜ್ಯದ ಹಿತ ಕಾಣದ ಬಜೆಟ್ ಎಂದು ಭಟ್ಟರು ಬರೆದಿದ್ದರು. ಅಷ್ಟು ಸಾಲದೆಂದು ಬಜೆಟ್ ಮಂಡಿಸಿದ ರೀತಿಯ ಬಗ್ಗೆ ಬರೆಯುತ್ತ, 'ನಿರ್ಭಾವ ಭಾಷಣಕ್ಕೆ ಎರಡೂವರೆ ತಾಸು' ಎಂದು ಅಣಕವಾಡಿದ್ದರು.

ಮತ್ತೆ ತನ್ನ 'ಬಜೆಟ್‌ನಲ್ಲಿ ಮದುವೆಗೆ ಹಣ ನೀಡಿ ಪ್ರಸ್ತಕ್ಕೆ ಅಂಜಿದೊಡೆಂತಯ್ಯ' ಎಂಬ ಹೆಡ್ಡಿಂಗ್‌ನ ಕಾಲಂನಲ್ಲಿ ಯಡ್ಡಿಯನ್ನು ಟೀಕಿಸಿ ಬರೆದು, 'ನಮ್ಮನ್ನು ಆಳುವವವರಿಗೆ ಬುದ್ಧಿ ಭೇಟಿಯಾದರೆ ರಾಜ್ಯಕ್ಕೆ ಒಳ್ಳೆಯದಾದೀತು' ಎಂದೂ ಬರೆದು, ಯಡ್ಡಿಗೆ ಪರೋಕ್ಷವಾಗಿ ಬುದ್ಧಿ ಇಲ್ಲ ಎಂದೂ, ಬುದ್ಧಿ ಇರುವುದಾದರೆ ತಮಗೇ ಎಂತಲೂ ಸಾರಿಕೊಂಡಿದ್ದ,

ಈ ಹಿಂದೆ ಅನಂತ್‌ಕುಮಾರ್ ಬಣದಲ್ಲಿದ್ದವರು ಒಂದಿಷ್ಟು ಆಚೆ ಸರಿದರೂ ಸಾಕು 'ವಿ.ಕ'ದಲ್ಲಿ ಅವರ ವಿರುದ್ಧ ವರದಿ ಖಂಡಿತ. ಶೋಭಾ ಕರಂದಾಜ್ಲೆಗೆ ಸಚಿವ ಸ್ಥಾನ ನೀಡುವ ವಿಷಯ ಬಂದಿದ್ದಾಗ ಯಡ್ಡಿಯ 'ಪಟ್ಟ'ಗೆ ಹೆದರಿದ ಹರಕುಬಾಯಿ ಈಶ್ವರಪ್ಪ ಶೋಭಾರ ಬಗ್ಗೆ ಒಂದೆರಡು ಒಳ್ಳೆಯ ಮಾತಾಡಿದ್ದಕ್ಕೇ ಉರಿದು ಹೋದ ವಿಶ್ವೇಶ್ವರ ಭಟ್, ಈಶ್ವರಪ್ಪರ ನಾಲಿಗೆ ಸರಿ ಇಲ್ಲ ಎಂದು ಓದುಗರೊಬ್ಬರ ಹತ್ತಿರ ಪತ್ರ ಬರೆಸಿ, ಅದನ್ನು ಮುಖಪುಟದಲ್ಲಿ ಹಾಕಿ, ಈಶ್ವರಪ್ಪಗೆ 'ಚಾಟಿ' ಏಟು ನೀಡಿದ್ದರು.

ಬೀದಿ ನಾಯಿ ವಿಷಯ ಬಂದಾಗ, ಇಂಥದಕ್ಕೇ ಕಾದು ಕುಳಿತಿದ್ದರೇನೋ ಎಂಬಂತೆ 'ಅಶೋಕ್ ರಾಜೀನಾಮೆ' ನೀಡಬೇಕೆಂದು ಪ್ರಚಾರಾಂದೋಲನ ಆರಂಭಿಸಿ, ಅನಂತುವಿನಿಂದ ದೂರವಾಗಿದ್ದ ಸಚಿವ ಅಶೋಕ್ ಕೊರಳಿಗೆ 'ಉರುಳು' ಹಾಕಿದ್ದರು. ತಾವು ಅನಂತು ಪಿಎ ಆಗಿದ್ದಾಗ ಬಹಳಷ್ಟು ದಿನ ತಮ್ಮೊಂದಿಗೇ ಓಡಾಡಿಕೊಂಡಿದ್ದ ಕಟ್ಟಾ ಸುಬ್ರಮಣ್ಯ ನಾಯ್ಡು ಈಗ ಯಡ್ಡಿಗೆ ಆಪ್ತ ಎಂಬ ಕಾರಣಕ್ಕೆ 'ಬಲ್ಲ ಮೂಲಗಳಿಂದ' ಎಂಬ ಅಂಕಣದಲ್ಲಿ ಕಟ್ಟಾನ ಭೂ ಲೂಟಿಯ ಬಗ್ಗೆ ಬರೆದರು. ಅಲ್ಲದೆ ಉತ್ತರ ಪ್ರದೇಶ ಚುನಾವಣೆಗೆ ಕಟ್ಟಾ ಇಲ್ಲಿಂದ ಹಣ ಸಾಗಿಸುತ್ತಿದ್ದಾರೆಂಬ ಸುದ್ದಿಯನ್ನೂ ಬಹಿರಂಗಪಡಿಸಿದರು!


ಹೀಗೆ ಯಡ್ಡಿ ವಿರುದ್ಧ ಪತ್ರಿಕಾ 'ರಾಜಕೀಯ' ಮಾಡುತ್ತಿರುವ ಭಟ್ ಏನು ವಿಷಯ ಸಿಗಲಿಲ್ಲವೆಂದರೆ ಶೋಭಾರ ವಿಷಯ ಎತ್ತಿ ಬರೆಯುವುದು ಸಾಮಾನ್ಯವಾಗಿದೆ. ಶೋಭಾರ ಹಿಡಿತದಲ್ಲಿ ಪಕ್ಷ ನಲುಗಿ ಹೋಗಿದೆ ಎಂದೂ, ಶಾಸಕರೆಲ್ಲಾ ಬಂಡಾಯಕ್ಕೆ ಸಿದ್ಧತೆ ನಡೆಸಿದ್ದಾರೆಂದೂ ಕಟ್ಟುಕಥೆಯ ವರದಿ ಪ್ರಕಟಿಸಿ, 'ವಿಘ್ನ'ಸಂತೋಷ ಪಡುತ್ತಿದ್ದಾರೆ. ಇತ್ತೀಚೆಗೆ ಪ್ರಕಟಗೊಂಡ 'ಶೋಭಾ ಮರ್ಜಿ: ಶಾಸಕರಿಗೆ ಅಲರ್ಜಿ' ಎಂಬ ಕಟ್ಟುಕಥೆಯಂತಿರುವ ವರದಿಯೇ ಇದಕ್ಕೆ ಸಾಕ್ಷಿ.

ವಿಕಾಸ ಯಾತ್ರೆಯ ಬಗ್ಗೆ ಅನಂತು ಬಣದ ಅಪಸ್ವರಕ್ಕೆ ಹೆಚ್ಚು ಪ್ರಚಾರ ನೀಡಿದ ಭಟ್ಟರು, ಶಾಸಕ ರೇಣುಕಾಚಾರ್ಯನ ಬಾನಗಡಿಗಳ ಬಗ್ಗೆ ವರದಿ ಪ್ರಕಟಿಸುವಾಗ ಯಡ್ಡಿ-ಶೋಭಾರನ್ನು ಎಳೆತಂದು, ಪ್ರಕರಣಕ್ಕೆ ಹೊಸ ತಿರುವು ನೀಡಿ ಯಡ್ಡಿಯನ್ನು ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ವಿ.ಕ.'ಭಟ್ಟನ ಬಗ್ಗೆ ಸಿಟ್ಟುಮಾಡಿಕೊಂಡಿದ್ದ ಯಡ್ಡಿ ಬಣವನ್ನು ಸಂಘಪರಿವಾರದ ಮುಖಂಡರು 'ಹತಾಶೆಗೊಂಡವರು ಹೀಗೆಲ್ಲಾ ವರ್ತಿಸುತ್ತಾರೆ, ನೀವು ಸುಮ್ಮನಿರಿ' ಎಂದು ಸಮಾಧಾನಪಡಿಸುತ್ತಿದ್ದಾರಂತೆ!

ಒಳ್ಳೆ ಮನುಷ್ಯನ ನಿರ್ಗಮನ!

ದೇವೇಗೌಡರ ಪ್ರಕಾರ ಎಲ್ಲವೂ ಸಾಂಗವಾಗಿ ನಡೆದುಕೊಂಡು ಹೋಗುತ್ತಿರುವಾಗಲೇ ಇದ್ದಕ್ಕಿದ್ದಂತೆ ಎಂ.ಪಿ. ಪ್ರಕಾಶ್ ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಿ ದೇವೇಗೌಡರಿಗೆ ಮರ್ಮಾಘಾತ ಮಾಡಿದ್ದಾರೆ. ಇದಕ್ಕೆ ಪ್ರಕಾಶ್ ಯಾವುದೇ ಕಾರಣ ಕೊಟ್ಟರೂ ಅದು ತಾಗುವುದು ದೇವೇಗೌಡರ ರಾಜಕಾರಣದ ವರಸೆಗೇ. ಆದ್ದರಿಂದ ಅವರೂ ಈಗಾಗಲೇ ಪಾರ್ಟಿಗೆ ಯಾರು ಮುಖ್ಯರೂ ಅಲ್ಲ ಅನಿವಾರ್ಯವೂ ಅಲ್ಲ ಎಂದಿದ್ದಾರೆ. ಇದೇ ಮಾತನ್ನು ಪ್ರಕಾಶ್ ಕೂಡ ಸಮರ್ಥಿಸಿ ಶಾಲು ಸುತ್ತಿ ಗೌಡರಿಗೆ ಛಾರಿಸಿದ್ದಾರೆ. ಬಹಳ ಸಣ್ಣ ಪ್ರತಿಕ್ರಿಯೆಗಳಂತೆ ಕಾಣುವ ಈ ಮಾತುಗಳ ಹಿಂದೆ ರಾಜಕಾರಣದ ಒಳಮರ್ಮಗಳೇ ಅಡಗಿವೆ.



ದೇವೇಗೌಡರ ಸಮೀಪ ಹೋದಾಗಿನಿಂದ ಎಂ.ಪಿ. ಪ್ರಕಾಶ್ ಅವಮಾನಗಳ ಸರಮಾಲೆಯನ್ನೇ ಎದುರಿಸಿದರು. ಮಗನನ್ನು ಮುಖ್ಯಮಂತ್ರಿ ಮಾಡುವ ಸಮಯದಲ್ಲಿ ಅವರನ್ನು ನಡೆಸಿಕೊಂಡ ರೀತಿಯಿಂದ ಆಘಾತಗೊಂಡು ಒಂದು ರೀತಿ ಬೆಪ್ಪಿಡಿದಂತಾಗಿದ್ದ ಪ್ರಕಾಶರನ್ನು ನೋಡಿದ ಅವರ ಸಹವರ್ತಿ ರಾಜಕಾರಣಿಗಳು 'ಪ್ರಕಾಶ್‌ಗೆ ಏನೋ ಆಗಿದೆ' ಎಂದೇ ಹೇಳುತ್ತಿದ್ದರು. ಇದನ್ನು ಅಲ್ಲಗಳೆಯುತ್ತಲೇ ಬಂದ ಪ್ರಕಾಶ್ ಕಡೆಗೂ ಚುನಾವಣೆ ರಾಜಕಾರಣಕ್ಕೆ ವಿದಾಯ ಹೇಳಿದ್ದಾರೆ.

ಇದು ನೇರವಾಗಿ ದೇವೇಗೌಡರಿಗೇ ಹಾಕಿದ ಸವಾಲಿನಂತಿದೆ. ಏಕೆಂದರೆ ಈಗ ನಿಜಕ್ಕೂ ನಿವೃತ್ತಿ ಘೋಷಿಸಬೇಕಿದ್ದವರು ದೇವೇಗೌಡರು. ಅವರು ಮಾಡಬೇಕಾದ ಘನವಾದ ಕೆಲಸಗಳೆಲ್ಲಾ ಮುಗಿದಿವೆ. ಆದರೂ ಇನ್ನು ಕುಟಿಲ ನೀತಿಗಳಲ್ಲಿ ಸಕ್ರಿಯವಾಗಿದ್ದಾರೆ. ಹೀಗಿರುವಾಗ ಪ್ರಕಾಶ್ ಏಕಾಏಕಿ ನಿವೃತ್ತಿ ಹೇಳಿದ್ದರಿಂದ ಮುಜುಗರವಾಗಿರುವುದು ಗೌಡರಿಗೆ.

ಪ್ರಕಾಶ್, ಹೆಗಡೆ, ಬೊಮ್ಮಾಯಿ, ಗೌಡರು, ಪಟೇಲರು ಮತ್ತು ಧರ್ಮಸಿಂಗ್ ಸಂಪುಟದಲ್ಲಿದ್ದವರು. ಆಗಿನ ಅವರ ಲವಲವಿಕೆ ಇಂದು ಕಾಣುತ್ತಿಲ್ಲ. ಸದಾ ಅಪರಾಧಿ ಮನೋಭಾವನೆಯಲ್ಲಿ ಡಲ್ಲಾಗಿರುತ್ತಾರೆ. ಗೃಹ ಖಾತೆ ನಿರ್ವಹಿಸುವ ಯಾವ ಛಾತಿಯನ್ನೂ ತೋರುತ್ತಿಲ್ಲ. ಅನಾಗರಿಕ ಮತ್ತು ಅಸಭ್ಯ ಸಚಿವರುಗಳ ನಡುವೆ ಅವರು ಏಗುವುದೇ ಕಷ್ಟವಾಗಿ ಹೋಗಿದೆ.

ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗಲೇ ತಮ್ಮ ಕ್ಷೇತ್ರದ ರಂಗಭೂಮಿ ಕಡೆ ಮತ್ತು ದೇಶಿವಸ್ತುಗಳ ಕಡೆ ತಮ್ಮ ಗಮನವನ್ನು ಕೇಂದ್ರೀಕರಿಸಿಕೊಂಡು ಓಡಾಡಿದ್ದ ಪ್ರಕಾಶ್ ಈಗ ಅಧಿಕೃತವಾಗಿ ದೇಶೀ ಮನುಷ್ಯರಾಗಿ ಬದುಕುವ ತೀರ್ಮಾನ ತೆಗೆದುಕೊಂಡಿದ್ದಾರೆ. ಪ್ರಕಾಶರನ್ನು ಬಳಸಿಕೊಂಡು ಉಳಿದ ಮಕ್ಕಳಿಗೂ ಒಂದೊಂದು ಗತಿ ಕಾಣಿಸುವ ಕನಸು ಕಂಡಿದ್ದ ಗೌಡರಿಗೆ ಪ್ರಕಾಶರ ಈ ತೀರ್ಮಾನ ಕಸಿವಿಸಿಯುಂಟು ಮಾಡಿದೆ.

ಪ್ರಕಾಶ್ ಮಾಡಬೇಕಾದ ಕೆಲಸಗಳಿದ್ದವು. ಕೆಲವರಿಗೆ ಹೇಳಬೇಕಾದ ಮಾತುಗಳಿದ್ದವು. ನೀಡಬೇಕಿದ್ದ ಕೆಲವು ಸ್ಪಷ್ಟೀಕರಣಗಳಿದ್ದವು. ಇದೆಲ್ಲದರಿಂದ ಬಿಡುಗಡೆಗೊಂಡು ವಯಸ್ಸು ಓದು ಮತ್ತು ರಂಗ ಚಟುವಟಿಕೆ ಕಾರಣಗಳನ್ನು ಹೇಳಿ ಹಿಂದೆ ಸರಿಯುತ್ತಿರುವ ಈ ಸಮಯದಲ್ಲಿ ಒಂದು ಮಾತನ್ನು ಹೇಳಲೇಬೇಕಿದೆ. ಪ್ರಕಾಶ್ ಒಳ್ಳೆಯ ಮನುಷ್ಯ. ಆದರೆ ಒಳ್ಳೆಯ ರಾಜಕಾರಣಿಯಲ್ಲ. ಆದರೆ ಅಧಿಕಾರದಿಂದ ದೂರವಿದ್ದಾಗ ಒಳ್ಳೆಯ ರಾಜಕಾರಣಿಯಾಗಿ ವರ್ತಿಸಿದ್ದಾರೆ, ಮಾತನಾಡಿದ್ದಾರೆ.

ಇನ್ನು ಮುಂದಾದರೂ ಪ್ರಕಾಶ್ ಅನ್ನಿಸಿದ್ದನ್ನು ಹೇಳುವ ಧೈರ್ಯ ಮಾಡಿದರೆ ಒಳ್ಳೆಯ ರಾಜಕಾರಣಿಯೂ ಆಗಬಲ್ಲರು.

ಒಂದು ಮುತ್ತಿನ ಕಥೆ!



ಶಿಲ್ಪಾ ಶೆಟ್ಟಿಗೆ ಹಾಲಿವುಡ್ ನಟ ಗೇರ್ ಮುಟ್ಟಿಟ್ಟ. ಮುತ್ತಿಡಿಸ್ಕೊಂಡ ಶಿಲ್ಪಾ ಶೆಟ್ಟಿ ಒಂದು ಕ್ಷಣ ಅಪ್ರತಿಭಳಾದಳು. ಆ ನಂತರ ಸಾವರಿಸಿಕೊಂಡಳು..ಅದನ್ನು ನೋಡುತ್ತಿದ್ದ ಲಾರಿ ಡ್ರೈವರ್‌ಗಳಿಗೆ ಅದು ಶಿಲ್ಪಾ ನಟಿಸಿದ ಚಿತ್ರದ ಸೀನೊಂದು ಎನಿಸಿತು..ತಡವಾಗಿ ಚಪ್ಪಾಳೆ ತಟ್ಟಿದರು. ಅಲ್ಲಿಗೆ ಮರೆತರು.

ಆ ನಂತರ ಸ್ವಲ್ಪ ಹೊತ್ತಿಗೆ ಸನ್ನಿ ಡಿಯೋಲ್ ಬಂದಾಗ ಹೆಚ್ಚೆದ್ದು ಕುಣಿದ ಆ ಪ್ರೇಕ್ಷಕ ಸಮೂಹ ಅವನ ಜೊತೆ ತಾವೂ ಹೆಜ್ಜೆ ಹಾಕುತ್ತಾ ಗೇರ್ ಅನ್ನು ಮರೆತರು..ಶಿಲ್ಪಾಳನ್ನೂ ಮರೆತರು. ಆದರೆ ತಲೆಯಲ್ಲಿ ಅಶ್ಲೀಲತೆಯ ಲದ್ದಿಯನ್ನು ಮತ್ತು ಭಾರತ ಸಂಸ್ಕೃತಿಯೆಂಬ ಸಂಘ ಪರಿವಾರದ ಹಿಕ್ಕೆಯನ್ನು ಹೊತ್ತ ಕೆಲವು ಪತ್ರಕರ್ತರು ಅದನ್ನು ರಾಷ್ಟ್ರೀಯ ಸುದ್ದಿ ಮಾಡಿಬಿಟ್ಟರು. ಗೇರ್ ಸಾರ್ವಜನಿಕವಾಗಿ ಮುತ್ತು ಕೊಟ್ಟದ್ದು, ಶಿಲ್ಪಾ ಮುತ್ತು ಕೊಡಿಸಿಕೊಂಡಿದ್ದು ಎರಡೂ ರಾಷ್ಟ್ರೀಯ ಅಪಮಾನ ಎಂಬಂತೆ ಚಡ್ಡಿಗಳು ಹಲವಾರು ಕಡೆ ಅವರಿಬ್ಬರ ಪ್ರತಿಕೃತಿ ದಹನವನ್ನೂ ಮಾಡಿದರು.


ಈಗ ದೆಹಲಿಯಲ್ಲಿ ಬಿಜೆಪಿಯ ಸಂಸದನೊಬ್ಬ ಹೆಣ್ಣು ಮಕ್ಕಳನ್ನು ಮಾರಾಟ ಮಾಡುತ್ತಿದ್ದ ಜಾಲದಲ್ಲಿ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದಿದ್ದಾನೆ. ಇಲ್ಲಿ ಬಿಜೆಪಿಯ ವಿವಾಹಿತ ಶಾಸಕನೊಬ್ಬ ಒಬ್ಬ ನರ್ಸ್‌ಳನ್ನು ರಾತ್ರಿ ಹಗಲಲ್ಲೇ, ಎಲ್ಲರೆದುರಿಗೂ ಮತ್ತು ಖಾಸಗಿಯಾಗಿಯೂ ಲೈಂಗಿಕ ಕಿರುಕುಳ ಕೊಡುತ್ತಾ ಆಕೆ ಆತ್ಮಹತ್ಯೆಗೆ ಯತ್ನಿಸುವಂತೆ ಮಾಡಿದ್ದಾನೆ. ಮತ್ತೊಂದು ಕಡೆ ಎನ್.ಡಿ.ಎ ಸರ್ಕಾರವಿದ್ದಾಗಲೇ ವಿದೇಶದಿಂದ ಸಹಸ್ರಾರು ಅಶ್ಲೀಲ ಫಿಲಂಗಳು ಭಾರತಕ್ಕೆ ನುಗ್ಗಿ ಬಂದವು. ಅದೇ ಸಂದರ್ಭದಲ್ಲಿ ಜಲಂಧರದಲ್ಲಿ ಭಜರಂಗ ದಳದ ಮುಖ್ಯಸ್ಥನೊಬ್ಬ ಬ್ಲೂ ಫಿಲಂ ದಂಧೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ. ಇವು ಯಾವುವೂ ಭಾರತದ ಸಂಸ್ಕೃತಿಗೆ ಕಳಂಕ ತಂದಿತೆಂದು ಈ ಚೆಡ್ಡಿಗಳಿಗೆ ಅನಿಸಲೇ ಇಲ್ಲ.

ಆದರೆ ಒಂದು ನಗಣ್ಯವಾದ ಸಭೆಯೊಂದರಲ್ಲಿ ಒಬ್ಬ ಸಿನಿಮಾ ನಟಿಗೆ ಮತ್ತೊಬ್ಬ ಸಿನಿಮಾ ನಟ ಮುತ್ತಿಟ್ಟದ್ದು ಇವರಿಗೆ ತಮ್ಮ ಸಂಸ್ಕೃತಿಗೆ ಹಚ್ಚಿದ ಕಳಂಕವೆನಿಸಿಬಿಟ್ಟಿತು. ಇದೇ ಶಿಲ್ಪಾ ಶೆಟ್ಟಿ ಇರಬಹುದು ಅಥವಾ ಬಾಲಿವುಡ್‌ನ ಮತ್ತು ಕನ್ನಡದ ಸ್ಯಾಂಡಲ್ ವುಡ್‌ನ ಹಲವಾರು ಚಲನಚಿತ್ರಗಳಲ್ಲಿ ಸಾರೋದ್ಧಾರವಾಗಿ ಅಶ್ಲೀಲ ಡಬ್ಬಲ್ ಮೀನಿಂಗ್ ಮಾತುಗಳು ಮತ್ತು ಸೀನುಗಳೂ ಪ್ರದರ್ಶಿತವಾಗುತ್ತವೆ. ಬೆಂಗಳೂರಿನ ಬೀದಿಬೀದಿಗಳಲ್ಲಿ ಅಶ್ಲೀಲ ಸಿನಿಮಾ ಚಿತ್ರಗಳ ಕಾಮಕೇಳಿಯ ಹೋರ್ಡಿಂಗ್‌ಗಳು ರಾರಾಜಿಸುತ್ತಿರುತ್ತವೆ. ದಿನ ಬೆಳಗಾದರೆ ಈ ಸಂಸ್ಕೃತಿ ರಕ್ಷಕರು, ಬಿಜೆಪಿಯ ಸಂಸ್ಕೃತಿ ಮಂತ್ರಿಗಳು ಅದೇ ಬೀದಿಯಲ್ಲಿ ಓಡಾಡುತ್ತಿರುತ್ತಾರೆ. ಆ ಪೋಸ್ಟರ್ ಮತ್ತು ಹೋರ್ಡಿಂಗ್‌ಗಳಲ್ಲಿ ಕೇವಲ ಗಲ್ಲದ ಮೇಲಿನ ಮುತ್ತಿನ ಚಿತ್ರ ಮಾತ್ರ ಇರುವುದಿಲ್ಲ.

ಆದ್ದರಿಂದ ಈ ಸಂಸ್ಕೃತಿ ರಕ್ಷಕರಿಗೆ ಅಡ್ಡಿಯಾಗಿರುವುದು ಮುತ್ತು ಕೊಡುವುದೂ ಅಲ್ಲ, ಅಥವಾ ಬಹಿರಂಗವಾಗಿ ಮುತ್ತುಕೊಡುವುದೂ ಅಲ್ಲ, ಅವರ ಕಾಳಜಿ ಇರುವುದು ಸ್ತ್ರೀಯರ ಮಾನ ಪ್ರಾಣದ ಬಗ್ಗೆಯೂ ಅಲ್ಲ, ಹಾಗಿದ್ದರೆ ಇವರು ಇಲ್ಲಿ ವಿರೋಧಿಸುತ್ತಿರುವುದೇನು? ಗೇರ್ ಸ್ಥಾನದಲ್ಲಿ ಚೆಡ್ಡಿಗಳ ಬದಲಿಗೆ ಬೇರೊಬ್ಬನಿರುವುದನ್ನು..ಅಲ್ಲವೇ?

ದಾವಣಗೆರೆ

ನೊಣಬ ಮಠಾಧೀಶ ನಾಪತ್ತೆ!




ದಾವಣಗೆರೆ ಮತ್ತು ಹಾಸನ ಜಿಲ್ಲೆಗಳ ವೀರಶೈವರ ಎಂಟು ಮಠಗಳ ಪೀಠಾಧಿಪತಿ. ಸುತ್ತೂರು ಸ್ವಾಮಿಗಳ ಅಪರಾವತಾರ, ನೊಣಬ ಲಿಂಗಾಯತರ ಜಗದ್ಗುರು, ಸೌಮ್ಯವಾದಿ, ಮೌನವಾದಿ, ನಂದೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ತಾವು ಕಂಡ ಕನಸ್ಸುಗಳ, ಶಿಷ್ಯರ, ಭಕ್ತರ, ಪೀಠದ ಅಧಿಕಾರ ಎಲ್ಲವನ್ನು ಬದಿಗಿಟ್ಟು ಯಾರಿಗೂ ಹೇಳದೆ ಏಕಾಂಗಿಯಾಗಿ ಅದೃಶ್ಯರಾಗಿದ್ದಾರೆ! ಹೀಗೆ ಮಠ ಬಿಟ್ಟು ಹೊರಟುಹೋಗಿ ಐದು ತಿಂಗಳುಗಳಾದರೂ ಸ್ವಾಮೀಜಿ ನಾಪತ್ತೆ!

ಬೆಳ್ಳಿಹಬ್ಬ ಆಚರಿಸಿ ಹೊರಟರು

ಮಠ ಬಿಟ್ಟು ಹೊರಡುವ ಕೇವಲ ಆರು ದಿನಗಳ ಹಿಂದೆ ಇದೇ ಜಗದ್ಗುರುವಿನ ಭಕ್ತರು ಕೋಟ್ಯಂತರ ರೂ.ಗಳನ್ನು ಖರ್ಚು ಮಾಡಿ ಬೆಳ್ಳಿಹಬ್ಬ ಮತ್ತು ಗುರುವಂದನೆ ಕಾರ್ಯಕ್ರಮ ನಡೆಸಿದ್ದರು. ಬೆಳ್ಳಿಹಬ್ಬ ಆಚರಿಸಿಕೊಂಡ ಆರನೇ ದಿನಕ್ಕೆ ಯಲಗುಂದ ಮಠದಿಂದ ಮುಂಜಾನೆ ಐದು ಗಂಟೆಗೆ ಹೊರಬಿದ್ದ ಜಗದ್ಗುರು ತಮ್ಮ ಮೊಬೈಲ್‌ಗಳ ನಂಬರ್‌ಗಳನ್ನು ಬದಲಾಯಿಸಿ ಕಣ್ಮರೆಯಾಗಿದ್ದಾರೆ. ಲಕ್ಷಾಂತರ ಭಕ್ತರಿಗೆ ನಿರಾಸೆ ತಂದಿದ್ದಾರೆ. ಆದರೆ ಅವರ ವಿರೋಧಿಗಳಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಷ್ಟು ಸಂತೋಷವಾಗಿದೆ!

ಸ್ವಾಮೀಜಿ ಕಾಣೆಯಾಗಿ ಐದು ತಿಂಗಳುಗಳಾಗಿವೆ. ಯಾರಾದರೂ ಮಠಗಳಿಗೆ ಹೋಗಿ ನಂದೀಶ್ವರರ ಬಗ್ಗೆ ಚಕಾರವೆತ್ತಿದರೆ ಮೊದಲು ಉರಿದುಬೀಳುತ್ತಾರೆ! ಆಮೇಲೆ ಅವರು ದೆಹಲಿಯಲ್ಲಿದ್ದಾರೆ, ಮುಂದಿನ ತಿಂಗಳು ಬರುತ್ತಾರೆ, ಶ್ರಾವಣಕ್ಕೆ ಬರುತ್ತಾರೆ, ಪೌರ್ಣಿಮೆಗೆ ಬರುತ್ತಾರೆ, ಕಾಶಿಯಲ್ಲಿ ಧ್ಯಾನದಲ್ಲಿದ್ದಾರೆ, ಸದ್ಯಕ್ಕೆ ಸಿಗುವುದಿಲ್ಲ ಎಂಬಿತ್ಯಾದಿ ಹೇಳುತ್ತಿದ್ದಾರೆ. ಸ್ವಾಮೀಜಿ ಸಾಕಿ ಬೆಳೆಸಿದ ಆಪ್ತ ಸಹಾಯಕರು ಬಿಡುತ್ತಿರುವ ಬೂಸಿ ಇದು. ಹೀಗೆ ಬೂಸಿ ಬಿಟ್ಟೇ ನಂದೀಶ್ವರರನ್ನು ಮಠದಿಂದ ಹೊರ ಅಟ್ಟಿದ್ದಾರೆ. ಸದ್ಯಕ್ಕಂತೂ ಸ್ವಾಮಿಗಳ ಸುಳಿವು ಇಲ್ಲದಂತಾಗಿದೆ.

ಸುತ್ತೂರು, ಚಿತ್ರದುರ್ಗ, ಸಿರಿಗೆರೆ, ಸಿದ್ಧಗಂಗೆ ಮಠಗಳ ಮಟ್ಟಕ್ಕೆ ನೊಣಬ ಲಿಂಗಾಯತರ ಮಠವನ್ನಾಗಿ ಬೆಳೆಸಲು ಪಣತೊಟ್ಟಿದ್ದ ನಂದೀಶ್ವರರು, ಆದಕ್ಕಾಗಿ ನೊಣಬ ಜನಾಂಗವನ್ನು ಒಗ್ಗೂಡಿಸುವಲ್ಲಿ ಯಶಸ್ವಿಯೂ ಆಗಿದ್ದರು. ಅದಕ್ಕಾಗಿ ಅವರು ಉಕ್ಕಡಗಾತ್ರಿಯನ್ನು ಬಲವಂತವಾಗಿ ತಮ್ಮ ಮಠದ ವ್ಯಾಪ್ತಿಗೆ ತೆಗೆದುಕೊಂಡಿದ್ದರು.



ಶಿವರುದ್ರಪ್ಪ

ಇದಾದನಂತರ ಹಾಸನ ಜಿಲ್ಲೆಯ ಪುಷ್ಪಗಿರಿ ಬೆಟ್ಟವನ್ನೂ ತಮ್ಮ ವಶಕ್ಕೆ ತೆಗೆದುಕೊಂಡು ಅಲ್ಲಿ ಮಠ ಕಟ್ಟಲು ಮುಂದಾದರು. ಆಗ ಪುಷ್ಪಗಿರಿಯ ಮಲ್ಲಿಕಾರ್ಜುನ ದೇವಾಲಯದ ಟ್ರಸ್ಟಿಗಳು ಮತ್ತು ಮಲೆನಾಡ ಲಿಂಗಾಯತರು ಮಠ ಕಟ್ಟುವುದನ್ನು ವಿರೋಧಿಸಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದರು. ಆಗ ನೊಣಬ ಜನಾಂಗದ ಮತ್ತೊಂದು ಮಠದ ಪೀಠಾಧೀಶರಾದ ಕರಡಿಗವಿ ಶ್ರೀಗಳು ಮಾತುಕತೆ ನಡೆಸಿ ತಡೆಯಾಜ್ಞೆ ತೆರವುಗೊಳಿಸಿದರು. ನಂತರ ಹಾಸನ ಜಿಲ್ಲೆಯ ರಾಮದೇವರ ಹಳ್ಳಿಯ ಮೇಲೆ ತಮ್ಮ ಹಿಡಿತ ಸಾಧಿಸಿದರು ನಂದೀಶ್ವರರು.

ಯಲಗುಂದ ಮಠದಲ್ಲಿ ಸ್ವಾಮೀಜಿಗಳಾಗಿದ್ದ ನಂದೀಶ್ವರರನ್ನು ದಾವಣಗೆರೆ ಜಿಲ್ಲೆಯ ನಂದಿಗುಡಿಗೆ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿದ ತಕ್ಷಣ ತಮ್ಮ ಕ್ರಿಯಾಶೀಲತೆ, ಅದಮ್ಯ ಬುದ್ಧಿವಂತಿಕೆಯಿಂದ ನಂದಿಗುಡಿಯೊಂದಿಗೆ, ಉಕ್ಕಡಗಾತ್ರಿ, ಗುಂಡಶೆಟ್ಟಿಹಳ್ಳಿ, ಪುಷ್ಪಗಿರಿ, ಯಲಗುಂದ, ಚಿಲಕೂರು, ಹತ್ತಿಕಟ್ಟೆ ಮತ್ತು ಹೊಂಕಣಗಳಲ್ಲಿನ ಮಠಗಳಿಗೆ ಪೀಠಾಧೀಶರಾದರು. ಹೀಗೆ ತಮ್ಮ ಕ್ಷೇತ್ರವನ್ನು ವಿಸ್ತರಿಸಿಕೊಂಡು ನೊಣಬ ಭಕ್ತರನ್ನು ಒಂದು ಮಾಡಿದ ಸ್ವಾಮೀಜಿ ನೊಣಬರ ಮಠವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಸದೃಢವಾಗಿಸುವತ್ತ ದಿಟ್ಟ ಹಾಗೂ ಜಾಣ್ಮೆಯ ಹೆಜ್ಜೆ ಇಟ್ಟಿದ್ದರು. ಆದರೆ ಅಧಿಕಾರ ಹೆಚ್ಚಾದಂತೆ, ಭಕ್ತರ ಸಂಖ್ಯೆ ಜಾಸ್ತಿಯಾದಂತೆ, ಹಣದ ಶೇಖರಣೆ ಅಳತೆ ಮೀರಿತು....

ಹಣದೊಂದಿಗೆ ಹುಟ್ಟಿಕೊಂಡ ವಿರೋಧಿ ಗುಂಪು

ಯಾವಾಗ ಮಠಕ್ಕೆ ಹಣದ ಹೊಳೆ ಹರಿದು ಬರಲಾರಂಭಿಸಿತೋ ನಂದಿಗುಡಿಯ ನಂದೀಶ್ವರರ ಮೇಲೆ ಆಪಾದನೆ ಮಾಡುವವರು ಸೃಷ್ಟಿಯಾದರು. ಅಲ್ಲಿಯವರೆಗೆ ಸ್ವಾಮೀಜಿಯವರೊಂದಿಗೆ ಅನ್ಯೋನ್ಯವಾಗಿದ್ದು ಮಠದ ಅಭಿವೃದ್ಧಿಯಲ್ಲಿ ಪಾಲುದಾರನಾಗಿದ್ದ ನಂದಿಗುಡಿಯ ನಂದಿಗೌಡ ಎಂಬುವವನು ಸ್ವಾಮಿಗಳೊಂದಿಗೆ ವಿರೋಧ ಕಟ್ಟಿಕೊಂಡ. ಅವನದೊಂದು ಬಲಿಷ್ಠ ಪಡೆಯೇ ನಂದಿಗುಡಿಯ ಮೇಲೆ ಹಿಡಿತ ಸಾಧಿಸಿತು.

ಆಗಲೇ ನಂದೀಶ್ವರ ಶಿವಾಚಾರ್ಯರು ಮಠಗಳನ್ನು ಬಿಟ್ಟು ಎರಡು ತಿಂಗಳು ಅದೃಶ್ಯರಾಗಿದ್ದರು. ಇದರಿಂದ ಕೋಪೋದ್ರಿಕ್ತರಾದ ಅಮಾಯಕ ಭಕ್ತಾದಿಗಳು ನಂದೀಗೌಡನ ಮೇಲೆ ಹಲ್ಲೆ ನಡೆಸಿದರಲ್ಲದೆ, ಮಠ ಬಿಟ್ಟು ಹೋಗಿದ್ದ ನಂದೀಶ್ವರ ಸ್ವಾಮಿಯನ್ನು ಹುಡುಕಿ ತಂದು ಜಗದ್ಗುರುವಿನ ಪಟ್ಟ ಕಟ್ಟಿದ್ದರು.

ನಂದಿ ದಳ ಅಸ್ತಿತ್ವಕ್ಕೆ

ಯಾವಾಗ ನಂದೀಶ್ವರರ ಗುಂಪು ಮತ್ತೆ ಅಧಿಕಾರಕ್ಕೆ ಬಂತೋ ಅಂದಿನಿಂದ ಜಗದ್ಗುರುಗಳು ಮಠ ಹಾಗೂ ಧರ್ಮ ರಕ್ಷಣೆ ಮತ್ತು ಶ್ರೀಗಳ ಸಮರ್ಥನೆಗೆ ಯುವಕರು ಗುಂಪೊಂದನ್ನು ಕಟ್ಟಿದರು. ಆ ಗುಂಪಿಗೆ ನಂದಿ ದಳ ಎಂದು ಹೆಸರಿಟ್ಟರು.

ದಾವಣಗೆರೆ ಜಿಲ್ಲೆಯ ಮಠಗಳ ಅಧಿಪತ್ಯ (ಮಠದ ವ್ಯಾಪ್ತಿಯಲ್ಲಿ ಶಾಲಾ ಕಾಲೇಜುಗಳಿವೆ)ವನ್ನು ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುತ್ತಿರುವ ಇಂಜಿನಿಯರ್ ಮಹೇಶ್ವರಪ್ಪ ಮತ್ತು ಬೆಂಬಲಿಗರಿಗೆ ಬಿಟ್ಟು ಕೊಟ್ಟ ಸ್ವಾಮೀಜಿ, ಹಾಸನ ಜಿಲ್ಲೆಯ ಮಠಗಳ ಆರ್ಥಿಕ ಉಸ್ತುವಾರಿಯನ್ನು ಶಿವರುದ್ರಪ್ಪ ಎಂಬ ಹಳೇ ಸರ್ಕಾರಿ ಕಳ್ಳನಿಗೆ ಬಿಟ್ಟುಕೊಟ್ಟರು. ಶಿವರುದ್ರಪ್ಪ ಈ ಹಿಂದೆ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಜಿಲ್ಲಾ ಉಸ್ತುವಾರಿಯಾಗಿದ್ದ. ನಂತರ ಅದನ್ನು ತನ್ನ ಮನಸ್ಸೋ ಇಚ್ಛೆ ಬಳಸಿಕೊಂಡು ಕೋಟಿಗಳ ಲೆಕ್ಕದಲ್ಲಿ ತಿಂದು ಸಿಕ್ಕಿಬಿದ್ದಿದ್ದ. ಈತನ ಮೇಲೆ ಇಂದಿಗೂ ಇಲಾಖಾ ತನಿಖೆ ನಡೆಯುತ್ತಿದೆ! ಅಂತಹವರು ಬಂದು ಒಕ್ಕರಿಸಿದ್ದು ನಂದೀಶ್ವರರ ಆಸ್ಥಾನಕ್ಕೆ, ಅದರಲ್ಲೂ ಉಸ್ತುವಾರಿಗೆ!

ಸ್ವಾಮಿಗಳಿಗೆ ಅದೇನು ಮೋಡಿ ಮಾಡಿದನೋ ನಂದೀಶ್ವರರು ಶಿವರುದ್ರಪ್ಪ ಮತ್ತು ದಾವಣಗೆರೆಯ ಮಹೇಶ್ವರಪ್ಪರವರುಗಳ ಮಾತುಗಳಿಗೆ ಮಾತ್ರ ಮನ್ನಣೆ ನೀಡತೊಡಗಿದರು. ಬರಬರುತ್ತಾ ನಂದಿಗುಡಿ ನಂದೀಶ್ವರ ಸ್ವಾಮಿಗಳು ಗುಡಿಯೊಳಗಿನ ಉತ್ಸವಮೂರ್ತಿಗಳಾಗುತ್ತಾ ಹೊರಟರು. ಮಠಗಳಲ್ಲಿ ಮಹೇಶ್ವರಪ್ಪ ಮತ್ತು ಶಿವರುದ್ರಪ್ಪನ ಹಿಡಿತ ಹೆಚ್ಚಾಗುತ್ತಾ ಹೋಯಿತು. ನಂದೀಶ್ವರರು ಬಡವರಿಗೆ, ಅಸಹಾಯಕರಿಗೆ ಸಹಾಯ ಮಾಡುವಂತೆ ಸಂಘ ಸಂಸ್ಥೆಗಳಿಗೆ ನೀಡಿದ ನಿರ್ದೇಶನಗಳೇ ತಿರಸ್ಕೃತಗೊಳ್ಳತೊಡಗಿದವು. ಉತ್ಸವ ಮೂರ್ತಿಯನ್ನು ಗುಡಿಯಿಂದ ಹೊರತಂದು ಮತ್ತೆ ಗುಡಿಯೊಳಗೆ ಸೇರಿಸುವ ಸಂಪ್ರದಾಯಗಳು ಉದ್ಭವವಾದವು!

ಆರ್ಥಿಕ ಸಹಾಯ ನೀಡುವವರಿಗೆ ಶ್ರೀಗಳಿಂದ ಹೇಳಿಸಿ, ಹಣ ತಂದು, ಶ್ರೀಗಳಿಗೆ ಹೇಳದೆ ಖರ್ಚು ಮಾಡುವ ಪದ್ಧತಿಗಳೂ ಆರಂಭಗೊಂಡವು.

24 ಗಂಟೆಯಲ್ಲಿ ಬ್ಯಾಂಕ್

ಹಾಸನದ ಪುಷ್ಪಗಿರಿ ಸಂಸ್ಥೆಯಲ್ಲಿ 24 ಗಂಟೆಯಲ್ಲಿ ಪುಷ್ಪಗಿರಿ ಸಹಕಾರಿ ಬ್ಯಾಂಕ್ ಸ್ಥಾಪಿಸಿದ ಹೆಗ್ಗಳಿಕೆ ಸ್ವಾಮೀಜಿಯವರದು. ಅವರ ಆದೇಶಕ್ಕೆ ಮರು ಮಾತನಾಡದ ಮುಗ್ಧ ಭಕ್ತರು ಲಕ್ಷಾಂತರ ಹಣವನ್ನು ಒಂದೇ ರಾತ್ರಿಯಲ್ಲಿ ಪುಷ್ಪಗಿರಿ ಸಹಕಾರಿ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟರು. ಇದಾದನಂತರ ಯಾರಾದರೂ ಶಿವರುದ್ರಪ್ಪನನ್ನು ಲೆಕ್ಕ ಕೇಳಿದರೆ "ವಸತಿಶಾಲೆ ನಿರ್ಮಾಣಕ್ಕೆ ನಿಮ್ಮ ಹಣ ಬಳಸಿದ್ದೇವೆ, ನಿಮಗೆ ಬೋನಸ್ ಕೊಡುತ್ತೇವೆ" ಎಂದು ಮೂಗಿಗೆ ತುಪ್ಪ ಸವರುವ ಕೆಲಸ ಪ್ರಾರಂಭಿಸಿದ.

ಈ ಮಧ್ಯೆ ಶಿವರುದ್ರಪ್ಪ ಇನ್ನೊಂದು ವರಸೆಯನ್ನು ಪ್ರಾರಂಭಿಸಿದ. ಪುಷ್ಪಗಿರಿ ಮಹಾಸಂಸ್ಥಾನ ಮಹಿಳಾ ವಸತಿ ನಿಲಯದ ಕಟ್ಟಡವನ್ನೂ ನಿರ್ಮಿಸಲು ಆರಂಭಿಸಿತು. ಅದಕ್ಕೂ ಭಕ್ತರು ಕೋಟ್ಯಂತರ ರೂಪಾಯಿಗಳ ದೇಣಿಗೆಯನ್ನು ನೀಡಿದರು. ಅದಕ್ಕೆ ತನ್ನ ಜಾಗವನ್ನೇ ನೀಡುವುದಾಗಿ ಶಿವರುದ್ರಪ್ಪ ಹೇಳಿದ. ಆದರೆ ಈಗ ನೋಡಿದರೆ ಆ ಜಾಗವನ್ನು ಸ್ವಾಮೀಜಿಗಳ ಹೆಸರಿಗೆ ನೊಂದಾಯಿಸದೇ, ತನ್ನ ಹೆಸರಿನಲ್ಲೇ ಇಟ್ಟುಕೊಂಡು ಕಟ್ಟಡವನ್ನು ಏರಿಸುತ್ತಿದ್ದಾನೆ. ಮುಂದೊಂದು ದಿನ ಇಡೀ ಕಟ್ಟಡವನ್ನು ನುಂಗಿ. ಹಾಕುವ ಹುನ್ನಾರ ಇದರ ಹಿಂದೆ ಇದೆ ಎಂದು ಅರಿತವರು ಶಿವರುದ್ರಪ್ಪನನ್ನು ಪ್ರಶ್ನಿಸಿದರೆ ಆತ ಹಾರಿಕೆಯ ಉತ್ತರಗಳನ್ನು ನೀಡುತ್ತಿದ್ದಾನೆ.

ಒಂದೆಡೆ ದಾವಣಗೆರೆಯ ಮಹೇಶ್ವರಪ್ಪನ ಬೆಂಬಲಿಗರು ನಂದೀಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಬೆಲೆ ನೀಡದೆ ತಮ್ಮದೇ ಆಡಳಿತ ಪ್ರಾರಂಭಿಸಿದ್ದರೆ, ಮತ್ತೊಂದೆಡೆ ವಿರೋಧಿಗಳು ಮತ್ತಷ್ಟು ಶಕ್ತಿ ಬೀರಲಾರಂಭಿಸಿದರು. ಶ್ರೀಗಳ ಸಾಮೀಪ್ಯದಲ್ಲಿಯೇ ಆಶ್ರಯ ಪಡೆದಿದ್ದ, ಅವರ ಲೆಕ್ಕಪತ್ರ ನೋಡಿಕೊಳ್ಳುತ್ತಿದ್ದ ಆಡಿಟರ್‌ವೊಬ್ಬ ಶ್ರೀಗಳ ವಿರುದ್ಧ ತಿರುಗಿಬಿದ್ದ. ಆತ ನಂದಿಗೌಡನೊಂದಿಗೆ ಸಾಮಿಪ್ಯ ಬೆಳೆಸಿ ಶ್ರೀಗಳ ವಿರುದ್ಧ ಆರೋಪಗಳ ಸುರಿಮಳೆ ಪ್ರಾರಂಭಿಸಿದ. ಕಂಡಕಂಡಲ್ಲಿ ಶ್ರೀಗಳ ಮೇಲೆ ಆಪಾದನೆಗಳನ್ನು ಮಾಡಿದ.

ಕಟ್ಟಿದ ದಳವೇ ತಿರುಗಿಬಿತ್ತು

ಆಡಳಿತ ಮಂಡಳಿ ಮತ್ತು ನಂದಿ ದಳದ ಯುವಕರು, ಆಡಿಟರ್ ಮತ್ತು ನಂದೀಗೌಡನ ಆರೋಪಗಳಿಗೆ ಶ್ರೀಗಳ ಬಳಿ ಪ್ರಶ್ನೆ ಕೇಳಲಾರಂಭಿಸಿದರು. 2000 ನೇ ವರ್ಷದಿಂದ ಇಲ್ಲಿಯವರೆಗೆ ಸ್ವಾಮಿಗಳಿಗೆ ಬಂದ ವೈಯಕ್ತಿಕ ಕಾಣಿಕೆಯನ್ನು ಸ್ವತಃ ಇಟ್ಟುಕೊಂಡಿದ್ದಾರೆ, ಈ ಮೊತ್ತ ಕೋಟಿಗಟ್ಟಲೆ ಇದೆ ಎಂದು ಅನುಮಾನ, ಪ್ರಶ್ನೆಗಳು ಎದುರಾದವು! ಶ್ರೀ ಸಿದ್ಧರಾಮೇಶ್ವರ ಜಯಂತಿಯನ್ನು ಮಾಡುತ್ತಿದ್ದ ಶ್ರೀಗಳು ಅದಕ್ಕೆಂದು ಬಂದ ಹಣವನ್ನು ಮಠದ ಲೆಕ್ಕಕ್ಕೆ ನೀಡಿಲ್ಲ ಎಂಬ ಪುಕಾರು ಎಬ್ಬಿಸಿದರು.

ಒಂದೆಡೆ ತನ್ನ ಮಾತಿಗೆ ಕಿಮ್ಮತ್ತಿಲ್ಲ, ಮತ್ತೊಂದೆಡೆ ವಿರೋಧಿಗಳ ಆಪಾದನೆ, ಮಗದೊಂದೆಡೆ ತನ್ನದೇ ಶಿಷ್ಯರಿಂದ ಪ್ರಶ್ನೆಗಳು. ಇದೆಲ್ಲದರಿಂದ ಬೇಸತ್ತ ನಂದೀಶ್ವರರು ದಾವಣಗೆರೆ ಮಠಗಳಿಗೆ ವಿದಾಯ ಹೇಳಿ ಕಾವಿ ಬಟ್ಟೆಯನ್ನೇ ಕಳಚಿಡುತ್ತೇನೆ ಎಂದು ಭಾವುಕರಾಗಿ ಹೇಳಿ ಯಲಗುಂದದ ಮಠದಲ್ಲಿ ಬಂದು ಕುಳಿತರು. ಅವರನ್ನು "ಪುನಃ ಬನ್ನಿ. ನಿಮಗೆ ಗೌರವ ನೀಡುತ್ತೇವೆ. ನೀವು ಪ್ರಶ್ನಾತೀತರು" ಎಂದು ಕರೆಯಲು ಬಂದ ದಾವಣಗೆರೆಯ ಭಕ್ತರಿಗೆ "ನನ್ನ ನಿರ್ಧಾರ ಅಚಲ" ಎಂದು ಹೇಳಿ ಕಳುಹಿಸಿದ್ದರು.

ಸ್ವತಃ ಶಾಸಕ ಶಾಮನೂರು ಶಿವಶಂಕರಪ್ಪ ಅವರೇ ಗುರುವಂದನೆಗೆಂದು ಬಂದು "ಆಗಿರುವ ಪ್ರಮಾದಗಳನ್ನು ಮರೆತು ನಿಮ್ಮ ಕರ್ತವ್ಯವನ್ನು ಮುಂದುವರೆಸಿ" ಎಂದು ಕೇಳಿಕೊಂಡಾಗಲೂ ಉತ್ತರ ನೀಡದೆ ಮೌನ ವಹಿಸಿದ್ದರು. ಡಿಸೆಂಬರ್ 25 ರ ಗುರುವಂದನೆ ಮತ್ತು ಬೆಳ್ಳಿಹಬ್ಬಕ್ಕೆ ಎರಡು ತಿಂಗಳು ಮೊದಲೇ ಅವರು ತಮ್ಮ ಮೂಲಸ್ಥಾನ ಯಲಗುಂದಕ್ಕೆ ಬಂದು ವಾಸ್ತವ್ಯ ಹೂಡಿದ್ದದ್ದು ಅದಕ್ಕಾಗಿ!

ಈಗ ನೋಡಿದರೆ ಯಾರಿಗೂ ಹೇಳದೆ ಮಾಯವಾಗಿದ್ದಾರೆ. ಅವರು ಎಲ್ಲಿದ್ದಾರೆ ಎಂದು ಗೊತ್ತಿಲ್ಲದಿದ್ದರೂ "ಅವರು ಕಾಶಿಯಲ್ಲಿದ್ದಾರೆ, ಸದ್ಯದಲ್ಲೇ ಹಿಂದಿರುಗುತ್ತಾರೆ" ಎಂದು ಮಠದಲ್ಲಿರುವವರು ಹೇಳುತ್ತಿದ್ದಾರೆ. ಮಠದಲ್ಲಿ ವಿದ್ಯಾದಾಸೋಹ ಪಡೆಯುತ್ತಿರುವ ನಾಲ್ಕು ಸಾವಿರ ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಸುತ್ತಮುತ್ತಲಿನ ಗ್ರಾಮಸ್ಥರೇ ನಿರ್ವಹಿಸುತ್ತಿದ್ದಾರೆ.



ಭಕ್ತ ಸಮೂಹದೊಂದಿಗೆ ನೊಣಬ ಸ್ವಾಮೀಜಿ

"ನಮ್ಮ ಬುದ್ಯೋರು ಯಾವಾಗ ಬರುತ್ತಾರೊ" ಎಂದು ಅವರೆಲ್ಲ ಕಾಯುತ್ತಿದ್ದಾರೆ. ಆದರೆ ಸ್ವಾಮಿಗಳು ಯಾವ ಸಂದೇಶವನ್ನೂ ಇಲ್ಲಿಯತನಕ ರವಾನಿಸಿಯೇ ಇಲ್ಲ.

-ವೇಣುಕುಮಾರ್

ಒಟ್ಟಿ ರಾಜಕಾರಣಿಗಳ ಪ್ರೀತಿ ಗಳಿಸುವಲ್ಲಿ ಪೇಜಾವರ ನ್ನು ಹಿಂದಿಕ್ಕಿ ಈಗ ಮುಂಚೂಣಿಯಲ್ಲಿರುವ ರಾಮಚಂದ್ರಾ ಪುರ ಮಠದ ರಾಘವೇಶ್ವರ ಸ್ವಾಮೀಜಿ ನೇತೃತ್ವದ ಸರ್ಕಾರಿ ಪ್ರಾಯೋಜಿತ, ಒಂಬತ್ತು ದಿನಗಳ 'ವಿಶ್ವ ಗೋ ಸಮ್ಮೇಳನ' ಈಗ ನಡೆಯುತ್ತಿದೆ.

ರಾಮಮಂದಿರ ನಿರ್ಮಾಣ ವಿಷಯಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ 'ಗೋ ರಕ್ಷಣೆ' ವಿಷಯವನ್ನು ರಾಜಕೀಯವಾಗಿ ಬಳಸಿಕೊಳ್ಳಬಹುದು ಎಂಬ ಸಂಘ ಪರಿವಾರದವರ ಹೊಸ ಲೆಕ್ಕಾಚಾರಕ್ಕೆ ಪೂರಕವಾಗಿ ಈ 'ಗೋ' ಸ್ವಾಮೀಜಿ ನಡೆಸುತ್ತಿರುವ ಈ ಸಮ್ಮೇಳನಕ್ಕೆ ವಿತ್ತ ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಯಡ್ಡಿ ರಾಜ್ಯದ ದುಡ್ಡು ನಮ್ಮಪ್ಪನದೆಂಬಂತೆ 2 ಕೋಟಿ ರೂ. ಕೊಟ್ಟು ಸಂಘಪರಿವಾರದ ಪ್ರೀತಿಗೆ ಪಾತ್ರರಾಗಿದ್ದಾರೆ.

ಉತ್ತರ ಭಾರತದ ನಾಲ್ಕಾರು ಜಾತಿಯ ದನಗಳನ್ನು ಒಂದು ಮಠದಲ್ಲಿ ಕಟ್ಟಿಹಾಕಿ, ಒಂದಿಷ್ಟು ಹಾಡು, ಭಜನೆ, ಹೋಮ-ಹವನ ಮಾಡಿ, ಬಂದ ಬ್ರಾಹ್ಮಣರಿಗೆ ಪಾನಕ, ನೀರು ಕುಡಿಸಿ, ಸರಿಯಾಗಿ ತಿನ್ನಿಸುವುದು ಈ ಸಮ್ಮೇಳನದ ಮುಖ್ಯ ಕಾರ್ಯಕ್ರಮಗಳು. ಅಚ್ಚುಕಟ್ಟಾಗಿ ಇಷ್ಟನ್ನು ಮಾಡಿದ್ದಕ್ಕೇ 'ಥ್ರಿಲ್' ಆಗಿರುವ ಪತ್ರಕರ್ತರಂತೂ ನಿರೀಕ್ಷೆಯಂತೆ ಸಮ್ಮೇಳನವನ್ನು ಹಾಡಿ ಹೊಗಳಲಾರಂಭಿಸಿದ್ದಾರೆ.

ಸರ್ಕಾರಿ ದುಡ್ಡಿನೊಂದಿಗೆ, ದಾನದ ಹೆಸರಿನಲ್ಲಿ ರೈತರ ಹಣವನ್ನು ಕಿತ್ತುಕೊಂಡು ಇಷ್ಟನ್ನೇ ಮಾಡಿದ್ದರೆ ಹೋಗಲಿ ಎಂದು ಬಿಡಬಹುದಿತ್ತು. ಆದರೆ ಈ ಸ್ವಾಮೀಜಿ ದನಗಳ ಮೇಲಿನ 'ಅತಿ ಪ್ರೀತಿ' ತೋರಲು ಹೋಗಿ ನಮ್ಮ ದೇಶದಲ್ಲಿನ ಅಮೂಲ್ಯ ಜಾನುವಾರು ತಳಿಗಳ ಬಗ್ಗೆ ವಿದೇಶಿ ವಿದ್ವಾಂಸರಿಗೆ ಮಾಹಿತಿ ನೀಡುವ ಮೂಲಕ ಅವುಗಳ 'ಜೀನ್ಸ್' ಲೂಟಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ.

ಈ ದನ ಸಮ್ಮೇಳನಕ್ಕೆ ಡೆನ್ಮಾರ್ಕ್ ಸೇರಿದಂತೆ ವಿದೇಶಗಳ ವಿಜ್ಞಾನಿಗಳು, ವಿದೇಶಿ ವಿವಿಗಳ ಪ್ರೊಫೆಸರ್‌ಗಳು ಬಂದಿದ್ದಾರೆ. ವಿಚಾರ ಸಂಕಿರಣದ ಹೆಸರಿನಲ್ಲಿ ನಡೆಯುವ ಈ ಮಾಹಿತಿ ವಿನಿಮಯ ಕಾರ್ಯಕ್ರಮದ ಲಾಭ ಮುಂದೆ ಖಂಡಿತವಾಗಿಯೂ ವಿದೇಶಿಯವರಿಗೇ ಆಗುವ ಎಲ್ಲಾ ಲಕ್ಷಣಗಳೂ ಕಂಡುಬರುತ್ತಿವೆ.

ಉದಾಹರಣೆಗೆ, ಕೇರಳದ ಅಪರೂಪದ ಜಾನುವಾರು ತಳಿ 'ವೆಚ್ಚೂರ್'ನ 'ಜೀನ್ಸ್' ಮೇಲಿನ ಹಕ್ಕು ಈಗ ವಿದೇಶಿ ಸಂಸ್ಥೆಯ ಪಾಲಾಗಿದೆ.

ರಾಮಚಂದ್ರಾಪುರ ಮಠದ ಸ್ವಾಮಿಗಳ ಮೋಡಿಗೆ ಸಿಲುಕಿರುವ ಗಾಯಕ ಏಸುದಾಸ್ 2004ರ ಜನವರಿಯಲ್ಲಿ ಈ 'ವೆಚ್ಚೂರ್'ತಳಿಯ ಹೋರಿಯೊಂದನ್ನು ಸ್ವಾಮಿಗಳಿಗೆ ನೀಡಿದ್ದರು. ಸ್ವಾಮೀಜಿ ಈ ಹೋರಿಯನ್ನು ಏನು ಮಾಡಿದರೋ ಗೊತ್ತಿಲ್ಲ. ಅಸಲಿ ವಿಷಯವೆಂದರೆ ಈ ತಳಿಯ ಜೀನ್ಸ್‌ನ್ನು, ಪ್ರಾಣಿಗಳ ಜೀನ್ಸ್ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿರುವ ವಿಶ್ವದ ಪ್ರಖ್ಯಾತ ಸಂಸ್ಥೆ 'ರೊಸ್ಲಿನ್ ಇನ್‌ಸ್ಟಿಟ್ಯೂಟ್' ಈಗಾಗಲೇ ಅಪಹರಿಸಿದೆ.

ಈ 'ವೆಚ್ಚೂರ್' ಜಾತಿಯ ದನಗಳು ವಿಶ್ವದಲ್ಲಿಯೇ ಅತ್ಯಂತ ಸಣ್ಣದಾದ ದನಗಳು. ಪ್ರೌಢಾವಸ್ಥೆಯಲ್ಲಿರುವ ಈ ದನಗಳ ಎತ್ತರ ಕೇವಲ 87 ಸೆ.ಮೀ. ಉದ್ದ 124 ಸೆ.ಮೀ. ತೂಕ ಹೆಚ್ಚೆಂದರೆ 125 ಕೆ.ಜಿ. ಕೇರಳದ ಪಶು ವಿಶ್ವವಿದ್ಯಾನಿಲಯ ಅಳಿವಿನಂಚಿನಲ್ಲಿರುವ ಈ ಜಾನುವಾರು ತಳಿಯನ್ನು ಉಳಿಸಲು ಪ್ರಯತ್ನಿಸುತ್ತಿದೆ.

ಈ ಜಾತಿಯ ದನಗಳ ಮತ್ತೊಂದು ವಿಶೇಷವೆಂದರೆ ಅವುಗಳ ಹಾಲಿನಲ್ಲಿ ಕೊಬ್ಬಿನಾಂಶ ಬಹಳ ಜಾಸ್ತಿ. ಯುರೋಪ್‌ನ ದನಗಳ ಹಾಲಿನಲ್ಲಿ ಶೇ.3.5 ರಿಂದ .5 ರಷ್ಟು ಕೊಬ್ಬಿನಾಂಶ ಇದ್ದರೆ ವೆಚ್ಚೂರ್ ತಳಿಯ ದನಗಳ ಹಾಲಿನಲ್ಲಿ ಶೇ.6.02 ರಿಂದ ಶೇ.7.86 ರಷ್ಟು ಕೊಬ್ಬಿನಾಂಶ ಇರುತ್ತದೆ.

ಈ ವಿಶೇಷತೆ ಮೇಲೆ ವಿದೇಶಿ ಸಂಶೋಧಕರ ಕಣ್ಣು ಬಿದ್ದಿತ್ತು. ಕೊಬ್ಬಿನಾಂಶ ಹೆಚ್ಚಾಗಿ ಇರಲು ಕಾರಣವಾದ ಜೀನ್ಸ್'ನ್ನು ಪತ್ತೆ ಹಚ್ಚಿದ 'ರೊಸ್ಲಿನ್ ಇನ್‌ಸ್ಟಿಟ್ಯೂಟ್' ಅದನ್ನು ತನ್ನದಾಗಿಸಿಕೊಂಡಿದೆ.

ಈ 'ರೊಸ್ಲಿನ್ ಇನ್‌ಸ್ಟಿಟ್ಯೂಟ್' ಎಂದರೆ ಕ್ಲೋನಿಂಗ್ ತಂತ್ರಜ್ಞಾನದ ಮೂಲಕ ಕೃತಕವಾಗಿ ಮೊಟ್ಟಮೊದಲ ಕುರಿಮರಿ 'ಡಾಲಿ'ಯನ್ನು ಸೃಷ್ಟಿಸಿದ ಸಂಸ್ಥೆ. ಈ ಸಂಸ್ಥೆ ಸ್ಕಾಟ್‌ಲ್ಯಾಂಡಿನ 'ಪಿಪಿ ಎಲ್ ಥೆರಾಪಿಟಿಕ್ಸ್ ಲಿ' ಎಂಬ ಬಹುರಾಷ್ಟ್ರೀಯ ಸಂಸ್ಥೆಯೊಂದಿಗೆ ಸೇರಿಕೊಂಡು ಪ್ರಪಂಚದಲ್ಲಿರುವ ಅಪರೂಪದ ಜೀನ್ಸ್‌ಗಳ ಹಕ್ಕನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾ ಬಂದಿದೆ. ಇದೇ ರೀತಿಯಾಗಿ ವೆಚ್ಚೂರ್ ತಳಿಯ 'ಜೀನ್ಸ್'ನ್ನು ಅಪಹರಿಸಿದೆ. (ಪೇಟೆಂಟ್ ನಂ: ಇಪಿ 0765390)

ಇದೇ ರೀತಿಯಲ್ಲಿ ನಮ್ಮ ದೇಶದಲ್ಲಿ ಇನ್ನೂ ಅನೇಕ ಅಪರೂಪದ ಜಾನುವಾರು ತಳಿಗಳಿವೆ. ಮಲೆನಾಡಿನ ಗಿಡ್ಡ, ಉತ್ತರ ಭಾರತದ ಗಿರ್, ಹಲಿಕರ್, ಸಿಂಧಿ, ಕಿಲ್ಲಾರಿ, ಅಮೃತ್‌ಮಹಲ್, ದೇವಣಿ, ಕೃಷ್ಣಾತೀರ, ಹರಿಯಾಣ, ಮಾಲ್ವಿ, ಡಂಗಿ, ದನ್ನಿ, ತಾರಿ ಇನ್ನಿತರ ತಳಿಗಳಿವೆ. ಈಗ ರಾಜಕೀಯ ಕಾರಣದಿಂದ 'ಗೋ ಉಳಿಸಿ' ಚಳವಳಿ ನಡೆಸುವ ಮೂಲಕ ಅವುಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಇದಕ್ಕೆ ವಿದೇಶಿ ಸಂಸ್ಥೆಗಳು, ವ್ಯಕ್ತಿಗಳು ಹಣವನ್ನು 'ದೇಣಿಗೆ' ನೀಡುತ್ತಿರುವ ಉದಾಹರಣೆಗಳಿವೆ. ವಿದೇಶಿ


ಮಲೆನಾಡು ಗಿಡ್ಡಿ

ಗೋ 'ತಳಿ' ಲೂಟಿಗೆ ನೆರವಾಗುವ

ಗೋ ಸಮ್ಮೇಳನ

ಹಣ ಪಡೆಯುವ 'ಕಪಟ' ದೇಶಭಕ್ತ ಸಂಘಟನೆಗಳು ಅಧ್ಯಯನ, ಗೋರಕ್ಷಣೆ ಹೆಸರಿನಲ್ಲಿ ನಮ್ಮ ಅಪರೂಪದ ತಳಿಗಳ ಬಗ್ಗೆ ವಿದೇಶದ ಪ್ರಯೋಗಾಲಯಗಳಿಗೆ ಮಾಹಿತಿ ರವಾನಿಸುವ ಕೆಲಸ ಮಾಡುತ್ತಿವೆ. ಆಸ್ಟ್ರೇಲಿಯಾ ಮತ್ತು ಅಮೆರಿಕಾಗೆ ಈ ರೀತಿಯಲ್ಲಿ ಮಾಹಿತಿ ರವಾನೆಯಾಗಿರುವ ಅನುಮಾನಗಳಿವೆ.

'ಗೋ' ಸ್ವಾಮೀಜಿ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿಟ್ಟು, ವಿದೇಶಿ ಸಂಶೋಧಕರನ್ನು ಕರೆಸಿ, ಅವರಿಗೆ ಆತಿಥ್ಯ ನೀಡಿ, 'ಜೀನ್ಸ್' ಲೂಟಿಗೆ ರತ್ನಗಂಬಳಿ ಹಾಸುತ್ತಿದ್ದಾರೇನೋ ಎಂಬ ಆತಂಕ ಕಾಡುತ್ತಿದೆ. ಹಿಂದೂತ್ವ ಮತ್ತು ದೇಶಭಕ್ತಿಯ ಹೆಸರಿನಲ್ಲಿ ರಾಜಕೀಯ ಮಾಡಿದ ಸಂಸದ, ಮನುಷ್ಯರನ್ನೇ ವಿದೇಶಕ್ಕೆ ಮಾರುತ್ತಿರುವಾಗ 'ಗೋ ಸಮ್ಮೇಳನ' ದ ಹೆಸರಿನಲ್ಲಿ ತೆರೆಮರೆಯಲ್ಲಿ ಬೇರೆ ವ್ಯವಹಾರ ನಡೆಯುತ್ತಿದೆಯೇನೋ ಎಂಬ ಅನುಮಾನ ಮೂಡದಿರದು.

ಸರ್ಕಾರದ ದುಡ್ಡು ಬೇಕು, ಬೇರೇನೂ ಬೇಡ!

ಈ ಸಮ್ಮೇಳನಕ್ಕೆ ಸರ್ಕಾರ 2 ಕೋಟಿ ಕೊಟ್ಟಿದೆ. ಆದರೆ ಸಮ್ಮೇಳನದಿಂದ ಏನಾದರೂ ಪ್ರಯೋಜನವಿದೆಯೇ ಎಂದು ನೋಡಿದರೆ ಅದೂ ಇಲ್ಲ. ಜಾನುವಾರುಗಳನ್ನು ನೋಡಿಕೊಳ್ಳಲೆಂದೇ ಸರ್ಕಾರದ ಇಲಾಖೆಯೊಂದಿದೆ. 'ಪಶುಸಂಗೋಪನ ಇಲಾಖೆ' ಎಂದು. ಪಶು ವಿವಿ.ಗಳಿವೆ. ಕೃಷಿ ವಿವಿ.ಗಳಲ್ಲಿ ಜಾನುವಾರುಗಳಿಗೆ ಸಂಬಂಧಪಟ್ಟಂತೆ ವಿಭಾಗಗಳಿವೆ. ಪಶುಸಂಶೋಧನಾ ಕೇಂದ್ರಗಳಿವೆ. ಇಲ್ಲಿಯ ತಜ್ಞರಿಗೆ ಈ ಸಮ್ಮೇಳನಕ್ಕೆ ಅಧಿಕೃತ ಆಹ್ವಾನವೇ ಇಲ್ಲ. ಸರ್ಕಾರದ ಹಣದಲ್ಲಿ ಈ ಸಮ್ಮೇಳನ ನಡೆಯುತ್ತಿದ್ದರೂ ಅದರ ಲಾಭ ಸರ್ಕಾರಿ ಇಲಾಖೆ, ಸಂಸ್ಥೆಗಳಿಗೆ ದೊರೆಯದಂತೆ 'ಗೋ' ಸ್ವಾಮಿಗಳು ನೋಡಿಕೊಂಡಿದ್ದಾರೆ. ಇದರ ಉದ್ದೇಶವೇನೋ ಗೋಮಾತೆಗಳೇ ಹೇಳಬೇಕು. ಈ ಬಗ್ಗೆ ಕೇಳಿದರೆ ಆಸಕ್ತಿ ಇದ್ದವರು ಬರಬಹುದು ಎನ್ನುತ್ತದೆ ಮಠ. ಇಲ್ಲಿ ಯಾರಿಗೆ ಯಾವುದರಲ್ಲಿ ಆಸಕ್ತಿ ಎಂಬುದನ್ನು ಬಿಡಿಸಿ ಹೇಳಬೇಕಾಗಿಯೇನೂ ಇಲ್ಲ.

'ಗೋ ಮೂತ್ರ' ವ್ಯಾಪಾರ!

ದನಗಳ 'ಮೂತ್ರ'ದ ಬಗ್ಗೆ ವಾಕರಿಕೆ ಬರುವಷ್ಟು ಪ್ರೀತಿ ತೋರುವ ಗೋ ಸ್ವಾಮೀಜಿ 'ಇದು ಸರ್ವರೋಗಕ್ಕೂ ಮದ್ದು' ಎಂಬಂತೆ ಮಾತನಾಡುತ್ತಾರೆ. ಮಠದ ವತಿಯಿಂದ ಗೋಮೂತ್ರವನ್ನು ಔಷಧಿ ಎಂದು ಮಾರುತ್ತಿರುವುದನ್ನು ಗಮನಿಸಿದ ಔಷಧ ಪ್ರಾಧಿಕಾರ ಈಗಾಗಲೇ ಒಂದು ಬಾರಿ ಎಚ್ಚರಿಕೆಯ ನೋಟೀಸ್ ನೀಡಿದೆ. ವೈಜ್ಞಾನಿಕವಾಗಿ ಹೇಳಬೇಕೆಂದರೆ ಮೂತ್ರ ಎಂದರೆ ದೇಹದಲ್ಲಿನ ಕಲ್ಮಶ ಹೊರಬರುವುದು. 'ಕಸದಿಂದ ರಸ ತೆಗೆಯಬಹುದು' ಎಂಬಂತೆ ಈ ಮೂತ್ರದಿಂದ ಕೆಲ ಉಪಯೋಗಗಳೂ ಉಂಟು. ಇದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಗೋ ಸ್ವಾಮಿಗಳು ಈ ಮೂತ್ರದ ಬಗ್ಗೆ ಮಾತಾಡುವುದನ್ನು ನೋಡಿ ದನಗಳ ಜೊತೆಗೆ ಬದುಕುತ್ತಿರುವ ರೈತರೂ ಮುಸಿಮುಸಿ ನಗುತ್ತಿದ್ದಾರೆ.

ಈ ಬಗ್ಗೆ ವೈಜ್ಞಾನಿಕ ಸಂಶೋಧನೆಗಳ ಅಗತ್ಯ ಬಹಳ ಇದೆ. ಸಮ್ಮೇಳನದಲ್ಲಿ ಚರ್ಚೆ ನಡೆಸಿದ ಮಾತ್ರಕ್ಕೆ, ಹಾಡು ಕಟ್ಟಿ ಭಜನೆ ಮಾಡಿದ ಮಾತ್ರಕ್ಕೆ ವೈಜ್ಞಾನಿಕ ಸತ್ಯಸಂಗತಿಗಳು ಹೊರಬರುವುದಿಲ್ಲ. ಇದೇನೂ ಈ ಸ್ವಾಮೀಜಿಗೂ ಬೇಕಾದ ವಿಷಯವೇನೂ ಅಲ್ಲ.

ದನಗಳನ್ನು ಸಾಕಿಕೊಂಡೇ ಕೃಷಿ ಮಾಡುತ್ತಾ ಬಂದಿರುವ 'ಹವ್ಯಕರು' ಸ್ವಾಮೀಜಿ ಗೋಮೂತ್ರ ಮತ್ತು ಸಗಣಿಗೆ ನೀಡುತ್ತಿರುವ ಪ್ರಚಾರದ ಪರಿಯನ್ನು ನೋಡಿ 'ನಮಗೆ ಹಾಲು ಕುಡಿದು ಗೊತ್ತಿತ್ತು, ಈಗ ಮೂತ್ರ ಮತ್ತು ಸಗಣಿಯನ್ನು ಮಾರಿ ದುಡ್ಡು ಮಾಡುವುದು ಹೇಗೆಂದು ಇವರು ಹೇಳಿಕೊಟ್ಟಾರು' ಎಂದು ಎಲೆಅಡಿಕೆ ಜಗಿಯುತ್ತಾ ಬಾಯ್ತುಂಬಾ ನಗುತ್ತಿದ್ದಾರೆ.

ಕೊನೆಗೂ ಸರ್ಕಾರಿ ಪ್ರಾಯೋಜಿತ ಈ ಸಮ್ಮೇಳನದ ಯಶಸ್ಸೆಂದರೆ ಇಷ್ಟೇ ಏನೋ?



ರಜೆಯ ಮಜಾಕ್ಕೆ ಮಠಕ್ಕೆ ಪ್ರಯಾಣ!


ಕಳೆದ ವರ್ಷ 'ರಾಮಾಯಣ ಮಹಾಸತ್ರ' ನಡೆಸಿದ ಸ್ವಾಮೀಜಿ ಈ ವರ್ಷ ಗೋ ಸಮ್ಮೇಳನ ನಡೆಸುತ್ತಿದ್ದಾರೆ. ಅದೂ ಬೇಸಿಗೆ ರಜೆಯ ಸಮಯದಲ್ಲಿ, ಹೀಗಾಗಿ ರಾಮಚಂದ್ರಾಪುರ ಈಗ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. ಕಾರ್ಯಕ್ರಮ ಯಾವುದಾದರೇನು 'ಹುಚ್ಚನ ಮದ್ವೇಲಿ ಉಂಡವನೇ ಜಾಣ' ಎಂಬಂತೆ ಜನಸಾಗರವೇ ಹರಿದು ಬರುತ್ತಿದೆ. ಸರ್ಕಾರಿ ದುಡ್ಡಲ್ಲಿ ಮಠ ಮಾಡಿದ ವ್ಯವಸ್ಥೆಯನ್ನು ನೋಡಿ ಹಾಡಿ ಹೊಗಳಿ ಹಿಂದಿರುಗುತ್ತಿದ್ದಾರೆ. ಒಂದಿಷ್ಟು ಭಕ್ತಿ ಇದ್ದವರಿಗೆ ಹೋಮ-ಹವನ-ಭಜನೆ. ಉಳಿದರಿಗೆ ಉತ್ತರ ಭಾರತದಿಂದ ತಂದ ವಿವಿಧ ತಳಿಯ ದನಗಳ ಆಕರ್ಷಣೆ. ಮಠ ಮಾತ್ರ ಈಗ 'ವರ್ಲ್ಡ್ ಫೇಮಸ್ಸು'

ಕಳೆದ ವರ್ಷದ 'ಸತ್ರ'ದ ಸಂದರ್ಭದಲ್ಲಿ 'ಬೆಂಕಿಗೆ ತುಪ್ಪ' ಸುರಿಯುವುದರಿಂದ ಆಗುವ ಪರಿಣಾಮಗಳ ಬಗ್ಗೆ 'ವೈಜ್ಞಾನಿಕ' ಅಧ್ಯಯನ ನಡೆಸಲಾಗುತ್ತಿದೆ ಎಂದು ಹೇಳಲಾಗಿತ್ತು. ಈ ವೈಜ್ಞಾನಿಕ ವರದಿ ಒಂದು ವರ್ಷ ಕಳೆದರೂ ಹೊರಬಂದಿಲ್ಲ, ಇದರ ಅಧ್ಯಯನಕ್ಕೆ ವಿದೇಶದಿಂದ ಬಂದವರು ಏನೆಂದು ವರದಿ ನೀಡಿದ್ದಾರೋ ಗೊತ್ತಿಲ್ಲ, ಈ ಸಮ್ಮೇಳನದಲ್ಲಿ ವರದಿ ಬಿಡುಗಡೆಯಾಗಲಿದೆ ಎಂದು ತಿಳಿಸಲಾಗಿದೆ. ಈ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ನಡೆಯುತ್ತದೆ ಎಂದು ಭಾವಿಸಿದ್ದ ಹೋಮದ ಭಟ್ಟರುಗಳಿಗಂತೂ ಇದೆಲ್ಲಾ ಈಗ ಮರೆತೇ ಹೋಗಿದೆ!

ಅಮೃತ್ ಮಹಲ್ ತಳಿಯನ್ನು ರಕ್ಷಿಸುತ್ತಿಲ್ಲ ಯಾಕೆ?

ರಾಮಚಂದ್ರಾಪುರ ಮಠದ ಗೋವಿನ ಗೀತೆಯ ಜನಕ್ಕೆ ಎರಡು ಕೋಟಿ ನೀಡಿರುವ ಯಡ್ಡಿ ಮತ್ತವರ ಪಟಾಲಂ ಅಲ್ಲೇ ಠಿಕಾಣಿ ಹೂಡಿ ಯಜ್ಞ ಯಾಗ ಇತ್ಯಾದಿ ಜೀವವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಈ ಸಮಯದಲ್ಲಿ ಕರ್ನಾಟಕದ ನಿಜವಾದ ಗೋಸಂಪತ್ತು ಯಾವುದು ಎಂಬುದನ್ನು ಮನವರಿಕೆ ಮಾಡಿಕೊಡಬೇಕಿದೆ.

ಈ ದೇಶದ ಶಕ್ತಿಶಾಲಿ ದನಗಳ ಪೈಕಿ ಅಮೃತ್‌ಮಹಲ್ ತಳಿ ಮೊದಲ ಸ್ಥಾನದಲ್ಲಿದೆ. ಉತ್ತರ ಭಾರತದಿಂದ ಗೊಲ್ಲರ ಜೊತೆ ಕರ್ನಾಟಕಕ್ಕೂ ಬಂದ ಈ ಅಮೃತ್ ಮಹಲ್ ತಳಿಯ ವಿಶೇಷವೇನೆಂದರೆ ಇದಕ್ಕೆ ಸತತವಾಗಿ ಹದಿನೆಂಟು ಗಂಟೆ ಕೆಲಸ ಮಾಡುವ ಶಕ್ತಿಯಿದೆ. ಇದರ ಶಕ್ತಿ ಸಾಮರ್ಥ್ಯವನ್ನು ತಿಳಿದುಕೊಂಡ ಮೈಸೂರ ಮಹಾರಾಜರು 1572 ರಲ್ಲಿ ಇದರ ಅಭಿವೃದ್ಧಿಗಾಗಿ ಕಾಳಜಿ ವಹಿಸಿದರು. ಆ ಕಾರಣವಾಗಿ ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ನಾಲ್ಕು ಲಕ್ಷ ಎಕರೆ ಹುಲ್ಲುಗಾವಲನ್ನು ಮೀಸಲಿರಿಸಿ ಅವುಗಳನ್ನು ನೋಡಿಕೊಳ್ಳಲು ಜನರನ್ನು ನೇಮಿಸಿದರು. ಇಂತಹ ಒಂದು ಕೇಂದ್ರವನ್ನು ಅಜ್ಜಂಪುರದಲ್ಲಿ ಸ್ಥಾಪಿಸಿದ್ದಲ್ಲದೆ ನುರಿತ ಪಶುವೈದ್ಯರು, ನಿರ್ದೇಶಕನ್ನೊಳಗೊಂಡ 120 ಜನ ಕಾರ್ಮಿಕರು ಈ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಈ ಕೇಂದ್ರದ ಉದ್ದೇಶ ಅಮೃತ್‌ಮಹಲ್ ತಳಿಯನ್ನು ಅಭಿವೃದ್ಧಿಪಡಿಸಿ ಎಳೆಗರುಗಳನ್ನು ಸುಲಭದ ಬೆಲೆಯಲ್ಲಿ ರೈತರಿಗೆ ಹರಾಜು ಹಾಕುವುದು.



ಈ ಕ್ರಮ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದ್ದಂತೆಯೇ ರಾಜಕಾರಣಿಗಳು ಮತ್ತು ಭೂಗಳ್ಳರ ಕಣ್ಣು ಫಲವತ್ತಾದ ಹುಲ್ಲುಗಾವಲ ಮೇಲೆ ಬಿತ್ತು. ಕೂಡಲೇ ಬೇಲಿ ಹಾಕಿಕೊಂಡಿದ್ದರ ಪರಿಣಾಮವಾಗಿ ಈ ನಾಲ್ಕು ಲಕ್ಷ ಎಕರೆ ಹುಲ್ಲುಗಾವಲಿನ ಜಾಗದಲ್ಲಿ ಈಗ ಕೇವಲ 23 ಸಾವಿರ ಎಕರೆಗಳು ಉಳಿದಿವೆ. ಆದ್ದರಿಂದ ಅಮೃತ್‌ಮಹಲ್ ತಳಿ ಕೂಡ ಅವಸಾನದ ಅಂಚಿನಲ್ಲಿದೆ.

ಈಗ ಅಜ್ಜಂಪುರ ಅಮೃತ್‌ಮಹಲ್ ಕೇಂದ್ರಕ್ಕೆ ಎಂದಾದರೂ ಬಾಗಿಲು ಹಾಕುವ ಸಲುವಾಗಿ ಕಾಯುತ್ತಿರುವವರಂತೆ ನಾಲ್ವರು ಸಿಬ್ಬಂದಿಗಳಿದ್ದಾರೆ. ದನಗಳ ಸಂಖ್ಯೆ 50 ನ್ನು ದಾಟಿಲ್ಲ. ಇದೇ ಕೇಂದ್ರದಲ್ಲಿ ಒಮ್ಮೆ 800 ದನಗಳಿದ್ದವು.

ಈ ದನಗಳ ಮಾಹಿತಿ ಕೇಳಿದ್ದ ಪಿ. ಲಂಕೇಶರು 1985 ರಲ್ಲಿ ಅಜ್ಜಂಪುರಕ್ಕೆ ಹೋಗಿ ಅಮೃತ್‌ಮಹಲ್ ದನಗಳ ಹಾಲಿನ ಸವಿ ನೋಡಿದ್ದೂ ಅಲ್ಲದೆ ಎರಡು ಭರ್ತಿ ಟ್ರಾಕ್ಟರ್‌ಗಳನ್ನು ಎರಡೇ ಎತ್ತು ಎಳೆದುದನ್ನು ವಿಸ್ಮಯಕರವಾಗಿ ನೋಡಿ ದಾಖಲಿಸಿದ್ದರು. ಆನಂತರ ಇಲ್ಲಿ ನಿರ್ದೇಶಕರಾಗಿದ್ದ ಡಾ. ಟಿ.ಎಸ್. ಕೃಷ್ಣಮೂರ್ತಿ ನಿವೃತ್ತಿಯ ನಂತರವೂ ಈ ಕೇಂದ್ರದ ಅಭಿವೃದ್ಧಿಗೆ ಓಡಾಡಿದರೂ ಅವರನ್ನು ಯಾರೂ ಕ್ಯಾರೆ ಅನ್ನಲಿಲ್ಲ. ಕಡೆಗೆ ಅವರೂ ಸುಮ್ಮನಾದರು.

ರಾಮಚಂದ್ರಾಪುರ ಮಠಕ್ಕೆ ಎರಡು ಕೋಟಿ ಕೊಟ್ಟಿರುವ ಯಡ್ಡಿ ಕೇವಲ ಒಂದು ಕೋಟಿಯನ್ನು ಈ ಅಮೃತ್‌ಮಹಲ್‌ಗೆ ಕೊಟ್ಟರೆ ಸಾಕು ತಳಿಯನ್ನು ಅಭಿವೃದ್ಧಿಪಡಿಸಿ ರೈತರಿಗೆ ಕರುಗಳನ್ನು ವಿತರಿಸಬಹುದು. ಈ ರಾಘವೇಶ್ವರ ಸ್ವಾಮಿಗೂ ದನಗಳಿಗೂ ಯಾವ ಸಂಬಂಧವೂ ಇಲ್ಲ. ಕೇವಲ ಕರಾವಿನ ಹಸುವನ್ನು ದಾನ ತೆಗೆದುಕೊಂಡು ಕೆಚ್ಚಲು ಬತ್ತಿದ ನಂತರ ಅವನ್ನು ಕಾಡಿಗೆ ಅಟ್ಟುವ ಪರಂಪರೆಯವನಾದ ಈತ ಅಲ್ಲಿ ಕೂಡಿ ಕೊಂಡಿರುವ ದನಗಳಿಂದ ರೈತರಿಗೆ ಯಾವ ಪ್ರಯೋಜನವೂ ಇಲ್ಲ. ಸರ್ಕಾರದ ಸುಲಿಗೆಗೆ ನಿಂತಿರುವ ಈತ ಕ್ರಮೇಣ ಕಾಡನ್ನೇ ಕಾವಲಾಗಿ ಪರಿವರ್ತಿಸಿ ಬೇಲಿ ಹಾಕಿಕೊಂಡು ಜಮೀನನ್ನೆಲ್ಲಾ ತನ್ನ ಸುಪರ್ದಿಗೆ ತೆಗೆದುಕೊಂಡರೂ ಅಚ್ಚರಿ ಇಲ್ಲ.

ಗೋ ಸಮ್ಮೇಳನವನ್ನು ಒಂದು ಜನಾಂಗದ ಧ್ವೇಷದ ಸಮಾವೇಶವಾಗಿಯೂ ಪರಿವರ್ತಿಸುತ್ತಿರುವ ಈತ ಮಾಡುವ ಅಪಾಯಗಳು ಮುಂದೆ ಗೋಚರಿಸಲಿವೆ. ಆದರೆ ಈಗ ಸದ್ಯಕ್ಕೆ ನಮ್ಮ ರೈತರ ಶಕ್ತಿ ಕೇಂದ್ರವಾದ ಅಮೃತ್‌ಮಹಲ್ ಉಳಿಸಿಕೊಳ್ಳಬೇಕಾದವರು ಯಾರು ಎಂಬ ಪ್ರಶ್ನೆ ಬೃಹದಾಕಾರವಾಗಿ ನಿಂತಿದೆ.

-ವರದಿಗಾರ

ರಿವೇಂಜ್ ಕಿಲ್ಲಿಂಗ್ಸ್ 26

ರಾ. ಸೋಮನಾಥ್


ಕೋತಿ ರಾಮ


ಕೋತಿರಾಮನ ರಿವೇಂಜ್

ಮಚ್ಚ ಕೊಲೆಯಾದ ಗಳಿಗೆಯಲ್ಲಿ ಆತನ ಜೊತೆಗಿದ್ದು ಕೈಗೆ ಮಚ್ಚಿನೇಟು ತಿಂದಿದ್ದ ಆತನ ಪರಮಾಪ್ತ ಕೋತಿರಾಮ ತನ್ನ ಕೈಗೆ ಹಾಕಿದ್ದ ಬ್ಯಾಂಡೇಜನ್ನೂ ಕೂಡ ಬಿಚ್ಚದೇ ಗುರುವಿನ ಹತ್ಯೆಗೆ ರಿವೇಂಜ್ ತೆಗೆದುಕೊಳ್ಳಲೆಂದು ಹಾತೊರೆಯುತ್ತಿದ್ದ. ರಿವೇಂಜ್‌ಗಾಗಿ ಮಂಡ್ಯ ಕೃಷ್ಣನ ಮನೆಗೆ ನುಗ್ಗಿದ ಕೋತಿರಾಮನ ಪಡೆಗೆ ಆತ ಎದುರಿಗೇ ಸಿಕ್ಕಿಬಿಟ್ಟ. ಕೋತಿರಾಮ ಬೀಸಿದ ಲಾಂಗಿಗೆ ಆತನ ಅಷ್ಟೂ ಕೈಬೆರಳುಗಳು ತುಂಡಾಗಿಬಿದ್ದವು. ಅಡ್ಡ ಬಂದ ಆತನ ಹೆಂಡತಿಯ ಕೈಗೂ ಮಚ್ಚಿನೇಟು ಬಿದ್ದಿದೆ. ಮಂಡ್ಯ ಕೃಷ್ಣನನ್ನು ಎಲ್ಲೆಂದರಲ್ಲಿ ಕತ್ತರಿಸಿ ಎಸೆದಿದ್ದಾರೆ.....

ಅಂಡರ್‌ವರ್ಲ್ಡ್‌ನ ಅನಿವಾರ್ಯತೆಯೇ ಅಂಥಾದ್ದು!

ಒಬ್ಬ ರೌಡಿ ಮತ್ತು ಆತನ ಸಾಮ್ರಾಜ್ಯಕ್ಕೆ ಅದರದೇ ಆದ ಅಸ್ತಿತ್ವ ಮತ್ತು ಆದಾಯದ ಮೂಲಗಳಿರುತ್ತವೆ. ಅದನ್ನು ಅವಲಂಭಿಸಿ ಅನೇಕ ದಂಧೆಗಳೂ ನೆಟ್‌ವರ್ಕುಗಳೂ ನಡೆಯುತ್ತಿರುತ್ತವೆ. ಮತ್ತು ಅಂಥಾದ್ದೊಂದು ಜಾಲವನ್ನು ತೆರೆಮರೆಯಲ್ಲಿ ನಿಂತು ಪೋಷಿಸುವವರೂ ಇರುತ್ತಾರೆ. ಅದರ ಆಧಾರಸ್ತಂಭದಂತಿದ್ದ ಗ್ಯಾಂಗ್‌ಲೀಡರ್ ಒಬ್ಬ ಮುಗಿದು ಹೋದನೆಂದರೆ ಆತನ ಬೆಂಬಲಿಗರೆಲ್ಲ ಅನಾಥರಾಗಿ ಕೆಲವೊಮ್ಮೆ ಕೊಂದವನ ಜೊತೆಗೇ ರಾಜಿಯಾಗಿಬಿಡುತ್ತಾರೆ.

ಆದರೆ ಮಚ್ಚನ ವಿಷಯದಲ್ಲಿ ಮಾತ್ರ ಹಾಗಾಗಲೇ ಇಲ್ಲ, ಏಕೆಂದರೆ ಮಚ್ಚನ ಗ್ಯಾಂಗ್ ನಿರ್ನಾಮವಾಗದಂತೆ ಆತನ ಇಡೀ ಜಾಲವನ್ನೇ ಪುನರ್ ಸಂಘಟಿಸಿ ಮತ್ತೊಂದು ರೌಂಡ್ ಯುದ್ಧಕ್ಕೆ ಅಣಿಗೊಳಿಸುವಂತೆ ಆಸಕ್ತಿ ವಹಿಸಲು ಮಚ್ಚನಿಗಿಂತಲೂ ಶಕ್ತಿಶಾಲಿಗಳಾದ ಕೊರಂಗು ಮತ್ತು ಸುನೀಲರ ಗ್ಯಾಂಗುಗಳಿದ್ದವು. ಅದಕ್ಕಿಂತಲೂ ಮಿಗಿಲಾಗಿ ಮಚ್ಚನ ಬಲಗೈ ಬಂಟ ಕೋತಿರಾಮನಿಗೆ, ಮಚ್ಚನ ಮತ್ತೊಬ್ಬ ಶಿಷ್ಯ ಪೆದ್ದ ಗುಂಡನಿಗೆ, ಮಚ್ಚ ಬದುಕಿದ್ದಷ್ಟೂ ದಿನ ಆತನ ನೆರಳಲ್ಲೇ ಚಿಗುರಿದ್ದ ಹಂದಕುಮಾರ, ಕಲಗಚ್ಚು ಸೀನ, ಸೂರಿ, ಭೂಸು ಮುಂತಾದವರಿಗೆಲ್ಲ ಮಚ್ಚನ ಹತ್ಯೆಗೆ ರಿವೇಂಜ್ ತೆಗೆದುಕೊಳ್ಳದೇ ಹೋದರೆ ಅದು ತಮ್ಮ ಅಸ್ತಿತ್ವಕ್ಕೆ ಕಂಟಕ ಎನ್ನಿಸಿಬಿಟ್ಟಿತು.


ಮಚ್ಚ

ಮಚ್ಚ ಸತ್ತ ಮರುದಿನವೇ ಮಾಗಡಿಯ ಸೋಲೂರಿನಲ್ಲಿ ನಡೆದ ಆತನ ಶವಸಂಸ್ಕಾರಕೆಂದು ಬಂದವರೇನು ಕಮ್ಮಿಯಿದ್ದರೆ? ಅವತ್ತು ಮಚ್ಚನ ಹೆಂಡತಿ ಎದೆ ಬಡಿದುಕೊಂಡು ಆಕ್ರಂದಿಸುತ್ತಿದ್ದರೆ ಮಚ್ಚನ ಪ್ರತಿಯೊಬ್ಬ ಶಿಷ್ಯನೂ ಆತನ ಸಾವಿಗೆ ಕಾರಣರಾದ ಪ್ರತಿಯೊಬ್ಬನನ್ನು ಮುಗಿಸುವ ಶಪಥಗೈದಿದ್ದ.

ಮಚ್ಚ ಕೊಲೆಯಾದ ಗಳಿಗೆಯಲ್ಲಿ ಆತನ ಜೊತೆಗಿದ್ದು ಕೈಗೆ ಮಚ್ಚಿನೇಟು ತಿಂದಿದ್ದ ಆತನ ಪರಮಾಪ್ತ ಕೋತಿರಾಮ ತನ್ನ ಕೈಗೆ ಹಾಕಿದ್ದ ಬ್ಯಾಂಡೇಜನ್ನೂ ಕೂಡ ಬಿಚ್ಚದೇ ಗುರುವಿನ ಹತ್ಯೆಗೆ ರಿವೇಂಜ್ ತೆಗೆದುಕೊಳ್ಳಲೆಂದು ಹಾತೊರೆಯುತ್ತಿದ್ದ. ಮಚ್ಚ ಸತ್ತ ಹನ್ನೊಂದನೇ ದಿನಕ್ಕೆ ಸರಿಯಾಗಿ ಮಾಗಡಿಯ ಸೋಲೂರಿನಲ್ಲಿ ಆತನ ತಿಥಿಯಿತ್ತು, ಅವತ್ತು ಮಚ್ಚನ ಇಡೀ ಸಾಮ್ರಾಜ್ಯವೇ ಅಲ್ಲಿತ್ತು, ಅದಕ್ಕೂ ಮುನ್ನ ಮೂರ್ನಾಲ್ಕು ದಿನಗಳ ಹಿಂದಿನಿಂದಲೇ ಕೋತಿರಾಮ ಕ್ವಾಲೀಸ್ ಗಾಡಿಯೊಂದರಲ್ಲಿ ರೌಂಡಿಂಗ್ ಆರಂಭಿಸಿಬಿಟ್ಟಿದ್ದ. ಗೋಪಾಲಯ್ಯನಿಗಿಂತಲೂ ಮಿಗಿಲಾಗಿ ಆತ ಹುಡುಕುತ್ತಿದ್ದದ್ದು ಮುಲಾಮನನ್ನು. ಮಚ್ಚನ ಹತ್ಯೆಯಲ್ಲಿ ಗೋಪಾಲಯ್ಯ, ಕಡಬಗೆರೆ ಪಾಯ್ಸನ್ ರಾಮನಿಗಿಂತಲೂ ಮುಲಾಮನ ಬಂಟರಾದ ರಾಮ-ಲಕ್ಷ್ಮಣರೇ ಮುಂಚೂಣಿಯಲ್ಲಿದ್ದದ್ದೇ ಕೋತಿರಾಮನ ಆಕ್ರೋಶಕ್ಕೆ ಕಾರಣವಾಗಿತ್ತು. ಆದರೆ ಕೋತಿರಾಮ ಆಸ್ಪತ್ರೆಯಿಂದ ಹೊರಬೀಳುವುದರೊಳಗಾಗಿ ರಾಮ-ಲಕ್ಷ್ಮಣರಿಬ್ಬರೂ ಜೈಲು ಸೇರಿ ಸೇಫಾಗಿಬಿಟ್ಟಿದ್ದರು. ಮುಲಾಮ ಭೂಗತನಾಗಿದ್ದ, ಕಡಬಗೆರೆಯ ಪಾಯ್ಸನ್ ರಾಮ, ಆತನ ಅಣ್ಣ ಜೇಕೆ, ಡಾಬಾದ ಸೀನ; ಹೀಗೆ ಮಚ್ಚನ ಹತ್ಯೆಯ ಹಿಂದೆ ಯಾರ್ಯಾರ ಕೈವಾಡವಿತ್ತೋ ಅವರೆಲ್ಲ ಊರುಬಿಟ್ಟು ಭೂಗತರಾಗಿದ್ದರು. ಹತ್ಯೆಯ ತನಿಖೆಯನ್ನು ಕಮೀಷನರ್ ಅಜಯ್ ಕುಮಾರ್ ಸಿಂಗ್ ಯಲಹಂಕದ ಇನ್ಸ್‌ಪೆಕ್ಟರ್ ಶ್ರೀನಿವಾಸ್‌ಗೆ ವಹಿಸಿದ್ದರೂ ಅದರ ಮೇಲ್ವಿಚಾರಣೆಯನ್ನು ಪೀಣ್ಯದ ಇನ್ಸ್‌ಪೆಕ್ಟರ್ ಸುಬ್ಬಣ್ಣನವರಿಗೆ ವಹಿಸಲಾಗಿತ್ತು. ಬಹುಶಃ ಜೆಡಿಎಸ್ ಪಾತಕಿಗಳಿಗೆ ನೆರವಾಗಲೆಂದೇ ಮಚ್ಚನ ಕೊಲೆಯ ಉಸ್ತುವಾರಿಯನ್ನು ಸುಬ್ಬಣ್ಣನವರಿಗೆ ವಹಿಸಲಾಗಿತ್ತೆ?


ಇಂಥಾದ್ದೊಂದು ಗುಮಾನಿ ಇವತ್ತಿಗೂ ಹೊಗೆಯಾಡುತ್ತಲೇ ಇದೆ. ಬಹುಶಃ ಮಚ್ಚ ಕೊಲೆಯಾದ ತಕ್ಷಣವೇ ಮುಲಾಮ, ಕಡಬಗೆರೆ ರಾಮ, ಡಾಬಾ ಸೀನಾ ಇತ್ಯಾದಿಗಳ ಬಂಧನವಾಗಿಬಿಟ್ಟಿದ್ದರೆ ಮತ್ತೊಂದು ರಕ್ತಪಾತವಾಗುತ್ತಿರಲಿಲ್ಲ.

ಹಾಗಂತ ಕೋತಿರಾಮ ಸುಮ್ಮನಿರಬೇಕಲ್ಲ! ಆತ ದೂರದಿಂದ ಮಚ್ಚನ ಸಂಬಂಧಿಯೂ ಹೌದು. ಫೈಟಿಗೆ ನಿಂತರೆ ಆತನನ್ನು ಸುಲಭಕ್ಕೆ ಮಣಿಸಲಾಗದು. ಅಂಥಾ ಕೋತಿರಾಮನಿಗೆ ಕಾಮಾಕ್ಷಿಪಾಳ್ಯ ಮತ್ತು ಸಣ್ಣಕ್ಕಿ ಬಯಲಿನಲ್ಲಿ ತಾನು ಈ ಕ್ಷಣಕ್ಕೆ ಹಾವಳಿಯಿಡದಿದ್ದರೆ ಮಚ್ಚ ಕಟ್ಟಿದ ಸಾಮ್ರಾಜ್ಯ ಶಾಶ್ವತವಾಗಿ ಮುಗುಚಿಬೀಳುತ್ತದೆ ಎಂಬುದು ಚೆನ್ನಾಗಿ ಗೊತ್ತು, ಹಾಗಂತ ಆತ ಒಬ್ಬನೇ ನುಗ್ಗುವಷ್ಟು ಮೂರ್ಖನಲ್ಲ, ಅದಕ್ಕಾಗಿ ಆತ ಮಚ್ಚನ ತಿಥಿಯ ತನಕ ಕಾಯ್ದಿದ್ದಾನೆ. ಅವತ್ತು ತಿಥಿಗೆ ಬಂದಿದ್ದ ಮಚ್ಚನ ಅಸಂಖ್ಯಾತ ಬಂಟರ ಪೈಕಿ ರಾಜೇಶ, ಕಾಟು, ತುರೆ ಸತೀಶ, ದಿನೇಶ, ಪೆದ್ದಗುಂಡ ಮುಂತಾದವರಿದ್ದ ಸರಿಸುಮಾರು ಮೂವತ್ತು ಮಂದಿಯ ಟೀಮ್ ರೆಡಿ ಮಾಡಿಕೊಂಡಿದ್ದಾನೆ.


ಎರಡು ಕ್ವಾಲೀಸ್, ಒಂದು ಸ್ಕಾರ್ಪಿಯೋ ಮತ್ತೊಂದು ಮಾರುತಿ ವ್ಯಾನ್, ಇನ್ನೊಂದು ಸುಮೋದ ತುಂಬ ಹುಡುಗರನ್ನು ತುಂಬಿಸಿಕೊಂಡಿದ್ದೇ ಸೋಲೂರಿನ ಮಚ್ಚನ ಸಮಾದಿಗೆ ಬಂದಿದ್ದಾನೆ. ಅಲ್ಲಿನ ಮಚ್ಚನ ಸಮಾಧಿಯ ಮುಂದೆ ನಿಂತು ಇಡೀ ತಂಡ ಮುಲಾಮನನ್ನು ಮುಗಿಸುವ ಶಪಥಗೈದಿದೆ. ಹಾಗೇ ಶಪಥಗೈದನಂತರ ಅಷ್ಟೂ ಮಂದಿ ರಾಜಗೋಪಾಲನಗರಕ್ಕೆ ಬಂದಿದ್ದಾರೆ. ಲಗ್ಗೆರೆ ಸರ್ಕಲ್ಲಿನಲ್ಲೇ ಇರುವ ಮುಲಾಮನ ಮನೆ ಸುತ್ತ ಇಡೀ ಗ್ಯಾಂಗ್ ಜಮೆಯಾಗಿದೆ. ಅದ್ಯಾರು ಸುದ್ದಿ ಕೊಟ್ಟಿರೋ, ಮುಲಾಮ ಮನೆಯಲ್ಲೇ ಅವಿತು ಕುಳಿತಿದ್ದಾನೆಂದು. ಜನ ನೋಡುನೋಡುತ್ತಿದ್ದಂತೆಯೇ ಸರಿಸುಮಾರು ಮೂವತ್ತು ಮಂದಿ ಹಂತಕರ ಪಡೆ ಕೈಯಲ್ಲಿ ಲಾಂಗ್ ಝಳಪಿಸುತ್ತಾ ಮುಲಾಮನ ಮನೆಗೆ ನುಗ್ಗಿದೆ. ಅದೂ ಎಂಥಾ ದಾಳಿಯೆಂದರೆ ನುಗ್ಗಿದ ರಭಸಕ್ಕೆ ಮನೆಯ ಬಾಗಿಲು ಚಿಂದಿಯಾಗಿದೆ. ಕಿಟಕಿಯ ಗಾಜುಗಳು ಪುಡಿಪುಡಿಯಾಗಿವೆ.


ಆದರೆ ಕಿಲಾಡಿ ಮುಲಾಮ ಸಿಗುತ್ತಾನಾ? ಆ ಹೊತ್ತಿಗಾಗಲೇ ಮುಂಬಯಿ ಸೇರಿಕೊಂಡು ಭೂಗತನಾಗಿಬಿಟ್ಟಿದ್ದ ಮುಲಾಮನ ಮನೆಯಲ್ಲಿ ಸಿಕ್ಕಸಿಕ್ಕವರನ್ನು ಕೋತಿರಾಮನ ಪಡೆ ಬಡಿದಿದೆ. ಅದೇ ಹೊತ್ತಿಗೆ ಇನ್ಯಾರೋ 'ಮುಲಾಮ ಮಂಡ್ಯ ಕೃಷ್ಣನ ಮನೆಯಲ್ಲಿ ಅವಿತು ಕುಳಿತಿದ್ದಾನೆ' ಎಂದು ಕೋತಿರಾಮನ ಕಿವಿ ಕಚ್ಚಿದ್ದಾರೆ. ಅಷ್ಟೇ, ಇಡೀ ಗ್ಯಾಂಗ್ ಲಗ್ಗೆರೆಯ ಮಂಡ್ಯ ಕೃಷ್ಣನ ಮನೆಸುತ್ತ ಸುತ್ತುವರಿದಿದೆ.

Of course ಮಂಡ್ಯ ಕೃಷ್ಣ ಮುಲಾಮನ ರಿಯಲ್ ಎಸ್ಟೇಟ್ ದಂಧೆಯ ಬಲಗೈ ಬಂಟ. ವಿಧವೆಯರು, ವಯಸ್ಸಾದವರು, ಅಸಹಾಯಕರನ್ನೇ ಆಯ್ದು ಅಂಥವರ ಸೈಟುಗಳನ್ನು ಕಬಳಿಸುತ್ತಿದ್ದ. ಮುಲಾಮನನ್ನು ಲಗ್ಗೆರೆಗೆ ಕರೆತಂದು, ರಿಯಲ್ ಎಸ್ಟೇಟ್ ದಂಧೆಗೆ ಹಚ್ಚಿದ್ದೇ ಆತ. ಆತನ ವಿರುದ್ಧ ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ರೌಡಿ ಷೀಟಿತ್ತು. ಕೋಟಿಗಟ್ಟಲೇ ಆಸ್ತಿ ಮಾಡಿದ್ದ. ಜೊತೆಗೆ ಯಾವತ್ತೂ ಬಂಟರ ಹಿಂಡು ಕಟ್ಟಿಕೊಂಡಿರುತ್ತಿದ್ದ. ಆ ಬುಧವಾರದ ರಾತ್ರಿ ಇದ್ಯಾವುದೂ ಆತನನ್ನು ಉಳಿಸಲಿಲ್ಲ!


ಹತನಾದ ಮಂಡ್ಯ ಕೃಷ್ಣ

ಮಂಡ್ಯ ಕೃಷ್ಣನ ಮನೆಗೆ ನುಗ್ಗಿದ ಕೋತಿರಾಮನ ಪಡೆಗೆ ಆತ ಎದುರಿಗೇ ಸಿಕ್ಕಿಬಿಟ್ಟ. ಕೋತಿರಾಮ ಬೀಸಿದ ಲಾಂಗಿಗೆ ಆತನ ಅಷ್ಟೂ ಕೈಬೆರಳುಗಳು ತುಂಡಾಗಿಬಿದ್ದವು. ಅಡ್ಡ ಬಂದ ಆತನ ಹೆಂಡತಿಯ ಕೈಗೂ ಮಚ್ಚಿನೇಟು ಬಿದ್ದಿದೆ. ಮಂಡ್ಯ ಕೃಷ್ಣನನ್ನು ಎಲ್ಲೆಂದರಲ್ಲಿ ಕತ್ತರಿಸಿ ಎಸೆದಿದ್ದಾರೆ. ಇಷ್ಟಾಗ್ಯೂ ಕೋತಿರಾಮನ ಸಿಟ್ಟು ಕರಗಲಿಲ್ಲ, ಮಂಡ್ಯ ಕೃಷ್ಣನನ್ನು ಕತ್ತರಿಸಿದ್ದೇ ಇಡೀ ಗ್ಯಾಂಗ್ ಅದೇ ಕ್ವಾಲೀಸ್ ಮತ್ತು ಸ್ಕಾರ್ಪಿಯೋಗಳಲ್ಲಿ ಸಣ್ಣಕ್ಕಿ ಬಯಲಿಗೆ ಬಂದಿದೆ. ಮಚ್ಚ ಕೊಲೆಯಾದಾಗ ಸಹಜವಾಗೇ ಬಯಲುರವಿಯ ತಮ್ಮನ ಗ್ಯಾಂಗ್ ಪಟಾಕಿ ಹೊಡೆದಿತ್ತು, ಸ್ವತಃ ಬಯಲುರವಿಯ ತಮ್ಮನೇ ಮಚ್ಚನ ಕೊಲೆಯಲ್ಲಿ ಭಾಗವಹಿಸಿದ್ದ. ಸಣ್ಣಕ್ಕಿ ಬಯಲಿಗೆ ನುಗ್ಗಿದ ಕೋತಿರಾಮನ ಪಡೆ ಸಿಕ್ಕಸಿಕ್ಕ ಬಯಲುರವಿಯ ಬೆಂಬಲಿಗರ ಮನೆಗೆ ನುಗ್ಗಿದೆ. 'ನನ್ ಮಕ್ಳಾ ಪಟಾಕಿ ಹೊಡೀತೀರೇನ್ರೋ?' ಎಂದಿದ್ದೇ ಕೈಗೆ ಸಿಕ್ಕವರ ಮೇಲೆಲ್ಲ ಕೋತಿರಾಮ ಲಾಂಗ್ ಬೀಸಿದ್ದಾನೆ. ಮನೆಗೆ ನುಗ್ಗಿ ಟೀವಿಗಳನ್ನು ಪುಡಿಗೈದಿದ್ದಾನೆ. ಅವತ್ತು ಕೊರಂಗು ಕೂಡ ಕೋತಿರಾಮನ ಜೊತೆಗಿದ್ದನೆ? ಅಥವಾ ಗಾಡಿಯಲ್ಲೇ ಕೂತಿದ್ದು ಹುಡುಗರನ್ನು ಬಿಟ್ಟು ಹಾವಳಿ ಮಾಡಿಸಿದನೆ?


ಮುಲಾಮ


ಅಜಯ್ ಕುಮಾರ್ ಸಿಂಗ್


ಆದರೆ ಮುಲಾಮ ಮಾತ್ರ ಮಂಡ್ಯ ಕೃಷ್ಣನ ಮನೆ ಮೇಲೆ ನಡೆದ ದಾಳಿಗೆ ಆತನ ಹೆಂಡತಿಯಿಂದ ಕೊರಂಗು ವಿರುದ್ಧವೇ ದೂರು ಕೊಡಿಸಿದ. ಗಾಯಗೊಂಡಿದ್ದ ಮಂಡ್ಯ ಕೃಷ್ಣನನ್ನು ರಾತ್ರೋರಾತ್ರಿ ಆಸ್ಪತ್ರೆಗೆ ಸೇರಿಸಲಾಗಿತ್ತು, ಆತನ ತಲೆ ಸೀಳಿಹೋಗಿತ್ತು, ಕೈ ತುಂಡಾಗಿತ್ತು, ಸರಿಸುಮಾರು ನಾಲ್ಕು ದಿನಗಳ ಕಾಲ ವಿಕ್ಟೋರಿಯಾ ಆಸ್ಪತ್ರೆಯ ತೀವ್ರ ನಿಗಾದಲ್ಲಿ ನರಳಿದ ಮಂಡ್ಯ ಕೃಷ್ಣ ಅಂತಿಮವಾಗಿ ಐದನೇ ದಿನಕ್ಕೆ ಕೊನೆಯುಸಿರೆಳೆದ. ಪ್ರಾರಂಭದಲ್ಲಿ ಕೊಲೆಯತ್ನದ ಕೇಸಾಗಿದ್ದ ಆತನ ಮೇಲಿನ ದಾಳಿಯನ್ನು ರಾಜಗೋಪಾಲನಗರ ಪೊಲೀಸರು ಕೊಲೆ ಕೇಸನ್ನಾಗಿ ಬದಲಾಯಿಸಿದರು. ಕೋತಿರಾಮ ತುರೆ ಸತೀಶ, ದಿನೇಶ, ಜಾನಿ ಹೀಗೆ ಸರಿಸುಮಾರು ಹದಿನೈದು ಮಂದಿಯನ್ನು ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಬಂಧಿಸಿ ಜೈಲಿಗೆ ಹಾಕಲಾಯ್ತು, ಇದಿಷ್ಟೇ ಆಗಿದ್ದರೆ ಅದಕ್ಕೆ ಮುಂದೊಮ್ಮೆ ಕೊರಂಗು ದಂಡ ತೆರಬೇಕಾಗಿರಲಿಲ್ಲ, ಯಾವತ್ತು ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಮೊದಲನೇ ಆರೋಪಿಯಾಗಿ ಕೊರಂಗು ಹೆಸರು ಕೇಳಿಬಂತೋ ಹಮ್ಮಿಗೆ ಬಿದ್ದ ಕೊರಂಗು ಮತ್ತೊಂದು ಯಡವಟ್ಟಿಗೆ ಕೈಯಿಟ್ಟ.

ಅದು ಬಾಲಕೃಷ್ಣ ಕಾಕತ್ಕರ್ ನಿರ್ದೇಶನದ ಕ್ರೈಂ ಸ್ಟೋರಿಯ ಸಂದರ್ಶನ!

ಮೊದಲು ಮಚ್ಚನ ಹತ್ಯೆ ಆದಾಗಿ ಹನ್ನೊಂದನೇ ದಿನಕ್ಕೇ ಲಗ್ಗೆರೆಯ ಮಂಡ್ಯ ಕೃಷ್ಣನ ಮನೆ ಮೇಲೆ ನಡೆದ ದಾಳಿ, ಆನಂತರ ನಡೆದ ಮಂಡ್ಯ ಕೃಷ್ಣನ ಸಾವಿನಿಂದಾಗಿ ಇಡೀ ಬೆಂಗಳೂರಿನ ಪೊಲೀಸರೇ ತಲೆತಗ್ಗಿಸುವಂತಾಗಿತ್ತು. ಹಾಡುಹಗಲೇ ಹಿಂಡುಗಟ್ಟಲೇ ರೌಡಿಗಳು ನಡುಬೀದಿ ದಾಳಿಗಳನ್ನು ನಡೆಸುತ್ತಿದ್ದರೆ ಪೊಲೀಸರ ಪಾಡು ಏನಾಗಬೇಡ? ಅಂಥಾದ್ದೊಂದು ಮುಜುಗರಕ್ಕೆ ಸಿಕ್ಕಿದ್ದು ಪೊಲೀಸ್ ಕಮೀಷನರ್ ಅಜಯ್‌ಕುಮಾರ್ ಸಿಂಗ್!

ಅದು ಅಜಯ್‌ಕುಮಾರ್ ಸಿಂಗ್ ಸಾಹೇಬರ ಪೊಲೀಸ್ ವೃತ್ತಿಯ ಪರ್ವಕಾಲವಾಗಿತ್ತು, ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಬೆಂಗಳೂರು ನಗರದಲ್ಲಿ ರೌಡಿಗಳ ಗ್ಯಾಂಗ್‌ವಾರ್ ತನ್ನ ಪರಮಾವಧಿಗೇರಿತ್ತು, ಪತ್ರಿಕೆಗಳೆಲ್ಲ ಪೊಲೀಸ್ ನಿಷ್ಕ್ರಿಯತೆಯನ್ನು ಬೊಟ್ಟು ಮಾಡಿ ಪುಟಗಟ್ಟಲೇ ಬರೆದವು. ಇದರ ಹಿಂದಿದ್ದ ರಿಯಲ್ ಎಸ್ಟೇಟ್ ಮಾಫಿಯಾ ಬಗ್ಗೆಯೂ ವ್ಯಾಪಕ ಚರ್ಚೆಗಳಾದವು. ಇಂಥಾ ಸ್ಥಿತಿಯಲ್ಲೇ ಕೊರಂಗು ಇನ್ನೊಂದು ಬಾಂಬ್ ಹಾಕಿಬಿಟ್ಟ. ಆತನನ್ನು ನಿದ್ದೆಗೆಟ್ಟು ಹುಡುಕುತ್ತಿದ್ದ ಸಿಸಿಬಿ ಎಸಿಪಿ ಬಿ.ಕೆ. ಶಿವರಾಮ್ ತಂಡವೇ ಬೆಚ್ಚಿಬೀಳುವಂತೆ, ಉದಯ ಟೀವಿಯ ಕ್ರೈಂ ಸ್ಟೋರಿಯಲ್ಲಿ ಕೊರಂಗು ಸಂದರ್ಶನ ಕೊಟ್ಟಿದ್ದ, ಕ್ರೈಂ ಸ್ಟೋರಿಯ ಕಿಲಾಡಿ ರಿಪೋರ್ಟರ್ ರಾ. ಪ್ರವೀಣ್‌ರನ್ನು ತಮಿಳುನಾಡಿನ ಯಾವುದೋ ಸಮುದ್ರ ತೀರಕ್ಕೆ ಕರೆಸಿಕೊಂಡು ಕೊರಂಗು ಗಂಟೆಗಟ್ಟಲೇ ಮಾತಾಡಿದ್ದ. ಅದೂ ಎಂಥಾ ಮಾತುಗಳು....?

(ಮುಂದಿನ ವಾರಕ್ಕೆ)



ತನ್ನ ದಾರ್ಶನಿಕ ಶೋಧದ ಕಾರಣದಿಂದ ತೇಜಸ್ವಿ ಪತ್ತೇದಾರಿ ಥ್ರಿಲ್ಲರ್ ಬರೆಯುವ ಲೇಖಕರಾಗುವ ಅಪಾಯದಿಂದ ಪಾರಾದರು. ನಿಸರ್ಗದ ವಿದ್ಯಮಾನಗಳ ಹುಡುಕಾಟದಲ್ಲಿ ತನ್ಮಯವಾಗಿ ಕಳೆದುಹೋಗುವಂತೆ ಕಾಣುತ್ತಿದ್ದ ತೇಜಸ್ವಿಗೆ ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಬಗ್ಗೆ ಮಹಾ ಸೆಳೆತವಿತ್ತು. ಜೇನ್ನೊಣ ಅಥವಾ ನಾಯಿಯ ಹಾಗೆ ಅವರ ಕಾದಂಬರಿಗಳಲ್ಲಿ ಜೀಪೊ ಸ್ಕೂಟರೊ ನೀರೆತ್ತುವ ಇಂಜಿನ್ನೊ ಒಂದು ಪಾತ್ರವಾಗಿ ಬರುವುದನ್ನು ಗಮನಿಸಬೇಕು. ಆಧುನಿಕ ವಿಜ್ಞಾನ, ತಂತ್ರಜ್ಞಾನ ಹಾಗೂ ವೈಚಾರಿಕತೆಗಳ ಒಲವು ಅವರನ್ನು ಸದಾ ಹೊಸತನ್ನು ಶೋಧಿಸುವ ಬರೆಹಗಾರನನ್ನಾಗಿ ಮಾಡಿದವು.

ದಾರ್ಶನಿಕ ಹುಡುಕಾಟದ ಲೇಖಕ

ರಹಮತ್ ತರೀಕೆರೆ

ತೇಜಸ್ವಿಯವರ ನಿಧನದ ಸುದ್ದಿಯಿದ್ದ 'ಪ್ರಜಾವಾಣಿ'ಯಲ್ಲಿ ಅಕಸ್ಮಾತ್ ಎಂಬಂತೆ ಇನ್ನೊಂದು ಸುದ್ದಿಯಿತ್ತು. ಅದೆಂದರೆ ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಭಾಷಣ ಮಾಡಲು ಬಂದ ರಾಜಕಾರಣಿಗಳನ್ನು ಹೆಜ್ಜೇನು ನೊಣಗಳು ಭಾಷಣ ಮಾಡಲು ಬಿಡದೆ ಕಚ್ಚಿ ಓಡಿಸಿದ್ದು. ತೇಜಸ್ವಿ ಬದುಕಿದ್ದರೆ ಇದನ್ನು ಬಹಳ ಆನಂದದಿಂದ ಓದಿರುತ್ತಿದ್ದರು. ಅವರ ಪ್ರಸಿದ್ಧ ಕಾದಂಬರಿ 'ಕರ್ವಾಲೊ'ದಲ್ಲಿ ಇಂತಹುದೇ ಸನ್ನಿವೇಶವಿದೆ. ತೇಜಸ್ವಿ ಸಾಹಿತ್ಯದಲ್ಲಿ, ಜೇನುಹುಳ, ಪ್ರಾಣಿ, ಪಕ್ಷಿ, ನದಿ, ಕಾಡ್ಗಿಚ್ಚು ಮುಂತಾದವು, ತಮ್ಮ ನಿರಂಕುಶ ಮತಿಯೂ ಸಹಜವೂ ಆದ ವರ್ತನೆಯಿಂದ ಮನುಷ್ಯರನ್ನು ಕಂಗೆಡಿಸುವ ಸನ್ನಿವೇಶಗಳು ಮತ್ತೆಮತ್ತೆ ಬರುತ್ತವೆ. ತನ್ನನ್ನು ಭೂಮಿ ಮೇಲಣ ಬಲಿಷ್ಠ ಜೀವಿ ಎಂದುಕೊಂಡಿರುವ ಮನುಷ್ಯನ ಹಿಡಿತಕ್ಕೆ ಸಿಗದೆ, ನಿಸರ್ಗವು ಅತೀತವಾಗಿ ವರ್ತಿಸುವುದನ್ನು ಅವರ ಸಾಹಿತ್ಯ ಸಂಭ್ರಮದಲ್ಲಿ ಚಿತ್ರಿಸುತ್ತದೆ. ಅದು 'ಕರ್ವಾಲೊ'ನ ಹಾರುವ ಓತಿ, 'ಚಿದಂಬರ ರಹಸ್ಯ'ದ ಕಾಡ್ಗಿಚ್ಚು, 'ನಿಗೂಢ ಮನುಷ್ಯರು' ಕತೆಯ ಗುಡ್ಡದ ಕುಸಿತ, 'ಕಿರಗೂರಿನ ಗಯ್ಯಾಳಿಗಳು' ಕಥೆಯಲ್ಲಿ ಉರುಳಿ ಬರುವ ಹೆಬ್ಬಂಡೆ, 'ಮಾಯಾಲೋಕ'ದ ಹೊಳೆ ಏನೂ ಇರಬಹುದು. ಇಲ್ಲಿ ನಿಸರ್ಗ ಅಜೇಯವಾಗಿ ಮಾತ್ರವಲ್ಲ, ಮಾನವರ ಅರಿವಿಗೆ ಪೂರ್ತಿ ಅರ್ಥವಾಗದೆ ನಿಗೂಢವಾಗಿ ವಿಸ್ಮಯವಾಗಿ ಉಳಿಯುತ್ತದೆ.

ತನ್ನ ಲಯದಲ್ಲಿ ಸ್ವತಂತ್ರವಾಗಿ ವರ್ತಿಸುವ ನಿಸರ್ಗದ ವಿದ್ಯಮಾನಗಳನ್ನು, ತಾನೇ ನಿರ್ಮಿಸಿಕೊಂಡ ಕಟ್ಟುಕಟ್ಟಳೆಗಳಲ್ಲಿ ಸಿಲುಕಿರುವ ಮಾನವ ಸಮಾಜದ ಎದುರು ತೇಜಸ್ವಿ ಸಾಹಿತ್ಯ ಮುಖಾಮುಖಿ ಮಾಡುತ್ತದೆ. ಇದು ಯಾಕೆ ಎನ್ನುವುದು ಒಂದು ಚಿದಂಬರ ರಹಸ್ಯದ ಪ್ರಶ್ನೆ. ಒಟ್ಟಿನಲ್ಲಿ ಈ ನಿಸರ್ಗ ಮತ್ತು ಮಾನವ ಸಮಾಜದ ಮುಖಾಮುಖಿಯಲ್ಲಿ ತೇಜಸ್ವಿ ಸಾಹಿತ್ಯವು ಸಮಾಜದ ಚಲನಶೀಲತೆಯನ್ನು ಗ್ರಹಿಸುತ್ತ ಬಂದಿದೆ. ಪ್ರಕೃತಿಯ ಅನಿಯಂತ್ರಿತ ವಿದ್ಯಮಾನಗಳು ಜೀವವಿಕಾಸದ ಚರಿತ್ರೆಯುದ್ದಕ್ಕೂ, ನಾಶ ಹಾಗೂ ಹೊಸಹುಟ್ಟಿನ ಲಯಗಾರಿಕೆಯನ್ನು ನಿರ್ಮಿಸಿವೆ. ಅದರ ವಿಶಾಲ ಹಾಸಿನಲ್ಲಿ ಮಾನವರ ಬದುಕನ್ನು ಇಟ್ಟು ಅದರ ಜೀವಂತಿಕೆ ಮತ್ತು ಕ್ಷುದ್ರತೆಗಳನ್ನು ಶೋಧಿಸುವ ಕೆಲಸವನ್ನು ಅವರ ಸಾಹಿತ್ಯ ಮಾಡುತ್ತದೆ. ಈ ಶೋಧವೇ ತೇಜಸ್ವಿ ಸಾಹಿತ್ಯದ ಹೊಸ ಸಮಾಜದ ಕಲ್ಪನೆಗೂ ದಾರ್ಶನಿಕ ಹುಡುಕಾಟಕ್ಕೂ ಕಾರಣವಾಗಿದೆ. ಆಧುನಿಕ ವಿಜ್ಞಾನವು ಜೀವವಿಕಾಸದ ಬಗ್ಗೆ ಸೃಷ್ಟಿಸಿರುವ ಜ್ಞಾನವನ್ನು ತಮ್ಮ ವರ್ತಮಾನದ ರಾಜಕೀಯ ಸಾಮಾಜಿಕ ಪ್ರಶ್ನೆಯೊಂದಿಗೆ ಬೆಸೆದು ನೋಡುವ ಅಪೂರ್ವ ಪ್ರಯೋಗವನ್ನು ತೇಜಸ್ವಿ ಮಾಡಿದರು. ಆದ್ದರಿಂದಲೆ ಅವರನ್ನು ಪರಿಸರವಾದಿ ಬರಹಗಾರ ಎಂದೂ ವಿಜ್ಞಾನದ ಲೇಖಕ ಎಂದೂ ಕರೆಯುವುದು ಸರಳೀಕರಣ ಆಗುತ್ತದೆ.

ನಿಗೂಢತೆಯು ನಿಸರ್ಗದಲ್ಲಿ ಮಾತ್ರವಲ್ಲ, ಮಾನವ ಬದುಕಿನಲ್ಲಿಯೂ ಇದೆ. ಅವರ ಶ್ರೇಷ್ಠವಾದ 'ಅವನತಿ' ಹಾಗೂ 'ನಿಗೂಢ ಮನುಷ್ಯರು' ಕತೆಗಳು ಇದರ ಶೋಧವನ್ನು ಮಾಡುತ್ತವೆ. ಹೀಗೆ ಮನುಷ್ಯರ ತಿಳಿವಿಗೆ ಪೂರಾ ದಕ್ಕದೆ ಸವಾಲಿನಂತೆ ಉಳಿಯುವ ನಿಸರ್ಗ ಹಾಗೂ ಬದುಕಿನ ನಿಗೂಢವನ್ನು ಕುತೂಹಲ ಹಾಗೂ ವಿಸ್ಮಯದಲ್ಲಿ ಶೋಧಿಸಬೇಕು. ಈ ಶೋಧದಲ್ಲಿ ಮಾನವರ ಸೃಜನಶೀಲತೆ ಪ್ರಕಟವಾಗುತ್ತದೆ ಎನ್ನುವುದು ತೇಜಸ್ವಿ ಸಾಹಿತ್ಯದ ಮುಖ್ಯ ಆಶಯ. ಇಲ್ಲಿ ಶೋಧ ಮಾಡುವ ಮಾನವ ಯತ್ನಗಳು ಮುಖ್ಯವೇ ಹೊರತು, ಶೋಧದಿಂದ ಪಡೆಯುವ ಉತ್ತರಗಳಲ್ಲ, ಕೆಲವೊಮ್ಮೆ ಉತ್ತರಗಳು ಸಿಗುವುದೇ ಇಲ್ಲ. (ನಿರುತ್ತರ' ಎಂಬ ಅವರ ಮನೆಯ ಹೆಸರು ಈ ಕಾರಣದಿಂದ ಸಾಂಕೇತಿಕವಾಗಿದೆ) 'ಕರ್ವಾಲೊ' ಕಾದಂಬರಿಯಲ್ಲಿ ಎಲ್ಲರೂ ಸೇರಿ ಹುಡುಕುವ ಹಾರುವ ಓತಿ ಕೊನೆಗೂ ಕೈಗೆ ಸಿಕ್ಕುವುದಿಲ್ಲ. 'ಮಾಯಾಲೋಕ'ದಲ್ಲಿ ಕೂಡ ನದಿಯ ಮೂಲವನ್ನು ಅರಸಲು ಸಾಧ್ಯವಾಗುವುದಿಲ್ಲ.

ತೇಜಸ್ವಿ ಸಾಹಿತ್ಯದಲ್ಲಿ ಬೇಟೆಯಾಡುವ ನಾಯಿಯು ಒಂದು ಮುಖ್ಯ ಪಾತ್ರವಾಗಿ ಬರುವುದು ಈ ಕಾರಣದಿಂದಲೇ. ನಿಗೂಢತೆಯ ಶೋಧನೆಯ ಗುಣದಿಂದ ಅವರ ಬರಹಕ್ಕೆ ಒಂದು ಬಗೆಯ ಪತ್ತೇದಾರಿತನ ಬಂದಿದೆ. ಈ ಶೋಧಕ ಗುಣವು ಮೂಲತಃ ಆಧುನಿಕ ವಿಜ್ಞಾನದ ಸಾಹಸಗಳಿಂದ ಪ್ರೇರಿತವಾದುದು. ತೇಜಸ್ವಿ ಹದಿಹರಯದ ಓದುಗರ ಮೆಚ್ಚಿನ ಹೀರೊ ಆಗಿರಲು ಇದೂ ಒಂದು ಕಾರಣ. ಆದರೆ ತನ್ನ ದಾರ್ಶನಿಕ ಶೋಧದ ಕಾರಣದಿಂದ ತೇಜಸ್ವಿ ಪತ್ತೇದಾರಿ ಥ್ರಿಲ್ಲರ್ ಬರೆಯುವ ಲೇಖಕರಾಗುವ ಅಪಾಯದಿಂದ ಪಾರಾದರು. ನಿಸರ್ಗದ ವಿದ್ಯಮಾನಗಳ ಹುಡುಕಾಟದಲ್ಲಿ ತನ್ಮಯವಾಗಿ ಕಳೆದುಹೋಗುವಂತೆ ಕಾಣುತ್ತಿದ್ದ ತೇಜಸ್ವಿಗೆ ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಬಗ್ಗೆ ಮಹಾ ಸೆಳೆತವಿತ್ತು, ಜೇನ್ನೊಣ ಅಥವಾ ನಾಯಿಯ ಹಾಗೆ ಅವರ ಕಾದಂಬರಿಗಳಲ್ಲಿ ಜೀಪೊ, ಸ್ಕೂಟರೊ ನೀರೆತ್ತುವ ಇಂಜಿನ್ನೊ ಒಂದು ಪಾತ್ರವಾಗಿ ಬರುವುದನ್ನು ಗಮನಿಸಬೇಕು. ಆಧುನಿಕ ವಿಜ್ಞಾನ, ತಂತ್ರಜ್ಞಾನ ಹಾಗೂ ವೈಚಾರಿಕತೆಗಳ ಒಲವು ಅವರನ್ನು ಸದಾ ಹೊಸತನ್ನು ಶೋಧಿಸುವ ಬರಹಗಾರನನ್ನಾಗಿ ಮಾಡಿದವು. ಯೂರೋಪಿನ ವಿಜ್ಞಾನದ ಸಂಶೋಧಕರು ಮಾಡಿದ ಸಾಹಸ ಹಾಗೂ ಸಾಧನೆಗಳ ಬಗ್ಗೆ ಅವರಿಗೆ ಮಹಾ ಗೌರವ. 'ಕರ್ವಾಲೊ' ಕಾದಂಬರಿಯ ನಾಯಕ ಕರ್ವಾಲೊ ಒಬ್ಬ ಯೂರೋಪಿಯನ್ ಮನಸ್ಸಿನ ವೈಚಾರಿಕತೆ ಮಾನವೀಯತೆ ಆಧುನಿಕತೆ ಗುಣವುಳ್ಳ ವಿಜ್ಞಾನಿ ಎಂಬುದು ಗಮನಾರ್ಹ. ತೇಜಸ್ವಿ ನೈಲ್ ನದಿಯ ಶೋಧನೆ ಮಾಡಿದ ಕಥನದಲ್ಲಿ ಈ ಶೋಧನೆಯಲ್ಲಿ ತನ್ನ ಪ್ರಾಣವನ್ನೇ ಬಲಿಗೊಟ್ಟ ಲೀವಿಂಗ್ ಸ್ಟೋನ್ ಬಗ್ಗೆ ಗೌರವದಿಂದ ಬರೆಯುತ್ತಾರೆ. ಪಶ್ಚಿಮ ಘಟ್ಟಗಳನ್ನು ಉಳಿಸುವುದು ಹಾಗೂ ಕನ್ನಡಕ್ಕೊಂದು ಸಾಫ್ಟ್‌ವೇರ್ ರೂಪಿಸುವುದು; ಹಕ್ಕಿಯೊಂದರ ಜೀವನ ಕ್ರಮದಲ್ಲಿ ಹಾಗೂ ಮೋಟಾರು ಯಂತ್ರವೊಂದರಲ್ಲಿ ಆಸಕ್ತಿ ತಾಳುವುದು ಅವರ ಪಾಲಿಗೆ ಪರಸ್ಪರ ವಿರುದ್ಧ ಸಂಗತಿಗಳೇ ಅಲ್ಲ. ಸಾಮಾನ್ಯವಾಗಿ ಪರಿಸರವಾದಿಗಳು ಆಧುನಿಕತೆ, ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ವಿರೋಧಿಗಳು; ಸಾಂಪ್ರದಾಯಕ ಸಮಾಜಕ್ಕೆ ಮರಳಿ ಹೋಗಬೇಕೆನ್ನುವವರು. ಆದರೆ ತೇಜಸ್ವಿ ಇದಕ್ಕೆ ಭಿನ್ನವಾಗಿದ್ದರು. ಅವರು ನಗರ ಬದುಕಿನ ಗೊಂದಲ ಕೃತಕತೆ ಬಿಟ್ಟು ಕಾಡಿಗೆ ಹೋಗಿ ನೆಲೆಸಿದ್ದರೂ, ಅಥವಾ ಹಾಗೆ ನೆಲೆಸಿದ್ದ ಕಾರಣದಿಂದಲೇ ಅವರಿಗೆ ನಾಡಿನ ಸೆಳೆತವಿತ್ತು. ಅವರೊಬ್ಬ ಆಧುನಿಕತೆ ಮತ್ತು ತಂತ್ರಜ್ಞಾನದ ಆರಾಧಕರಾಗಿದ್ದರು.

ತೇಜಸ್ವಿ ಸಾಹಿತ್ಯದಲ್ಲಿ ಒಂದು ಶಕ್ತಿಯಾಗಿ ಇರುವ ವೈಚಾರಿಕತೆ ಹಾಗೂ ಸಂಪ್ರದಾಯ ವಿರೋಧವನ್ನು ಇಲ್ಲಿಯೇ ಅರ್ಥ ಮಾಡಿಕೊಳ್ಳಬೇಕು. ಅವರಿಗೆ ಸಾಂಪ್ರದಾಯಕ ಜಾತಿ ಮತ್ತು ಧರ್ಮಗಳ ಬಗ್ಗೆ ಆಕ್ರೋಶವಿತ್ತು. ಅವು ಸೃಜನಶೀಲವಾದುದನ್ನು ಹುಟ್ಟಿಸಲಾರವು. ಮಾತ್ರವಲ್ಲ, ಸೃಜನಶೀಲ ವ್ಯಕ್ತಿಗಳು ಯಾವುದೇ ಹೊಸ ಪ್ರಯೋಗ ಮಾಡುವುದನ್ನು ನಿರ್ಬಂಧಿಸುವ ಕೆಲಸ ಮಾಡುತ್ತವೆ ಎಂದು ಬಲವಾಗಿ ನಂಬಿದ್ದರು. ನಾಗರಿಕ ಸಮಾಜವು ಸೃಷ್ಟಿಸಿಕೊಂಡಿರುವ ಶಿಷ್ಟಾಚಾರಗಳು ಹಾಗೂ ಯಾಂತ್ರಿಕ ಶಿಸ್ತುಗಳೂ ಕೂಡ ಈ ಸಂಪ್ರದಾಯಗಳ ಇನ್ನೊಂದು ಭಾಗ. ಎಂತಲೇ ಉದ್ದೇಶಪೂರ್ವಕವಾಗಿ ಅವರು ಶಿಷ್ಟಾಚಾರಗಳನ್ನು ಒರಟಾಗಿ ವಿರೋಧಿಸುತ್ತಿದ್ದರು. ಜಾತಿ ಧರ್ಮಗಳು ಹಾಕುವ ಕಟ್ಟುಪಾಡು ಉಲ್ಲಂಘಿಸುವುದೇ ಸೃಜನಶೀಲತೆ ಪ್ರಕಟಿಸುವ ವಿಧಾನ ಎಂದು ಭಾವಿಸಿದ್ದರು. ಎಂತಲೇ ತೇಜಸ್ವಿ ಸಾಹಿತ್ಯದಲ್ಲಿ ಜನಜಂಗುಳಿಯು ಯಾವಾಗಲೂ ಜಡವಾದುದು. ನೇತ್ಯಾತ್ಮಕವಾದುದು. ಆದರೆ ಗುಂಪಿನಲ್ಲಿ ಸೇರದೆ ಒಂಟಿಯಾಗಿರುವ ಸ್ವತಂತ್ರ ಮನೋಧರ್ಮದವರು ವಿಶಿಷ್ಟ ವ್ಯಕ್ತಿಗಳು. ಇವರು ತಮಗೆ ಸರಿಕಂಡಂತೆ ಚಿಂತಿಸುವವರು ಹಾಗೂ ಬದುಕುವವರು. ತಮ್ಮ ಸ್ವಾತಂತ್ರ್ಯಕ್ಕಾಗಿ ಊರನ್ನು ಮನೆಯನ್ನು ಬಿಟ್ಟು ಹೊರಬಂದವರು. ಊರನ್ನೊ ಮನೆಯನ್ನೊ ಬಿಟ್ಟು, ಸಂಸಾರದ ನಿತ್ಯ ರಗಳೆಯಿಂದ ತಪ್ಪಿಸಿಕೊಂಡ ಅಲೆಮಾರಿಗಳು. ಲೋಕದ ಕಣ್ಣಲ್ಲಿ ಪೋಲಿಗಳು ಎನಿಸಿಕೊಂಡ ಇವರು ಸಾಮಾಜಿಕವಾಗಿ ಪ್ರತಿಷ್ಠೆ ಇಲ್ಲದ ಇಂತಹ ತರುಣರೇ ಅವರ ಕಥಾನಾಯಕರು. ಆದರೆ ಇಂತಹವರಿಂದಲೇ ಹೊಸತನ ಸೃಷ್ಟಿ ಸಾಧ್ಯ ಎಂದು ತೇಜಸ್ವಿ ಸಾಹಿತ್ಯ ಸೂಚಿಸುತ್ತದೆ. ತೇಜಸ್ವಿ ಸಾಹಿತ್ಯದಲ್ಲಿ ಪ್ರಯಾಣ ಅಥವಾ ಸುತ್ತಾಟವು ಒಂದು ದೊಡ್ಡ ಸೃಜನಶೀಲ ಸಂಗತಿಯಾಗಿದೆ. ಅಲೆದಾಟವನ್ನು ಮಾನ್ಯ ಮಾಡದ ನಗರ ಸಂಸ್ಕೃತಿಯಿಂದ ತೇಜಸ್ವಿ ಕಾಡಿನ ಪರಿಸರಕ್ಕೆ ಬರಲು ಇದೂ ಒಂದು ಕಾರಣ ಇರಬಹುದು.

ತೇಜಸ್ವಿ ಯಾಕೆ ಹಕ್ಕಿಗಳ ಬಗ್ಗೆ ಮತ್ತೆಮತ್ತೆ ಬರೆದರು ಎಂಬುದನ್ನು ಇಲ್ಲಿಯೇ ಗ್ರಹಿಸಬೇಕು. ತಮಗಿಷ್ಟ ಬಂದಂತೆ ಬದುಕುವ ಚಲಿಸುವ ಹಕ್ಕನ್ನು ಚಲಾಯಿಸುವ ಹಕ್ಕಿಗಳು ಅವರಿಗೆ ಒಂದು ಪ್ರತಿಮೆ. ಅವರು ಪರಿಸರದ ಬಗ್ಗೆ ಬರೆದದ್ದರಲ್ಲಿ ಅವರ ಸಾಮಾಜಿಕ ಬಂಡುಕೋರತನದ ಸುಪ್ತ ಗುಣಗಳಿವೆ ಮತ್ತು ದಾರ್ಶನಿಕ ಹುಡುಕಾಟವಿದೆ. ಈ ಬಂಡುಕೋರತನವು ಅವರು ಕನ್ನಡದ ಇಬ್ಬರು ದೊಡ್ಡ ಲೇಖಕರಾದ ಕುವೆಂಪು ಹಾಗೂ ಕಾರಂತರಿಂದ ಪಡೆದ ಗುಣವೂ ಆಗಿತ್ತು. ತಮ್ಮ ಬರಹಕ್ಕೆ ಕುವೆಂಪು ಅವರ ಕಲಾದೃಷ್ಟಿ 'ಲೋಹಿಯಾ ಅವರ ತಾತ್ವಿಕತೆ' ಕಾರಂತರ ಪ್ರಯೋಗಶೀಲ ಜೀವನವೇ ಪ್ರೇರಣೆ ಎಂದು ಅವರು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ ಕೂಡ. ತಂದೆಯಾಗಿದ್ದ ಕುವೆಂಪು ಅವರ ಪಥವನ್ನು ತೇಜಸ್ವಿ ತುಳಿಯಲಿಲ್ಲ ಎನ್ನಲಾಗುತ್ತದೆ. ಇದು ಕೆಲಮಟ್ಟಿಗೆ ನಿಜ. ಆದರೆ ಸಾಹಿತ್ಯ ಪರಂಪರೆಯಿಂದ ಮತ್ತೊಬ್ಬ ಲೇಖಕ ಪ್ರೇರಣೆ ಪಡೆಯುವಂತೆ, ಜಾತ್ಯತೀತವಾಗಿ ಬದುಕುವ, ಸಮಾಜ ಹಾಕುವ ಪ್ರತಿಬಂಧಗಳಾಚೆ ಸ್ವತಂತ್ರವಾಗಿ ಚಿಂತಿಸುವ ಗುಣವನ್ನು ಅವರು ಕುವೆಂಪು ಅವರಿಂದ ಪಡೆದರು. ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಕರೆಯನ್ನು ತೇಜಸ್ವಿಯವರು ತಮ್ಮದೇ ಆದ ರೀತಿಯಲ್ಲಿ ಅನುವಾದ ಮಾಡಿಕೊಂಡು ಬದುಕಿದರು ಮತ್ತು ಬರೆದರು. ಕುವೆಂಪು ಸತ್ವವು ಬೇರೆಬೇರೆ ರೂಪಾಂತರಗಳಲ್ಲಿ ಸುಪ್ತವಾಗಿ ತೇಜಸ್ವಿಯವರಲ್ಲಿ ಮುಂದುವರೆಯಿತು.

ತೇಜಸ್ವಿ ಮೂಲತಃ ತಾತ್ವಿಕ ಹುಡುಕಾಟ ಮಾಡುವ ಲೇಖಕರು. ಆದರೆ ಇದಕ್ಕಾಗಿ ಅವರು ತಮ್ಮ ಬರಹವನ್ನು ಜಟಿಲ ಮಾಡಲಿಲ್ಲ ಎನ್ನುವುದು ಅವರ ಬರೆಹದ ದೊಡ್ಡ ಸಾಧನೆಯಾಗಿದೆ. ಇದಕ್ಕೆ ಒಂದು ಕಾರಣ, ಬದುಕನ್ನು ತೇಜಸ್ವಿ ವ್ಯಂಗ್ಯವಾಗಿ ತಮಾಷೆಯಲ್ಲಿ ನೋಡುತ್ತ ಸೃಷ್ಟಿಸಿರುವ ಭಾಷೆ ಮತ್ತು ಕಥನಶೈಲಿ. ಈ ವಿನೋದ ಪ್ರಜ್ಞೆಯು ಅವರ ಸಾಹಿತ್ಯದಲ್ಲಿ ವ್ಯವಸ್ಥೆಯಲ್ಲಿ ಅಡಗಿಕೊಂಡಿರುವ ವೈರುಧ್ಯಗಳನ್ನು ಗುರುತಿಸಲು ಮತ್ತು ವಿಮರ್ಶಿಸಲು ಒಂದು ಸಾಧನವಾಗಿ ಕೆಲಸ ಮಾಡಿತು; ಬದುಕನ್ನು ಎಂತಹುದೇ ದುರ್ಭರ ಪರಿಸ್ಥಿತಿಯಲ್ಲಿ ಪಾಸಿಟಿವ್‌ಆಗಿ ನೋಡಲು ಒಂದು ದೃಷ್ಟಿಕೋನವಾಗಿ ಕೆಲಸ ಮಾಡಿತು ಹಾಗೂ ಅವರ ಬರಹಕ್ಕೆ ಲವಲವಿಕೆಯನ್ನು ತಂದು ಅವರನ್ನು ಜನಪ್ರಿಯ ಲೇಖಕರನ್ನಾಗಿಸಿತು. ಆದರೆ ಈ ಜನಪ್ರಿಯತೆಯು ಭೈರಪ್ಪನವರಂತೆ ತನ್ನ ಓದುಗರಲ್ಲಿ ಸಾಂಪ್ರದಾಯಕ ಮನೋಧರ್ಮಕ್ಕೆ ಬದಲು ವೈಚಾರಿಕ ವೈಜ್ಞಾನಿಕ ಹಾಗೂ ಜೀವನಪ್ರೀತಿಯ ಮೌಲ್ಯಗಳನ್ನು ಅದು ತುಂಬಿತು ಎನ್ನುವುದು ಮಹತ್ವದ ಸಂಗತಿ. ಹೊಸ ತಲೆಮಾರಿನ ಬಹಳ ಜನರಲ್ಲಿ ಸಾಹಿತ್ಯಾಸಕ್ತಿ ಉಳಿದುಕೊಂಡಿದ್ದರೆ ಅದಕ್ಕೆ ಕಾರಣ ತೇಜಸ್ವಿ ಬರಹವು ಯಾವುದೊ ಹಂತದಲ್ಲಿ ಪಥ್ಯವಾಗಿದ್ದುದೇ ಆಗಿದೆ. ಈ ಹೊತ್ತಿಗೂ ಕನ್ನಡ ಸಾಹಿತ್ಯದ ಆಸಕ್ತಿ ಹುಟ್ಟಿಸಲು ತೇಜಸ್ವಿ ಸಾಹಿತ್ಯದಿಂದ ಆರಂಭ ಮಾಡಬಹುದು. ತೇಜಸ್ವಿ ಅವರಂತೆ ಏಕಕಾಲಕ್ಕೆ ಕೇವಲ ಖುಷಿಗಾಗಿ ಓದುವ ಓದುಗರಿಗೂ ಗಂಭೀರ ಜಿಜ್ಞಾಸೆ ಮಾಡುವ ಚಿಂತಕರಿಗೂ ಸಲ್ಲುವ ಎರಡೂ ಸ್ತರದ ಬರಹವನ್ನು ಬರೆದು ಯಶಸ್ಸನ್ನು ಕಂಡವರು ಕನ್ನಡದಲ್ಲಿ ಕಡಿಮೆ.

ತೇಜಸ್ವಿ ಸಾಹಿತ್ಯದಲ್ಲಿ ಬದುಕಿನ ದುರ್ಭರ ಸನ್ನಿವೇಶದಲ್ಲೂ ಚೈತನ್ಯ ಪ್ರಕಟಿಸುವ ಸಾಮಾನ್ಯರು ಇದ್ದಾರೆ. ಆದರೆ ಅವರ ದುರ್ಭರತೆಗೆ ಕಾರಣವಾಗಿರುವ ಊಳಿಗಮಾನ್ಯ ಪದ್ಧತಿಯ ವಿಮರ್ಶಾತ್ಮಕ ಚಿತ್ರಗಳು ಕಡಿಮೆ. ಕುವೆಂಪು ಅವರ ಕಾದಂಬರಿಗಳೂ ಇದೇ ಬಗೆಯ ಸಾಮಾನ್ಯರ ಚೈತನ್ಯಶೀಲತೆಯನ್ನು ಪ್ರಕಟಿಸುವಾಗ, ತಪ್ಪದೆ ಅವರ ಬದುಕನ್ನು ಆವರಿಸಿರುವ ಆರ್ಥಿಕ ಸಾಮಾಜಿಕ ಯಜಮಾನಿಕತೆಯ ಕ್ರೌರ್ಯವನ್ನು ತಪ್ಪದೆ ಚಿತ್ರಿಸುತ್ತವೆ ಎನ್ನುವುದನ್ನು ಇಲ್ಲಿ ನೆನೆಯಬೇಕು. ವಿಶಿಷ್ಟ ವ್ಯಕ್ತಿಗಳ ಚೈತನ್ಯಶೀಲತೆಯನ್ನು ಆದರಿಸುತ್ತಿದ್ದ ತೇಜಸ್ವಿ ಸಮಾಜವನ್ನು ತನ್ನ ಸಂಘಟಿತವಾದ ಕ್ರಿಯೆಯಿಂದ ಬದಲಾಯಿಸುವ ಯಾವುದೇ ಸಾಮಾಜಿಕ ಚಳವಳಿಯನ್ನಾಗಲಿ ರಾಜಕೀಯ ಕ್ರಿಯೆಯನ್ನಾಗಲಿ ಮನ್ನಿಸಲಿಲ್ಲ, ಎಂತಲೇ ಅವರಲ್ಲಿ ಎಲ್ಲ ಚಳವಳಿಗಾರರೂ ವ್ಯಂಗ್ಯಚಿತ್ರಗಳು. ಮೇಲಾಗಿ ಅವರ ಸಾಹಿತ್ಯದಲ್ಲಿ ಸಮಾಜದ ಕಟ್ಟುಪಾಡು ಮೀರಿ ಚೈತನ್ಯ ಪ್ರಕಟಿಸುವ ವ್ಯಕ್ತಿಗಳೂ ಸಾಮಾನ್ಯವಾಗಿ ಗಂಡಸರು. ಇದನ್ನು ಮೀರಲೆಂದೋ ಏನೋ ಮಹಿಳೆಯರೆ ನಾಯಕಿಯರಾಗುವ ಕೃತಿಯನ್ನು ('ಕಿರಗೂರಿನ ಗಯ್ಯಾಳಿಗಳು') ಅವರು ರಚಿಸಿದರೂ ಅದು ಸಹಜವಾಗಿದೆ ಎನಿಸುವುದಿಲ್ಲ. ಯೂರೋಪಿನ ಆಧುನಿಕತೆ ವೈಚಾರಿಕತೆ ವೈಜ್ಞಾನಿಕ ಶೋಧಕ ಗುಣ ಇವುಗಳ ಬಗ್ಗೆ ಬಹಳ ಆದರವಿದ್ದ ತೇಜಸ್ವಿಗೆ ಇದೇ ಯೂರೋಪು ತನ್ನ ಬಂಡವಾಳಶಾಹಿ ವ್ಯವಸ್ಥೆಯ ಭಾಗವಾಗಿ ಹೇಗೆ ಬಡದೇಶಗಳ ಸಂಪತ್ತಿನ ದೋಚುವಿಕೆಗೂ ಹಿಂಸೆಗೂ ಕಾರಣವಾದ ಚರಿತ್ರೆ ಅಷ್ಟು ಮುಖ್ಯವಾಗಲಿಲ್ಲ, ಯೂರೋಪಿನ ಬಗ್ಗೆ ಅವರು ಎಷ್ಟು ಪಾಸಿಟಿವ್ ಎಂದರೆ, ಪ್ರಸ್ತುತ ಭಾರತದ ರಾಜಕಾರಣದ ಬಗ್ಗೆ ಬಹಳ ವಿಮರ್ಶೆಗೆ ಅದೊಂದು ನಿಕಷವಾಗಿತ್ತು. ಅವರ ಪ್ರಸಿದ್ಧ 'ತಬರನ ಕತೆ'ಯು ಮಾನವೀಯ ಸಂವೇದನೆ ಕಳೆದುಕೊಂಡಿರುವ ಭಾರತೀಯ ಆಡಳಿತಶಾಹಿಯನ್ನು ವಿಮರ್ಶಿಸುತ್ತಲೇ, ಪರೋಕ್ಷವಾಗಿ ಮಾಹುತಶಾಹಿ ಕಾಲದ ಆಡಳಿತ ವ್ಯವಸ್ಥೆಯನ್ನು ಮೆಚ್ಚುವುದನ್ನು ಗಮನಿಸಬೇಕು.

ತೇಜಸ್ವಿ, ನಂಜುಂಡಸ್ವಾಮಿ, ಲಂಕೇಶ್-ಕಳೆದ 50 ವರ್ಷಗಳ ಕರ್ನಾಟಕದ ಬದುಕಿನಲ್ಲಿ ತಮ್ಮ ಬರಹ ಮಾತು ಕ್ರಿಯೆಗಳ ಮೂಲಕ ವಾಗ್ವಾದವನ್ನು ಹುಟ್ಟಿಸಿ, ಕನ್ನಡಿಗರ ಮನಸ್ಸನ್ನು ಕಟ್ಟಿದ ವ್ಯಕ್ತಿತ್ವಗಳು ಒಂದೊಂದಾಗಿ ನಿರ್ಗಮಿಸಿದವು. ಸದಾ ಹುಡುಗುತನದಲ್ಲಿ ಲೋಕವನ್ನು ನೋಡುತ್ತ ಲವಲವಿಕೆಯಿಂದ ಬರೆಯುತ್ತ ತರುಣ ಓದುಗರನ್ನು ವ್ಯಾಮೋಹಕ್ಕೆ ಒಳಪಡಿಸಿದ್ದ ತೇಜಸ್ವಿ ತಟ್ಟನೆ ಮರೆಯಾಗಿದ್ದು ಒಂದು ಶಾಕಿಂಗ್ ತರಹ ಇದೆ. ಅನಿಸಿದ್ದನ್ನು ನೇರವಾಗಿ ಹೇಳುತ್ತಿದ್ದ, ರಾಜಕೀಯ ಪ್ರಭುತ್ವದವರನ್ನು ಓಲೈಸಲು ನಿರಾಕರಿಸಿದ, ನಾಗರಿಕ ಶಿಷ್ಟಾಚಾರಗಳನ್ನು ಗೇಲಿ ಮಾಡುತ್ತಿದ್ದ ಸಭೆಗಳನ್ನು ದೂರವಿಟ್ಟಿದ್ದ ನಗರಗಳನ್ನು ಇಷ್ಟಪಡದಿದ್ದ ವಿದೇಶಿ ಪ್ರವಾಸ ಮಾಡಲು ಹವಣಿಸದ, ಕೆಲವೊಮ್ಮೆ ಅಸೂಕ್ಷ್ಮವಾಗಿ ವಾದ ಮಾಡುತ್ತಿದ್ದ ತಮಗೆ ಸರಿಕಂಡಂತೆ ಬದುಕಿದ ತೇಜಸ್ವಿ, ಕರ್ನಾಟಕ ಕಂಡ ವಿಶಿಷ್ಟ ಸಾರ್ವಜನಿಕ ವ್ಯಕ್ತಿ ಆಗಿದ್ದರು. ತನ್ನ ಖಾಸಗಿ ಬದುಕು ಹಾಗೂ ವ್ಯಕ್ತಿವಿಶಿಷ್ಟತೆಯನ್ನು ರಕ್ಷಿಸಿಕೊಳ್ಳಲೆಂದೇ ಒರಟುತನ ರೂಢಿಸಿಕೊಂಡಂತೆ ಇದ್ದ ತೇಜಸ್ವಿ ಆಳದಲ್ಲಿ ಸೂಕ್ಷ್ಮ ಸಂವೇದನೆಯ ಲೇಖಕರಾಗಿದ್ದರು. ಸಾಹಿತ್ಯ ಕಲೆ ಸಂಗೀತಗಳ ಲವಲೇಶದ ಆಸಕ್ತಿಯೂ ಇಲ್ಲದ ಸಂಘಪರಿವಾರವು 'ಆವರಣ' ಕಾದಂಬರಿಯನ್ನು ಹೊತ್ತುಕೊಂಡು ತಿರುಗುತ್ತಿರುವ ಈ ಹೊತ್ತಲ್ಲಿ, ತೇಜಸ್ವಿ ಸಾಹಿತ್ಯವು ಕಳೆದ ಅರ್ಧಶತಮಾನ ಕಾಲದಲ್ಲಿ ನಿರ್ಮಿಸಿರುವ ಸಾಂಸ್ಕೃತಿಕ ಜೋಡಿಗಾರಿಕೆಯು ಎಷ್ಟು ಮಹತ್ವದೆಂದು ಮನವರಿಕೆ ಆಗುತ್ತಿದೆ.

ಸಿಬಿಐ ತನಿಖೆ ಭಯ
ಪೇಜಾವರ ಪೀಠತ್ಯಾಗ?

ಉಡುಪಿಯ ಮಾಧ್ವಬ್ರಾಹ್ಮಣರ ಮಠಾಧೀಶ ಹಾಗೂ ಹಿಂದೂ ಧರ್ಮದ 'ಸ್ವಘೋಷಿತ' ಮುಖಂಡ ಪೇಜಾವರ ಸ್ವಾಮಿ ಪೀಠತ್ಯಾಗ ಮಾಡಲು ನಿರ್ಧರಿಸಿದ್ದಾರಂತೆ! ಈತ ಹಾಗೆ ನಿರ್ಧರಿಸಲು ವೆಂಕಟೇಶ್ ಮೇಲಿನ ಹಲ್ಲೆ ಕೇಸ್ CBI ಗೆ ಹೋಗುವ ಸಾಧ್ಯತೆ ಇರುವುದೇ ಕಾರಣ ಎನ್ನಲಾಗುತ್ತಿದೆ. ಅಷ್ಟೇ ಅಲ್ಲದೆ ಕಾನೂನಿನ ಚೌಕಟ್ಟು ಮೀರಿ ಆರೋಪಿ ಪೇಜಾವರಗೆ ನೆರವಾಗಲು ಹೋಗಿ ಎಸಿಪಿ ನಾಯಕ್ ಹಾಗೂ ಪಬ್ಲಿಕ್ ಪ್ರಾಸಿಕ್ಯೂಟರ್ ದೊರೈರಾಜ ಕೋರ್ಟಿನಲ್ಲೇ ಛೀಮಾರಿ ಹಾಕಿಸಿಕೊಂಡಿದ್ದು ನೋಡಿ ಪೇಜಾವರ ನಿಜಕ್ಕೂ ಹೆದರಿಕೊಂಡಿದ್ದಾನೆ.

ಬೆಂಗಳೂರಿನ ವೆಂಕಟೇಶ್, ರುಕ್ಮಿಣಿ ಹಾಗೂ ಶ್ರೀನಿಧಿ ಎಂಬುವರೊಂದಿಗೆ 12 ಲಕ್ಷ ರೂ.ನ ಅಕ್ರಮ ವ್ಯವಹಾರ ನಡೆಸಲು ಹೋಗಿ ಹೊಡೆದಾಟ ಬಡಿದಾಟ ಎಲ್ಲಾ ನಡೆದು ಕೊನೆಗದು ಕೆಂಪೇಗೌಡ ನಗರ ಪೊಲೀಸ್ ಠಾಣೆಯಲ್ಲಿ ದೂರಾಗಿ ದಾಖಲಾಗಿತ್ತು. ಜನ ಬಿಟ್ಟು ತಮ್ಮ ಮೇಲೆ ಪೇಜಾವರ ಸ್ವಾಮಿ ಹಲ್ಲೆ ಮಾಡಿಸಿದ ಅಂತಾ ಅವತ್ತು ಕಂಪ್ಲೆಂಟ್ ಕೊಟ್ಟಿದ್ದರು ವೆಂಕಟೇಶ್. ಕೂಡಲೇ FIR ಹಾಕಿದ್ದ ಸಬ್‌ಇನ್ಸ್‌ಪೆಕ್ಟರ್ ಬೈರಲಿಂಗಯ್ಯ ತನಿಖೆ ಶುರುಮಾಡುವಷ್ಟರಲ್ಲಿ ಸರ್ಕಾರ ಇಡೀ ಪ್ರಕರಣದ ವಿಚಾರಣೆಯನ್ನು ಸೆಂಟ್ರಲ್ ಎಸಿಪಿ ನಾಯಕ್‌ಗೆ ವಹಿಸಿಕೊಟ್ಟಿತ್ತು.

ಈ ಪೆದ್ದಂಭಟ್ಟ ನಾಯಕ್ ಆಳುವ ಸರ್ಕಾರದ ಯಡಿಯೂರಪ್ಪನನ್ನು ಮೆಚ್ಚಿಸಲೋ ಇಲ್ಲಾ ಯಾವ ಮಠದ ಎಂಜಲು ಪ್ರಸಾದ ತಿಂದು ಬಂದನೋ ತನಿಖೆ ಮಾಡುವ ನೆಪದಲ್ಲಿ ಪೇಜಾವರ ವಿರುದ್ಧ ದೂರು ನೀಡಿದ್ದ ವೆಂಕಟೇಶ್ ಹಾಗೂ ರುಕ್ಮಿಣಿಯವರನ್ನೇ

ಈಶ

ಎಳೆತಂದು ಚಿತ್ರಹಿಂಸೆ ಕೊಟ್ಟಿದ್ದ. ಕೆಲಕಾಲ ಅವರಿಬ್ಬರನ್ನೂ ಅಕ್ರಮ ಬಂಧನದಲ್ಲೂ ಇರಿಸಿದ್ದ. ಆಗ ವೆಂಕಟೇಶ್ ಪರ ವಕೀಲರಾದ ಸಿ.ಎಸ್ ದ್ವಾರಕಾನಾಥ್ ನೇರ ಹೈಕೋರ್ಟ್ ಮೆಟ್ಟಲೇರಿ ವೆಂಕಟೇಶ್ ಹಾಗೂ ರುಕ್ಮಿಣಿ ನಾಪತ್ತೆಯಾಗಿದ್ದಾರೆಂದು ಹೇಳಿ ಹೆಬಿಯಸ್ ಕಾರ್ಪಸ್ ಅರ್ಜಿ ನೀಡಿದ್ದರು. ಪೊಲೀಸರಿಗೆ ಪೀಕಲಾಟ ಶುರುವಾಗಿದ್ದೇ ಆಗ.

ಉಪಮುಖ್ಯಮಂತ್ರಿ ಹೇಳಿದರೆಂದೊ ಅಥವಾ ಈ ಹಿಂದೂ ಧರ್ಮೋದ್ಧಾರಕನನ್ನು ರಕ್ಷಿಸಬೇಕಂತಲೋ ಎಸಿಪಿ ನಾಯಕ್ ಕಾನೂನಿನ ಚೌಕಟ್ಟನ್ನು ಮೀರಿ ವರ್ತಿಸಿಬಿಟ್ಟಿದ್ದ. ಆರೋಪಿ ಪೇಜಾವರನನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿ ಹೇಳಿಕೆ ಪಡೆಯುವ ಬದಲಾಗಿ ದೂರು ಕೊಟ್ಟಿದ್ದ ನಿಷ್ಪಾಪಿಗಳನ್ನೇ ಎಳೆದೊಯ್ದು ಹಿಂಸೆ ಕೊಟ್ಟಿದ್ದ. ಈ ಇಡೀ ಘಟನಾವಳಿ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಸ್ವತಃ ಹೈಕೋರ್ಟ್ ತನ್ನ ರಿಜಿಸ್ಟ್ರಾರರನ್ನೇ ನೇಮಿಸಿತ್ತು. ಈಗ ಅವರ ವರದಿ ಕೋರ್ಟ್ ಕೈಸೇರಿದೆ. ಅದರಲ್ಲಿ ಎಸಿಪಿ ನಾಯಕ್ ಹದ್ದು ಮೀರಿ ವರ್ತಿಸಿ ಅಪರಾಧವೆಸಗಿದ್ದಾನೆ ಎಂದು ರಿಜಿಸ್ಟ್ರಾರ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ಕೋರ್ಟ್ ಈಗ ಹೆಬಿಯಸ್ ಕಾರ್ಪಸ್ ಅರ್ಜಿ ಇತ್ಯರ್ಥ ಮಾಡಿ ಸರ್ಕಾರಕ್ಕೆ 50 ಸಾವಿರ ರೂ. ದಂಡ ವಿಧಿಸಿದೆ. ಅಷ್ಟೇ ಅಲ್ಲ ಎಸಿಪಿ ನಾಯಕ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆಯೂ ಆದೇಶಿಸಿದೆ.

ಅಂದರೆ ಪೊಲೀಸರನ್ನು ಬಳಸಿಕೊಂಡು ಪೇಜಾವರರನ್ನು ರಕ್ಷಿಸುವ ಷಡ್ಯಂತ್ರವೊಂದು ಶೋಚನೀಯವಾಗಿ ವಿಫಲವಾದಂತಾಯಿತು. ವೆಂಕಟೇಶರ ಮೇಲೆ ಪೇಜಾವರ ಮತ್ತವರ ಗುಂಪಿನವರಿಂದ ನಡೆದಿದೆ ಎನ್ನಲಾದ ಹಲ್ಲೆ ಕಿರುಕುಳಗಳ ಪ್ರಕರಣದ ತನಿಖೆ ಈಗ ಬಿಗಿಯಾಗಿ ಮುಂದುವರೆಯುತ್ತದೆ ಎಂದಾಯಿತು.

ಪೇಜಾವರಗೆ ದಿಗಿಲಾಗುತ್ತಿರುವುದು ಇದರ ಬಗ್ಗೆಯೇ.

ಸಿಬಿಐ ತನಿಖೆಗೆ ಕೇಳುತ್ತಾರಾ?

ರಾಜ್ಯದ ಉಪಮುಖ್ಯಮಂತ್ರಿಯೇ ಹಿಂದು ಮುಂದು ಯೋಚಿಸದೆ ಪೊಲೀಸ್ ತನಿಖೆ ನಡೆಯುತ್ತಿದ್ದಾಗಲೇ ಆರೋಪಿ ಪೇಜಾವರನನ್ನು ಬೆಂಬಲಿಸುತ್ತಾ "ಯಾರ್‍ರೀ ಅವನು ದೂರು ಕೊಟ್ಟಿರೋನು? ಅವನನ್ನು ಬೆಂಡೆತ್ತಿರಿ" ಎಂದು ಪೊಲೀಸರನ್ನು ಛೂ ಬಿಟ್ಟಿದ್ದರು. ಇಷ್ಟೇ ಸಾಕಿತ್ತು ಪೊಲೀಸರು ದೂರು ಕೊಟ್ಟವರನ್ನೇ ಬೆದರಿಸಿದ್ದರು. ಹಾಗೂ ಈಗ ಕೋರ್ಟ್ ಸರ್ಕಾರಕ್ಕೆ ದಂಡ ವಿಧಿಸಿರುವುದರಿಂದ ಪೇಜಾವರ ವಿರುದ್ಧದ ಪ್ರಕರಣದ ತನಿಖೆಯನ್ನು ನಡೆಸುವ ಅರ್ಹತೆ ಹಾಗೂ ಯೋಗ್ಯತೆ ಎರಡನ್ನೂ ಕರ್ನಾಟಕ ಪೊಲೀಸರು ಕಳೆದುಕೊಂಡಂತಾಗಿದೆ. ಬಹುಶಃ ಆ ಕಾರಣ ಮುಂದುಮಾಡಿಕೊಂಡೇ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ವೆಂಕಟೇಶ್ ಕೇಳಲೂಬಹುದು. ಅಕಸ್ಮಾತ್ ಕೋರ್ಟ್ 'ಆಗಲಿ' ಎಂದು ಬಿಟ್ಟರೆ......!


ವೆಂಕಟೇಶ್


ಶ್ರೀನಿಧಿ

ಪೇಜಾವರಗೆ ಡಬ್ಬಲ್ ದಿಗಿಲಾಗಲು ಇದೂ ಒಂದು ಕಾರಣ.

ಈ ಗಲಾಟೆ ಹಲ್ಲೆ ಪ್ರಕರಣದ ವಿಚಾರಣೆಯು ಬೆಂಗಳೂರಿನ ಕೋರ್ಟ್‌ನಲ್ಲೇ ನಡೆಯಲಿ ಇಲ್ಲಾ ಸಿಬಿಐ ಕೈಗೇ ಹೋಗಲಿ ತಾವು ಸಿಕ್ಕಿ ಬೀಳಬಹುದೆಂಬ ಭೀತಿ ಪೇಜಾವರರನ್ನು ಕಾಡುತ್ತಿರುವಂತಿದೆ.

ಹಾಗಾಗಿ ಕೋರ್ಟ್ ಹೊರಗೆ ಕೇಸು ಸೆಟಲ್ ಮಾಡಿಕೊಳ್ಳುವ ಕೆಲ ಪ್ರಯತ್ನಗಳನ್ನು ಪೇಜಾವರ ಶಿಷ್ಯರು ನಡೆಸುತ್ತಿದ್ದಾರೆ. ಬೆಂಗಳೂರಿನ ಕೆಲ ಬ್ರಾಹ್ಮಣ ಹೋಟೆಲ್ ಮಾಲೀಕರು ಇಂತಾ ತಿಪ್ಪೇ ಸಾರಿಸುವ ಸರ್ಕಸ್ ಮಾಡಿ ಸೋತಿದ್ದಾರೆ.

ಈ ಬೆಳವಣಿಗೆಗಳನ್ನೆಲ್ಲಾ



ಗಮನಿಸುತ್ತಿರುವ ಪೇಜಾವರ 'ನಾನು ಪೀಠತ್ಯಾಗ ಮಾಡಬೇಕಾಗುತ್ತದೆ' ಎಂದು ಅಲ್ಲಲ್ಲಿ ಹೇಳಿಕೊಂಡು ತಿರುಗುತ್ತಿದ್ದಾರೆ.

ಈ ಪೇಜಾವರ ಒಂದು ವೇಳೆ ಪೀಠತ್ಯಾಗ ಮಾಡೇ ಬಿಟ್ಟರೆ ಆಕಾಶವೇನೂ ಬಿದ್ದು ಹೋಗುವುದಿಲ್ಲ. ಪೇಜಾವರ ಏನು ನಮ್ಮ ಇಡೀ ಕರ್ನಾಟಕ ರಾಜ್ಯದ ಧರ್ಮಗುರುವೂ ಅಲ್ಲಾ, ದರ್ಶನಿಕನೂ ಅಲ್ಲ..... ರಾಜ್ಯದಲ್ಲಿರುವ ಒಂದು ಸಣ್ಣ ಅಲ್ಪ ಸಂಖ್ಯಾತ ಜನಾಂಗವಾದ ಮಾಧ್ವ ಬ್ರಾಹ್ಮಣರಿಗಿರುವ ಎಂಟು ಮಠಗಳ ಪೈಕಿ ಒಂದು ಮಠದ ಸ್ವಾಮಿ ಅಷ್ಟೇ ಪೇಜಾವರ.

ನಮಗಿದೆಲ್ಲಾ ಮುಖ್ಯ ಆಗಬೇಕಿಲ್ಲ. ಬೆಂಗಳೂರು ಪೊಲೀಸರು ಕನಿಷ್ಟ ಈಗಲಾದರೂ ಐಪಿಸಿ 307, 326, 506, (20) ಸೆಕ್ಷನ್‌ಗಳಡಿ ಪೇಜಾವರ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಯನ್ನು ನಿಷ್ಪಕ್ಷಪಾತವಾಗಿ ನಡೆಸಬೇಕಿದೆ.

ಜನ ಹಾಗೂ ಕೋರ್ಟ್ ತಮ್ಮ ವರ್ತನೆಯನ್ನೂ, ಕರ್ತವ್ಯ ಪ್ರಜ್ಞೆಯನ್ನೂ ಗಮನಿಸುತ್ತಿರುತ್ತಾರೆಂಬುದು ಪೊಲೀಸರಿಗೆ ಅರ್ಥವಾದರೆ ಸರಿ.

ದೊರೈರಾಜ್‌ಗೆ ಕೋರ್ಟ್ ಛೀಮಾರಿ

ಹಾಲಿ ಬಿಜೆಪಿ-ದಳ ನೇತೃತ್ವದ ಅರಬೆರಕೆ ಸರ್ಕಾರಕ್ಕೆ ನಾಚಿಕೆ, ಮಾನ, ಮರ್ಯಾದೆ ಏನೂ ಇದ್ದಂತಿಲ್ಲ. ಏಕೆಂದರೆ ಮೊದಲನೆಯದಾಗಿ ಪೇಜಾವರ ಕೇಸಿನಲ್ಲಿ ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಲು ಬಿಡದೆ ತನಿಖಾಧಿಕಾರಿ ಎಸಿಪಿ ನಾಯಕ್‌ರನ್ನು ದೂರು ಕೊಟ್ಟವರ ಮೇಲೇ ಛೂಬಿಟ್ಟು ಇಲ್ಲದ ರಾದ್ಧಾಂತ ಸೃಷ್ಟಿಸಿತು.

ಈಗ ಕೋರ್ಟ್ ಸರ್ಕಾರಕ್ಕೇ 50 ಸಾವಿರ ದಂಡ ಹಾಕಿ ಮುಖಭಂಗ ಮಾಡಿದೆ. ಇನ್ನು ಎರಡನೆಯ ಫಜೀತಿ ಎಂದರೆ ಪಬ್ಲಿಕ್ ಪ್ರಾಸಿಕ್ಯೂಟರ್ ದೊರೈರಾಜ್‌ರದ್ದು. ಈತ ಹೇಳಿಕೇಳಿ ಆರ್‌ಎಸ್‌ಎಸ್ ಹೈದ. ಹೈಕೋರ್ಟಿನಲ್ಲಿ ಹೆಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ನಡೆಯುತ್ತಿದ್ದಾಗ ಸರ್ಕಾರದ ಪರವಾಗಿ ವಾದ ಮಂಡಿಸುತ್ತಾ **'Pejawar is innocent and we have to protect him'** ಎಂದೆಲ್ಲಾ ಅಸಂಬದ್ಧ ಮಾತಾಡಿ ಕೋರ್ಟ್ ಹಾಲ್‌ನಲ್ಲೇ ಛೀಮಾರಿ ಹಾಕಿಸಿಕೊಂಡಿದ್ದಾರೆ. ಹೈಕೋರ್ಟಿನ ವಿಭಾಗೀಯ ಪೀಠ ದೊರೈರಾಜ್‌ರ ಕುತರ್ಕ ಆಲಿಸಿ "ನೀವು ಪೇಜಾವರ ಪರವಾಗಿ ವಕಾಲತ್ತು ವಹಿಸಿಕೊಂಡಿದ್ದೀರಾ ಅಥವಾ ಸರ್ಕಾರದ ವಕೀಲರ" ಎಂದು ಪ್ರಶ್ನಿಸಿದೆ.

ವೃತ್ತಿ ಘನತೆ ಹಾಗೂ ಸ್ವಾಭಿಮಾನ ಇರುವವರಿಗೆ ಚಾಟಿ ಏಟಿನಂತಹ ಮಾತಿದು. ಈ ದೊರೈರಾಜ್ ಕೇವಲ ಕೋರ್ಟಿನಲ್ಲಿ ಮಾತ್ರವಲ್ಲ ಹೊರಗಡೆಯೂ ಪೇಜಾವರ ರಕ್ಷಣೆಗೆ ನಾನಾ ಸರ್ಕಸ್ ಮಾಡಿದ್ದಾರೆ. ವೆಂಕಟೇಶ್ ಪರ ವಕೀಲರ ಬೆನ್ನುಹತ್ತಿ "ಡಿಸಿಎಂ ಯಡಿಯೂರಪ್ಪ ನಿಮ್ಮ ಹತ್ತಿರ ಮಾತಾಡಬೇಕಂತೆ. ನೀವು ಯಾವ ಜಾಗ ಹೇಳಿದರೂ ಬರುತ್ತಾರೆ," ಎಂದೆಲ್ಲಾ ಪುಸಲಾಯಿಸಲು ನೋಡಿದ್ದಾರೆ. ಆದರೆ ಅವರು ಒಪ್ಪಿಲ್ಲ. ಇಂಥ ಮಾನಗೇಡಿ ಸರ್ಕಾರ, ಕರ್ತವ್ಯಭ್ರಷ್ಟ ಪೊಲೀಸರು, ಲಾಬೀಕೋರ ಸರ್ಕಾರಿ ವಕೀಲರಿರುವಾಗ 'ಪೇಜಾವರ ಕೇಸ್'ನ ವಿಚಾರಣೆ ನ್ಯಾಯಸಮ್ಮತವಾಗಿ ನಡೆಸಲು ಅವಕಾಶ ನೀಡುತ್ತಾರೆಯೇ?

ಈ ಅನುಮಾನಗಳಿರುವ ಕಾರಣಕ್ಕೇನೆ ವೆಂಕಟೇಶ್ ಕುಟುಂಬ 'ನಮಗೆ ಕರ್ನಾಟಕ ಪೊಲೀಸರ ಮೇಲೆ ನಂಬಿಕೆ ಇಲ್ಲ. ಈ ಕೇಸ್ ಅನ್ನು ಸಿಬಿಐಗೆ ವಹಿಸಿ,' ಎಂದು ಅಪೀಲು ಹೋಗುವ ಸಾಧ್ಯತೆಗಳಿವೆ. ಈ ಸಾಧ್ಯತೆ ಹಾಗೂ ಮುಂದೆ ಅದರಿಂದಾಗಬಹುದಾದ ಪರಿಣಾಮಕ್ಕೆ ಹೆದರಿಕೊಂಡು ಪೇಜಾವರ ಸ್ವಾಮಿ ಪೀಠತ್ಯಾಗದ ಮಾತು ತೇಲಿ ಬಿಟ್ಟಿದ್ದಾರೆ.

ಪೇಜಾವರ ಸ್ವಾಮಿಗೆ ಈ ತರಲೆ, ತಾಪತ್ರಯ ಯಾಕೆ ಬೇಕಿತ್ತು?

ಪತ್ರಿಕಾ ವರದಿಗಳಲ್ಲೂ ಗೊಂದಲ

'ಹಲ್ಲೆ ಪ್ರಕರಣ, ಪೇಜಾವರ ಆರೋಪ ಮುಕ್ತ' ಎಂಬ ಹೆಡ್ಡಿಂಗ್‌ನ ಕೆಲ ವರದಿಗಳು ಕಳೆದ ವಾರದ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವುದಂತೂ ವಿಚಿತ್ರವೇ ಸರಿ. ಏಕೆಂದರೆ ಮೊನ್ನಿನ ಹೈಕೋರ್ಟ್ ತೀರ್ಪು ನೇರವಾಗಿ ಸಂಬಂಧಪಟ್ಟಿದ್ದು ಹೆಬಿಯಸ್ ಕಾರ್ಪಸ್ ಅರ್ಜಿಗೆ ಮಾತ್ರ. ದೂರು ನೀಡಿದ್ದ ವೆಂಕಟೇಶ್ ಮೇಲೇ ಪೊಲೀಸರು ನಡೆಸಿದ್ದ ದೌರ್ಜನ್ಯವು ಸಾಬೀತಾಗಿದೆ ಎಂದು ಕೋರ್ಟ್ ಸರ್ಕಾರಕ್ಕೆ 50 ಸಾವಿರ ದಂಡ ವಿಧಿಸಿದೆ. ಈ ಅರ್ಜಿಯಲ್ಲಿ ಪೇಜಾವರ ಆರೋಪಿಯೇ ಆಗಿರಲಿಲ್ಲ, ಹೀಗಿದ್ದಾಗ ಆರೋಪ ಮುಕ್ತನಾದರೆಂಬ ಮಾತು ಎಲ್ಲಿಯದು?

ಪ್ರಾಧ್ಯಾಪಕ ವೆಂಕಟೇಶ್‌ರವರು ಪೇಜಾವರ ವಿರುದ್ಧ ಪೊಲೀಸರಿಗೆ ನೀಡಿರುವ ದೂರಿನ ತನಿಖೆಯಾಗಿ ಕೋರ್ಟನಲ್ಲಿ ಆ ಬಗ್ಗೆ ವಿಚಾರಣೆಯಾಗಿ ತೀರ್ಪು ಹೊರಬಿದ್ದ ನಂತರವಷ್ಟೇ ಪೇಜಾವರ ಅಪರಾಧಿಯೋ ಇಲ್ಲಾ ನಿರಪರಾಧಿಯೋ ಎಂಬುದು ಗೊತ್ತಾಗುತ್ತದೆ.

ನಮ್ಮ ದಿನಪತ್ರಿಕೆಗಳ ಚೆಡ್ಡಿ ಪತ್ರಕರ್ತರು ಕನಿಷ್ಠ ಅಲ್ಲಿಯವರೆಗಾದರೂ ತಾಳ್ಮೆಯಿಂದ ಕಾಯುತ್ತಾರೆಂದು ನಿರೀಕ್ಷಿಸೋಣ.

ಪೇಜಾವರ-ಪೊಲೀಸ್ ಕಣ್ಣಾಮುಚ್ಚಾಲೆ



ಯಾವುದೇ ಪ್ರಕರಣದಲ್ಲಿ ಒಮ್ಮೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾದರೆ ಆರೋಪಿಯನ್ನು ಹುಡುಕಿ ಠಾಣೆಗೆ ಕರೆತಂದು ಹೇಳಿಕೆ ಪಡೆಯುವುದು ಒಂದು ನಿಯಮ.

ಆದರೆ ಪೇಜಾವರರಿಗೆ ಅಂತಾ ಯಾವುದೇ ನಿಯಮ ಅಥವಾ ಕಾಯಿದೆಗಳು ಅನ್ವಯಿಸುವುದಿಲ್ಲ ಎಂದು ಕಾಣುತ್ತದೆ. ಏಕೆಂದರೆ ಕೆಂಪೇಗೌಡ ಪೊಲೀಸರಾಗಲಿ ಅಥವಾ ಈ ಕೇಸಿನ ತನಿಖಾಧಿಕಾರಿಯಾಗಿರುವ ಅಸಿಸ್ಟೆಂಟ್ ಪೊಲೀಸ್ ಕಮಿಷನರ್ ನಾಯ್ಕರಾಗಲಿ ಒಮ್ಮೆಯೂ ಪೇಜಾವರರನ್ನು ಕರೆಸಿ ಹೇಳಿಕೆ ತೆಗೆದುಕೊಂಡಿಲ್ಲ, ತಾವೂ ಪೇಜಾವರ ಇದ್ದಲ್ಲಿಗೆ ಹೋಗಿಯೂ ಬಂದಿಲ್ಲ. ಈ ಬಗ್ಗೆ ಕೋರ್ಟ್‌ನಲ್ಲೂ ಪೊಲೀಸರು ಹೇಳಿಕೆ ನೀಡಿ 'ಪೇಜಾವರ ಇದುವರೆಗೂ ಪತ್ತೆಯಾಗಿಲ್ಲ' ಎಂದು ಹೇಳಿದ್ದಾರೆ. ಇದು ನಿಜವಲ್ಲ ಎಂಬುದು ಪೊಲೀಸ್‌ರಾದಿಯಾಗಿ ಎಲ್ಲರಿಗೂ ಗೊತ್ತು! ಆದರೂ ಪೊಲೀಸ್ ಹಾಗೂ ಪೇಜಾವರ ನಡುವೆ ಈ ಕಣ್ಣಾಮುಚ್ಚಾಲೆ ಮುಂದುವರೆದೇ ಇದೆ.

ಪೊಲೀಸರಿಂದ ಕಣ್ಣು ತಪ್ಪಿಸಿಕೊಂಡು ಭೂಗತರಾಗಿರುವ ಪೇಜಾವರ ಸ್ವಾಮಿಗಳು ಇದೇ ಶನಿವಾರದಂದು ಬೆಂಗಳೂರಿನ ಬಸವೇಶ್ವರ ನಗರದಲ್ಲಿ ಗಾಯತ್ರಿ ಸಮೂಹದವರಿಂದ ತುಲಾಭಾರ ಮಾಡಿಸಿಕೊಂಡಿದ್ದಾರೆ. ಅದೇ ಸಂದರ್ಭದಲ್ಲಿ "ಯಾವುದೇ ವ್ಯಕ್ತಿ ಸಮಾಜದ ಋಣವನ್ನು ತೀರಿಸಿದಾಗ ಮಾತ್ರ ಆತನ ಬದುಕು ಸಾರ್ಥಕವಾಗುತ್ತದೆ. ಮಠಾಧೀಶರೂ ಇದಕ್ಕೆ ಹೊರತಲ್ಲ, ಮಠಾಧೀಶರು ಎಲ್ಲರಿಗಿಂತ ದೊಡ್ಡವಲ್ಲ" ಎಂದಿದ್ದಾರೆ.

ಪೇಜಾವರರೇ ಹೀಗೆ ಹೇಳುವಾಗ ನಮ್ಮ ಪೊಲೀಸರಿಗೆ ಕಾನೂನು ಪಾಲಿಸಲು ಯಾಕೆ ಹಿಂಜರಿಕೆ?!

ರಾಜಕೀಯವಲ್ಲಿ ಖಾಯಂ ಶತ್ರು ಅಥವಾ ಖಾಯಂ ...ಲ್ಲ ಅನ್ನೋ ಮಾತು ನಿಜ.... ನೂರಕ್ಕೆ ನೂರು

...ಕ್ಟೋರಿಯಾ ಆಸ್ಪತ್ರೇಲಿ ನರ್ಸ್ ಆಗಿದ್ದ ಹೊಸನಗರ ...ಕಿನ ಬ್ರಾಹ್ಮಣ ಮಹಿಳೆ ಜಯಲಕ್ಷ್ಮಿಯು ...ಳಿಯ ಬಿಜೆಪಿ ಶಾಸಕ ರೇಣುಕಾಚಾರ್ಯನ ... ಹಾಕಿರುವ ಸೆಕ್ಸ್ ಬಾಂಬ್ ಈಗಾಗಲೇ ಸ್ಫೋಟ ...ಈ ಸ್ಫೋಟದ ಪರಿಣಾಮಕ್ಕೆ ರೇಣುಕನ ಪ್ಯಾಂಟು ...ರಲಿ ಖಾಸಗಿ ಕಾಚಾನೂ ಕಳಚಿ ಬೀದಿಯಲ್ಲಿ ... ಆದರೂ ಇವನೆಂತಾ ಭಂಡನೆಂದರೆ ಅರ್ಜೆಂಟಾಗಿ ... ಶರ್ಟ್-ಪ್ಯಾಂಟ್ ತರಿಸಿ ಹಾಕಿಕೊಂಡು ಮತ್ತ ...ಮಾನಗೇಡಿ ಮೂತಿ ತೋರಿಸುತ್ತಾ ತಿರುಗುತ್ತಿದ್ದಾನೆ.

...ಮುಖ್ಯ ವಿಚಾರ ಇದಲ್ಲ. ಅಸಲಿಗೆ ಈ ಸೆಕ್ಸ್ ...ಬ ಬೀಳಬೇಕಿದ್ದದ್ದು ...ಮುಖ್ಯಮಂತ್ರಿ ...ಯೂರಪ್ಪನ ತಲೆ ... ಆದರೆ ಈಗ ...ದರೆ ಯಡ್ಡಿ ...ಪಾರು ತರಚು ... ಮಾಡಿಕೊಂಡು ...ವಾಗಿದ್ದಾರೆ. ...-ಶೋಭಾ ...ಡ್ಲಾಜೆಯ ಮಧ್ಯೆ ...ೆ ಇದೆ ಎಂಬ ...ರವನ್ನು ಈ ...ಟೆಯೊಳಗೆ ...ರುವುದು ಇದಕ್ಕೆ

...ಮುಖ್ಯ ವಿಚಾರ ...ದರೆ ಈ ನರ್ಸ್ ...ಲಕ್ಷ್ಮಿ ಎಂಬ ಸೆಕ್ಸ್ ...ಬ್ ರೆಡಿಯಾಗಿದ್ದು ...ನ್ನೂ ಅಲ್ಲ. ...ನಾಭನಗರದ ಮಹಾ ...ತ್ರಿಕ ದೇವೇಗೌಡರ ಮನೆಯಲ್ಲಿ!


...ಇರುವ ಕಡಿಮೆ ಬುದ್ಧಿಯನ್ನೇ ಅಪರೂಪಕ್ಕೆ ಖರ್ಚು ... ಈ ಐಡಿಯಾ ಕೊಟ್ಟದ್ದೇ ಸಚಿವ ಎಚ್.ಡಿ. ...ಣ್ಣ!!

...ಇದು "ಶಕ್ತಿಶಾಲಿ ಬಾಂಬು, ಯಡ್ಡಿ ತಲೆ ಮೇಲೆ ...ೋ ಹಾಗೆ ಎಸೀರಿ" ಎಂದು ಒಪ್ಪಿಗೆ ಕೊಟ್ಟದ್ದೇ ...ಖ್ಯಮಂತ್ರಿ ಕುಮಾರಸ್ವಾಮಿ!!!

ಈ ಕಾರ್ಯಾಚರಣೆ ಯಶಸ್ವಿಯಾಗುವಂತೆ ಬೆಂಗ...ು ಪೊಲೀಸರು, ಕೆಲ ಮೀಡಿಯಾಗಳು ಪ್ರಮುಖ ... ವಹಿಸಿರುವುದು ಇನ್ನೂ ಮಜಾ ವಿಚಾರ.


ರಾಜಕೀಯದಲ್ಲಿ ಖಾಯಂ ಶತ್ರು-ಮಿತ್ರರಿಲ್ಲ ಎಂಬ ...ು ಸ್ವಲ್ಪ ಪಕ್ಕಕ್ಕಿಟ್ಟು ನೋಡಿದರೆ ದೇವೇಗೌಡರ ...ಂಬಿಕೆ, ಹಾಸನದಲ್ಲಿ ಕಳೆದ 40 ವರ್ಷಗಳಿಂದ ... ಪರಮಾಪ್ತ ಭಂಟನಿದ್ದಾನೆ.

ಅವನು ಟಿ. ಮಲ್ಲೇಶಪ್ಪ, ಹಾಸನ ಜಿಲ್ಲೆಯಲ್ಲಿ ಗೌಡರ ಸಮಸ್ತ ವ್ಯವಹಾರ-ರಾಜಕೀಯ ವಿಚಾರಗಳೆಲ್ಲವನ್ನೂ ನೋಡಿಕೊಳ್ಳುವ ನಂಬಿಕಸ್ತ ವ್ಯಕ್ತಿ ಈತ. ಈತನಿಗೊಬ್ಬ ಟಿ.ಶಿವಕುಮಾರ್ ಎಂಬ ಖಾಸಾ ತಮ್ಮನಿದ್ದಾನೆ. ಈ ಶಿವಕುಮಾರ ಬೇರೆ ಯಾರೂ ಅಲ್ಲ, ನರ್ಸ್ ಜಯಲಕ್ಷ್ಮಿ ಒಡೆತನದ ಬೆಂಗಳೂರಿನ ಗ್ರೀನ್‌ಸಿಟಿ ನರ್ಸಿಂಗ್ ಕಾಲೇಜಿನ ಏಕೈಕ ಪಾಲುದಾರ. ಕೋಟ್ಯಾಧೀಶ, ಆಗರ್ಭ ಶ್ರೀಮಂತನೀತ.




ನೀವೇ ಒಮ್ಮೆ ಯೋಚಿಸಿ ನೋಡಿ, ನರ್ಸ್ ಜಯಲಕ್ಷ್ಮಿ ತನ್ನ ಕಂಪ್ಲೇಂಟಿನಲ್ಲಿ ಯಡ್ಡಿ ಹೆಸರನ್ನು ಪ್ರಸ್ತಾಪಿಸಿದ ಮಾತ್ರಕ್ಕೇ ಪೊಲೀಸರೇಕೆ ಅದನ್ನೇ ಇನ್ನಷ್ಟು ಕೆದಕಬೇಕಿತ್ತು. ಅದು ಈ ರಾಜ್ಯದ ಉಪಮುಖ್ಯಮಂತ್ರಿ, ಹಾಲಿ ಸಮ್ಮಿಶ್ರ ಸರ್ಕಾರದ ಪ್ರಭಾವಿ ಲೀಡರ್ ಆಗಿರುವಾಗಲೂ?


ರೇಣುಕಾಚಾರ್ಯ-ಜಯಲಕ್ಷ್ಮಿ ಹಗರಣ



ಯಡ್ಡಿಗೆ ಕುಮಾರನ ಫಿಟ್ಟಿಂಗ್!



ಈ ರೇಣುಕಾಚಾರ್ಯನಿಗೆ ಇದು ಗೊತ್ತಿರದಿದ್ದ ಸಂಗತಿ ಏನಲ್ಲ. ಆದರೆ ತನ್ನ ಎಂಟು ವರ್ಷಗಳ ಗೆಣೇಕಾರ್ತಿ ಜಯಲಕ್ಷ್ಮಿ ಹೀಗೆ ಗೌಡರ ಕುಟುಂಬದವರೊಂದಿಗೆ ಶಾಮೀಲಾಗಿ ತನ್ನನ್ನೇ 'ಸೂಯಿಸೈಡ್ ಬಾಂಬರ್' ಮಾಡಿ ಯಡ್ಡಿ ಮರ್ಯಾದೆ ಬೀದಿಗೆ ಬೀಳುವಂತೆ ಸೆಕ್ಸ್ ಬಾಂಬ್ ಸ್ಫೋಟಿಸುತ್ತಾರೆಂದು ಅವನು ಕನಸುಮನಸಿನಲ್ಲೂ ನಿರೀಕ್ಷಿಸಿರಲಿಲ್ಲ ಎಂದು ಕಾಣುತ್ತದೆ.



ಬಾಲಕ ರೇಣುಕಾ

ಆದರೆ ಅದೀಗ ಸ್ಫೋಟಿಸಿದೆ. ಯಡ್ಡಿ ಈಗ ಹೋದಲ್ಲಿ ಬಂದಲ್ಲಿ ಇದೊಂದು ರಾಜಕೀಯ ಪಿತೂರಿ, ನನಗಾಗದವರ ಸಂಚು ಎಂದು ಚೀರಿಕೊಳ್ಳುತ್ತಿದ್ದಾರೆ. ತಮಾಷೆ ಏನೆಂದರೆ ನರ್ಸ್ ಜಯಲಕ್ಷ್ಮಿ ಪೊಲೀಸರಿಗೆ ಕೊಟ್ಟಿರುವ ಕಂಪ್ಲೆಂಟ್‌ನಲ್ಲಿ ಹಾಗೂ ಪತ್ರಿಕಾ ಗೋಷ್ಠಿಗಳಲ್ಲಿ ಯಡಿಯೂರಪ್ಪ ಹಾಗೂ ಶಾಸಕಿ ಶೋಭಾ ಕರಂದ್ಲಾಜೆ ನಡುವಿನ ಗಳಸ್ಯ ಕಂಠಸ್ಯದ ಬಗ್ಗೆ ಹೇಳುತ್ತಾಳೆ. ಅದಕ್ಕೆ ತಕ್ಕಂತೆ ಚಂದ್ರಾ ಲೇಔಟ್ ಪೊಲೀಸರು ಜಯಲಕ್ಷ್ಮಿಗೊಂದು ಪತ್ರ ಬರೆದು 'ಯಡಿಯೂರಪ್ಪನವರ ಬಗ್ಗೆ ನೀವು ಹೇಳಬೇಕೆಂದಿರುವುದನ್ನೂ ಲಿಖಿತವಾಗಿ ಕೊಡಿ' ಎನ್ನುತ್ತಾರೆ.

ಅಂದರೆ ನೇರವಾಗಿ ಸಂಬಂಧಿಸಿರದ ವಿಚಾರವಾದರೂ ಸಹ ಯಡ್ಡಿಯನ್ನು ಹೇಗಾದರೂ ಮಾಡಿ ಈ ಸೆಕ್ಸ್ ಹಗರಣದೊಳಗೆ ಬೀಳಿಸಬೇಕೆಂಬ ಇರಾದೆ ಯಾರಿಗೋ ಇತ್ತು ಎಂದರ್ಥ ತಾನೆ. ಹೀಗೆ ಪೊಲೀಸರನ್ನೂ ಗೌಡರ ಕುಟುಂಬ ರಾಜಕೀಯ ದುರುದ್ದೇಶಕ್ಕೆ ಬಳಸುವುದನ್ನೂ ನೋಡಿ ಅಸಹ್ಯ ಪಟ್ಟುಕೊಂಡೇ ಗೃಹಮಂತ್ರಿ ಎಂ.ಪಿ. ಪ್ರಕಾಶ್ ರಾಜಕೀಯ ತ್ಯಜಿಸುವ ಮಾತಾಡಿದ್ದಾರೆ ಎನ್ನಲಾಗಿದೆ.

ಮಾಸ್ಟರ್ ಪ್ಲಾನ್

2007ರ ಏಪ್ರಿಲ್ 12ರಂದು ಈ ಜಯಲಕ್ಷ್ಮಿ ಚಂದ್ರಾಲೇಔಟ್ ಪೊಲೀಸರಿಗೆ ಒಂದು ಲಿಖಿತ ದೂರನ್ನು ನೀಡುತ್ತಾಳೆ. ನೀಟಾಗಿ ಕಂಪ್ಯೂಟರ್‌ನಲ್ಲಿ ಟೈಪಿಸಲ್ಪಟ್ಟಿದ್ದ ಆ ದೂರಿನಲ್ಲಿ ಹೊನ್ನಾಳಿ ಶಾಸಕ ರೇಣುಕಾಚಾರ್ಯ ತನ್ನನ್ನು ಮದುವೆಯಾಗುವಂತೆ ಪೀಡಿಸುತ್ತಿದ್ದಾನೆಂತಲೂ ತನಗೆ ಗ್ರೀನ್‌ಸಿಟಿ ನರ್ಸಿಂಗ್ ಸ್ಕೂಲಿನ ಆಡಳಿತ ಮಂಡಳಿ ನಿರ್ದೇಶಕನ ಸ್ಥಾನ ದೊರಕಿಸಿಕೊಡಬೇಕೆಂದು ರಿವಾಲ್ವರ್ ತೋರಿಸಿ ಬೆದರಿಸಿದನೆಂತಲೂ ಸಾರಾಂಶವಿದ್ದ ದೂರು ಅದು. ಅದೇ ದೂರಿನಲ್ಲಿ ತಾನು ಈ ಬಗ್ಗೆ ರೇಣುಕಾಚಾರ್ಯನ ಆಪ್ತರಾಗಿದ್ದ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಹತ್ತಿರವೂ ಈ ವಿಚಾರ ಚರ್ಚಿಸಿದ್ದೇನೆಂತಲೂ ಜಯಲಕ್ಷ್ಮಿ ಸೇರಿಸುತ್ತಾಳೆ.

ಬಿಳಿದಾಳೆ ಈಶ

ಮಿಂಚಿನ ವೇಗದಲ್ಲಿ ಪ್ರತಿಕ್ರಿಯಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಓಂಕಾರಯ್ಯ ಏಪ್ರಿಲ್ 16ನೇ ತಾರೀಖು ಜಯಲಕ್ಷ್ಮಿಗೊಂದು ಪತ್ರ ಬರೆದು (ಪೊಲೀಸ್ ನೋಟೀಸ್) ದೂರಿಗೆ ಸಂಬಂಧಿಸಿದಂತೆ ಒಟ್ಟು 20 ಪ್ರಶ್ನೆ ಕಳಿಸಿ ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ, ಸಾಕ್ಷಿ ನೀಡುವಂತೆ ಕೇಳುತ್ತಾರೆ. ಅದರಲ್ಲಿ ಕೆಲ ಪ್ರಶ್ನೆಗಳು ಯಡಿಯೂರಪ್ಪನವರಿಗೂ ಈ ಸೆಕ್ಸ್ ಹಗರಣಕ್ಕೂ ಇರುವ ಸಂಬಂಧವೇನು ವಿವರಿಸಿ ಎಂಬರ್ಥದ ಪ್ರಶ್ನೆಗಳಾಗಿದ್ದವು! (ಪ್ರಶ್ನೆ ಸಂಖ್ಯೆ 11 ಹಾಗೂ 14).


ಇದು ಯಡ್ಡಿಯನ್ನು ಈ ಕೇಸಿನೊಳಗೆ ತರುವ ಸ್ಪಷ್ಟ ದುರುದ್ದೇಶವಾಗಿತ್ತು. ಇದನ್ನೇ ಕಾಯುತ್ತಿದ್ದವಳಂತೆ ಜಯಲಕ್ಷ್ಮೀ ದೊಡ್ಡ ಗಂಟಲಲ್ಲಿ "ಯಡಿಯೂರಪ್ಪನವರು ಶಾಸಕಿ ಶೋಭಾ ಕರಂದ್ಲಾಜೆನ ಎರಡನೇ ಮದುವೆ ಆಗಿಲ್ಲವೇ, ಅದೇ ತರ ನಾವೂ ಆಗೋಣ. ಯಡ್ಡಿನೂ ನಮಗೇ ಸಪೋರ್ಟ್ ಮಾಡುತ್ತಾರೆ ಅಂತಾ ರೇಣುಕಾಚಾರ್ಯ ಹೇಳಿದ್ದ" ಎಂದು ಲಿಖಿತ ಹಾಗೂ ಮೌಖಿಕ ಹೇಳಿಕೆ ನೀಡಿಬಿಟ್ಟಳು.

ಇದರ ಪರಿಣಾಮ ಏನೆಂದು ಮಾರನೇ ದಿನವೇ ಗೊತ್ತಾಗಿ ಹೋಯಿತು. ವಿಜಯಕರ್ನಾಟಕವು (ಯಡ್ಡಿ ವಿರೋಧಿ ಅನಂತಕುಮಾರ ಬಣದ ಕರಪತ್ರ) ಯಡ್ಡಿ-ಶೋಭಾ ಬಗ್ಗೆ ಪ್ರತ್ಯೇಕ ದೊಡ್ಡ ಸುದ್ದಿ ಪ್ರಕಟಿಸಿ

(ಮುಂದಿನ ಪುಟಕ್ಕೆ)


ಜಯಲಕ್ಷ್ಮಿ ಪಾರ್ಟನರ್ ಶಿವಕುಮಾರನೂ... ಅವನ ಗಾಡ್‌ಫಾದರ್ ದೇವೇಗೌಡರೂ....

ಜಯಲಕ್ಷ್ಮೀಯ ನರ್ಸಿಂಗ್ ಕಾಲೇಜಿನ ಪಾರ್ಟನರ್ ಟಿ. ಶಿವಕುಮಾರ್ ...ಲತಃ ಹಾಸನದವನು. ಈತನ ಖಾಸಾ ಅಣ್ಣ ಟಿ. ಮಲ್ಲೇಶಪ್ಪ ಇವತ್ತು ...ಸನದ ಭಾರಿ ಕುಳ. ಮುಖ್ಯವಾಗಿ ದೇವೇಗೌಡರ ಬಲಗೈ ಬಂಟ. ಬಹಳ ...ದೆ ಗೌಡರು ರಾಜಕೀಯದ ಒಂದನೇ ಕ್ಲಾಸಿಗೆ ಸೇರಿ ಹರದನಹಳ್ಳಿಯಿಂದ ...ಳೆನರಸೀಪುರಕ್ಕೆ ಬರುತ್ತಿದ್ದಾಗಲೇ ಅವರ ಖರ್ಚು-ವೆಚ್ಚ ನೋಡಿಕೊಳ್ಳುತ್ತಿದ್ದ ...ತ. ಆಮೇಲೆ ಗೌಡರ ದೆಸೆ ಕುದುರಿದಂತೆ ಮಲ್ಲೇಶಪ್ಪ ಶಿವಕುಮಾರ್ ಸಹ ...ಡಗಾಗುತ್ತಾ ಬಂದರು. ಈಡಿಗ ಜನಾಂಗದ ಇವರು ಒಮ್ಮೆ ಹೊಳೆನರಸೀಪುರದಲ್ಲಿ ...ಡಿಗ ಭವನ' ಕಟ್ಟಿಸಲು ಹೊರಟು ಸರ್ಕಾರಿ ಜಾಗ, ಎಂಪಿ ಫಂಡು, ಗೌರ್ನಮೆಂಟ್ ...ಟು ಎಲ್ಲಾ ಗಿಟ್ಟಿಸಿ ಭಾರಿ ಕಟ್ಟಡವೆಬ್ಬಿಸಿದ್ದರು. ಎಲ್ಲಾ ಕೆಲಸ ಮುಗಿದ ಮೇಲೆ ...ತ್ತಮ್ಮ-ತಮ್ಮೇಗೌಡ ಕಲ್ಯಾಣ ಮಂಟಪ' (ತಂದೆ-ತಾಯಿ ಹೆಸರು) ಅಂತಾ ...ೀರ್ಡು ಬರೆಸಿ ಈಗ ತಮ್ಮ ಖಾಸಗಿ ಆಸ್ತಿ ಮಾಡಿಕೊಂಡಿದ್ದಾರೆ. ಟಿ. ಮಲ್ಲೇಶಪ್ಪ ಹಾಸನದ ಬಹಳ ದೊಡ್ಡ ಅರಾಕ್ ಕಂಟ್ರಾಕ್ಟರ್. ಟಿ. ಶಿವಕುಮಾರ್‌ಗೆ ಆರೆಂಟು ಪೆಟ್ರೋಲ್ ಬಂಕ್‌ಗಳಿವೆ. ಬೆಂಗಳೂರಿನಲ್ಲೇ ಮೂರ್ನಾಲ್ಕು ಮನೆಗಳಿವೆ. ಜೊತೆಗೆ ಈಗ ಜಯಲಕ್ಷ್ಮಿ ಪಾಲುದಾರಿಕೆಯಲ್ಲಿ ಎರಡು ನರ್ಸಿಂಗ್ ಕಾಲೇಜುಗಳಿವೆ.



ಮಲ್ಲೇಶಪ್ಪ

ಚುನಾವಣೆ ಬಂದರೆ ಗೌಡ ಫ್ಯಾಮಿಲಿಯ ಯಾರ್ಯಾರೇ ಅಭ್ಯರ್ಥಿಯಾದರೂ ಖರ್ಚು, ವೆಚ್ಚ ಸಾರಾಯಿ ಸರಬರಾಜು, ಪ್ರಚಾರ ಪ್ರತಿಯೊಂದನ್ನು ನಿಭಾಯಿಸುವವರೆ ಈ 'ಟಿ' ಬ್ರದರ್ಸ್. ಹಾಸನದಲ್ಲಿ TSK ಎಂದೇ ಪಾಪ್ಯುಲರ್ ಆಗಿರುವ ಟಿ. ಶಿವಕುಮಾರ ದೇವೇಗೌಡರ ಬಲಗೈ ಬಂಟ ಎಂಬುದೂ ಗೊತ್ತಾಗದೆ ಈ ರೇಣುಕಾಚಾರ್ಯ ಶಿವಕುಮಾರನ ವಿರುದ್ಧ ಶಿವಕುಮಾರನ ಶಿಷ್ಯೆ ಜಯಲಕ್ಷ್ಮಿಯನ್ನೇ ಎತ್ತಿಕಟ್ಟಲು ಹೋಗಿ ಈಗ ಚೆಡ್ಡಿ ಉದುರಿ ಹೋಗುವಂತೆ ಏಟು ತಿಂದು ಬಿದ್ದಿದ್ದಾನೆ.



ಶಿವಕುಮಾರ್

ಶಿವಕುಮಾರನನ್ನು ಗ್ರೀನ್‌ಸಿಟಿ ಕಾಲೇಜಿನ ಮಾಲೀಕತ್ವದಿಂದಾಚೆ ತಳ್ಳಲು ರೇಣುಕ ಒಂದು ಪ್ಲಾನ್ ರೂಪಿಸಿದ್ದ. ಮೊದಲು ರೇಣುಕನನ್ನು ಆಡಳಿತ ಮಂಡಳಿಗೆ ಒಬ್ಬ ನಿರ್ದೇಶಕನನ್ನಾಗಿ ತೆಗೆದುಕೊಳ್ಳಬೇಕು. ಆಮೇಲೆ ಕಾರ್ಯದರ್ಶಿ ಜಯಲಕ್ಷ್ಮಿ ನಿರ್ದೇಶಕ ಮಂಡಳಿ ಸಭೆ ನಡೆಸುವ ನೋಟೀಸ್ ಸಿದ್ಧಪಡಿಸಿ ಆದರೆ ಅದು ಶಿವಕುಮಾರನಿಗೆ ತಲುಪದಂತೆ ನೋಡಿಕೊಂಡು ಕೊನೆಗೆ 'ಸತತ ಗೈರು ಹಾಜರು' ಎಂಬ ನೆಪ ನೀಡಿ ಶಿವಕುಮಾರನ್ನ ಕಿತ್ತು ಹಾಕಬೇಕು....

ಇದು ರೇಣುಕಾ ಜಯಲಕ್ಷ್ಮಿಗೆ ಹೇಳಿಕೊಟ್ಟಿದ್ದ ಪ್ಲಾನ್. ವಾಸ್ತವವಾಗಿ ಶಿವಮೊಗ್ಗದ ಬಾಪೂಜಿ ಆಯುರ್ವೇದಿಕ್ ಕಾಲೇಜು ಈ ರೇಣುಕನ ವಶಕ್ಕೆ ಬಂದಿದ್ದೂ ಇಂತದ್ದೇ ಪಿತೂರಿಯಿಂದ ಪಟೇಲರು ಮುಖ್ಯಮಂತ್ರಿಯಾಗಿದ್ದಾಗ. ತಮ್ಮ ಅಣ್ಣ ಎಸ್.ಎಸ್. ಪಟೇಲರ ಮಗನಿಗೆ ಈ ಕಾಲೇಜು ಮಂಜೂರು ಮಾಡಿಸಿದ್ದರು. ಆಗ ಅದೇ ಪ್ರಾಂತ್ಯದ ಲಿಂಗಾಯತ ಯುವ ಲೀಡರ್ ಆಗಿದ್ದ ರೇಣುಕಾಚಾರ್ಯನನ್ನು ಕಾಲೇಜಿನ ಆಡಳಿತ ಮಂಡಳಿ ಸದಸ್ಯನನ್ನಾಗಿ ತೆಗೆದುಕೊಳ್ಳಲಾಗಿತ್ತು. ಈ ರೇಣುಕ ಅದೇ ಅವಕಾಶ ಬಳಸಿ ಪಿತೂರಿ ಮಾಡಿ ಪಟೇಲರ ಕುಟುಂಬದವರನ್ನೇ ಆಚೆ ನೂಕಿ ಈಗ ಇಡೀ ಕಾಲೇಜನ್ನೇ ನುಂಗಿದ್ದಾನೆ. ಅದೇ ಪ್ಲಾನ್ ಅನ್ನು ಗ್ರೀನ್ ಸಿಟಿ ನರ್ಸಿಂಗ್ ಕಾಲೇಜಲ್ಲೂ ಬಳಸಲು ಹೋಗಿ ಏಟು ತಿಂದಿದ್ದಾನೆ.

(ಹಿಂದಿನ ಪುಟದಿಂದ)

ಬುಕ್ ಹುಟ್ಟುಕೊಂಡಿತು. ಉಳಿದ ದಿನ-ವಾರ ಪತ್ರಿಕೆಗಳಿಗೂ ಇದು ಅಂದಿನ ಆಹಾರವಾಗಿತ್ತು.

ಈ ಹಠಾತ್ ಬೆಳವಣಿಗೆಗಳ ಹಿಂದೆ ಇದ್ದದ್ದೇ ಗೌಡಾ ಕುಟುಂಬದ ಮಾಸ್ಟರ್ ಪ್ಲಾನ್.

ಈ ರೇಣುಕಾಚಾರ್ಯ ಜಯಲಕ್ಷ್ಮಿಗೆ ಮದುವೆ ಆಗೋಣ, ನನ್ನನ್ನು ಕಾಲೇಜು ನಿರ್ದೇಶಕ ಮಾಡು ಎಂದು ಒತ್ತಾಯಿಸಲು ಶುರು ಮಾಡಿದಾಗಲೇ ಜಯಲಕ್ಷ್ಮಿಗೆ ಕಿರಿಕಿರಿಯಾಗಿತ್ತು. ಆಕೆ ಇವೆರಡು ವಿಚಾರವನ್ನೂ ಮೊದಲು ದಾಟಿಸಿದ್ದೇ ತನ್ನ ಬ್ಯುಸಿನೆಸ್ ಪಾರ್ಟನರ್ ಟಿ. ಶಿವಕುಮಾರ್‌ಗೆ. ಇವರಿಬ್ಬರ ನಡುವಿನ ವಿಶ್ವಾಸ ಈ ಮಟ್ಟದ್ದು. ಇದು ಗೊತ್ತಿರದಿದ್ದ ಬಾಲಕ ರೇಣುಕನು ಜಯಲಕ್ಷ್ಮೀ ಹತ್ತಿರ "ನಾವಿಬ್ಬರೂ ಸೇರಿಕೊಂಡು ಈ ಶಿವಕುಮಾರನ್ನು ಓಡಿಸಿ ಇದೇ ಕಾಲೇಜಿಗೆ ನಾವೇ ಮಾಲೀಕರಾಗೋಣ. ಬೇಕಾದಷ್ಟು ದುಡ್ಡೂ ಬರುತ್ತೆ, ನಾವಿಬ್ಬರೂ ಮದುವೆ (2 ನೇದು) ಮಾಡಿಕೊಂಡು ಹಾಯಾಗಿರಬಹುದು" ಎಂದು ಹಿತೋರಿಯೊಂದನ್ನು ಹೇಳಿಕೊಟ್ಟಿದ್ದಾನೆ. ಜಯಲಕ್ಷ್ಮಿ ಬಹಳ ನಿಯತ್ತಿನಿಂದ ಇದನ್ನು ಶಿವಕುಮಾರ್ ಕಿವಿಗಾಕಿದ್ದಾಳೆ.

ಗೌಡರ ಶಿಷ್ಯ ಶಿವಕುಮಾರ್‌ಗೆ ಸಿಟ್ಟು ಏರಿಬಂದಿದ್ದೇ ಆವಾಗ. ಇವೆಲ್ಲಾ ನಡೆದದ್ದು ಈಗ್ಗೆ ಆರು ತಿಂಗಳ ಹಿಂದೆ. ಜಯಲಕ್ಷ್ಮಿ-ಶಿವಕುಮಾರ್ ಈ ಗ್ರೀನ್‌ಸಿಟಿ ನರ್ಸಿಂಗ್ ಕಾಲೇಜ್ ಖರೀದಿಸಿ ಇಲ್ಲಿಗೆ ಒಂದು ವರ್ಷ ಆಗಿದೆ ಅಷ್ಟೆ. ಈ ಗ್ರೀನ್‌ಸಿಟಿ ಕಾಲೇಜು ಬಸವನಗುಡಿಯ ಬುಲ್‌ಟೆಂಪಲ್ ರೋಡಿನಲ್ಲಿರುವ ಶೇಖರ್ ಆಸ್ಪತ್ರೆಯ ಮಾಲೀಕ ಐತಾಳರದ್ದು. ನಾವು ಮಲ್ಲಿಗೆ ನರ್ಸಿಂಗ್ ಹೋಂನಲ್ಲಿದ್ದ ಜಯಲಕ್ಷ್ಮೀನಾ ಮಾತಾಡಿಸುತ್ತಾ "ಈ ನರ್ಸಿಂಗ್ ಕಾಲೇಜ್ ಖರೀದಿಸಲು ಎಷ್ಟು ಲಕ್ಷ ರೂಪಾಯಿ ಕೊಟ್ಟಿರಿ. ನಿಮಗೆ ಅಷ್ಟು ದುಡ್ಡು ಎಲ್ಲಿಂದ ಹೇಗೆ ಬಂತು?" ಅಂತಾ ಕೇಳಿದೆವು.

"ಅದೆಲ್ಲಾ ಪರ್ಸನಲ್ ವಿಚಾರ ಬಿಡಿ" ಎಂದು ಮಾತು ತೇಲಿಸಿಬಿಟ್ಟಳು ಈ ಸುಂದರಿ. ಅದು ಬಿಡಿ ಯಾವಾಗ ರೇಣುಕಾಚಾರ್ಯ ನರ್ಸಿಂಗ್ ಕಾಲೇಜ್ ಸ್ವಾಹ ಮಾಡಲು ಶಿವಕುಮಾರನನ್ನೇ ಆಚೆ ಓಡಿಸುವ ಪ್ರಸ್ತಾಪ ಮಾಡಿದನೋ, ಜಯಲಕ್ಷ್ಮಿ ಅದನ್ನೇ ಶಿವಕುಮಾರನಿಗೆ ಹೇಳಿಬಿಟ್ಟಳು. ಅದನ್ನು ಕೇಳಿ ರೇಗಿ ಹೋದ ಶಿವಕುಮಾರ್ ಜನ ಬಿಟ್ಟು ರೇಣುಕನ ಬಗ್ಗೆ ಖಾಸಗಿ ತನಿಖೆ ಮಾಡಿಸಿದ್ದಾನೆ. ಆಗ ಗೊತ್ತಾಗಿದ್ದೇನೆಂದರೆ ಈ ರೇಣುಕ ಬಾಲಕನೇನಲ್ಲ, ಜೆ.ಎಚ್. ಪಟೇಲರ ಅಣ್ಣನ ಮಗನಿಗೆ ಮಂಜೂರಾಗಿದ್ದ ಶಿವಮೊಗ್ಗದ ಬಾಪೂಜಿ ಆಯುರ್ವೇದಿಕ್ ಕಾಲೇಜನ್ನು ನುಂಗಿದ್ದನೆಂಬ ಸಂಗತಿ ಶಿವಕುಮಾರ್‌ಗೆ ಗೊತ್ತಾಗಿದೆ.

ಜೊತೆಗೆ ಅವನ ಪಾರ್ಟನರ್ ಜಯಲಕ್ಷ್ಮಿಗೂ ಕಿರುಕುಳ ಕೊಡುತ್ತಿದ್ದ ರೇಣುಕನಿಗೆ ತಕ್ಕ ಪಾಠ ಕಲಿಸಬೇಕೆಂದು ಇವರೆಲ್ಲಾ ಮಾತಾಡಿಕೊಂಡಿದ್ದಾರೆ. ಅಷ್ಟರಲ್ಲಿ ಈ ಜಯಲಕ್ಷ್ಮಿ ಯಡ್ಡಿಯನ್ನೊಮ್ಮೆ ಖಾಸಗಿಯಾಗಿ ಕಂಡು ರೇಣುಕನ ವಿಚಾರಗಳನ್ನೆಲ್ಲಾ ತಿಳಿಸಿ ಬಂದಿದ್ದಳು. ಆಗಲೇ ಯಡ್ಡಿ-ಶೋಭಾರ ವಿಚಾರ ರೇಣುಕನೇ ತನಗೆ ಹೇಳಿದ್ದಾನೆಂಬುದನ್ನು ತಿಳಿಸಿಬಂದಿದ್ದಳು. 'ಆಯ್ತು ವಿಚಾರಿಸ್ತೀನಿ, ನೀನು ನನ್ನ ಮಗಳಿದ್ದ ಹಾಗೆ, ರೇಣುಕನ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಡಬೇಡ, ಸ್ವಲ್ಪ ದಿನ ಕಾಯಮ್ಮಾ ನಾನೆಲ್ಲಾ ಸರಿ ಮಾಡ್ತೀನಿ' ಎಂದು ಸಮಾಧಾನ ಮಾಡಿ ಕಳಿಸಿದ ಯಡ್ಡಿ ಪುನಃ 'ಶೋಭಾ ಯಾತ್ರೆ-ವಿಕಾಸ ಯಾತ್ರೆ'ಯಲ್ಲಿ ಮುಳುಗಿಹೋದರೇ ಏನೂ ಪರಿಹಾರ ಕೊಡಿಸಲಿಲ್ಲ.

ಇತ್ತ ಗೌಡರ ಕುಟುಂಬದವರಿಗೆ ಇವೆಲ್ಲಾ ಮಾಹಿತಿ ಅಪ್‌ಡೇಟ್ ಆಗುತ್ತಿತ್ತು, ಯಡ್ಡಿಗೆ ಇಕ್ಕಟ್ಟು ಆಗುವಂತೆ ಈ ಸೆಕ್ಸ್ ಬಾಂಬ್ ಅನ್ನು ಸ್ಫೋಟಿಸುವ ಸಂಚೂ ರೂಪು ತಳೆಯಿತು. ಎಲ್ಲಾ ರಿಹರ್ಸಲ್ ಮುಗಿದ ಮೇಲೆ ಜಯಲಕ್ಷ್ಮಿ ಮೊದಲು ದಾವಣಗೆರೆಗೆ ಹೋಗಿ ರೇಣುಕನ ಮೇಲೆ ಲೈಂಗಿಕ ಕಿರುಕುಳ ಹಾಗೂ ಕೊಲೆ ಬೆದರಿಕೆಯ ಆರೋಪ ಮಾಡಿ ಪ್ರೆಸ್‌ಮೀಟ್ ಮಾಡಿ ಬಂದಳು. ಹಾಗೆ ನೇರ ಬೆಂಗಳೂರಿಗೆ ಬಂದವಳೇ ಚಂದ್ರಾ ಲೇಔಟ್ ಪೊಲೀಸರಿಗೆ ರೇಣುಕನ ವಿರುದ್ಧ ಕಂಪ್ಲೇಂಟ್ ಕೊಟ್ಟಳು. ಆ ಕಂಪ್ಲೇಟನಲ್ಲಿ ಯಡ್ಡಿಯ ಹೆಸರನ್ನು ಮರೆಯದೆ ಕಾಣಿಸಿದಳು. ಪೊಲೀಸರು ಇದನ್ನೇ ಕಾದಿದ್ದವರಂತೆ "ಇದಕ್ಕೂ ಯಡಿಯೂರಪ್ಪನವರಿಗೂ ಇರುವ ಲಿಂಕ್ ಏನೂಂತ ವಿವರಿಸಿ" ಅಂತಾ ವಿನಂತಿ ಮಾಡಿದರು. ಜಯಲಕ್ಷ್ಮಿ 'ಯಡ್ಡಿ-ಶೋಭಾ ಡುಂಡುಂ' ಎಂಬರ್ಥದ ವಿವರಣೆಯನ್ನು ಕೊಟ್ಟಳು.

ಇದೆಲ್ಲಾ ಹೊರಬಿದ್ದ ಮೇಲೆ ಯಡ್ಡಿ ಮುಖದಲ್ಲೀಗ ಗಾಬರಿ ಕಂಡರೆ ಗೌಡ ಮತ್ತವರ ಬಳಗದಲ್ಲಿ ಕುಹಕರ ನಗೆ ಕಾಣುತ್ತಿದೆ.

ಬಿಜೆಪಿ ಬಾಲಕ ರೇಣುಕನನ್ನು ಜಯಲಕ್ಷ್ಮಿ ಮೂಲಕ ಟ್ರಾಪ್ ಮಾಡಿಕೊಂಡು, ಅವನಿಗರಿವಿಲ್ಲದೆ ಅವನನ್ನೇ ಸೂಯಿಸೈಡ್ ಬಾಂಬರ್ ಆಗಿಸಿ ಯಡ್ಡಿ ತಲೆ ಮೇಲೆ

"ಹೊನ್ನಾಳಿ ಐ.ಬಿ. ವಿಚಾರಾನೂ ಹೇಳಿದ್ನಾ....!"


ಶೋಭಾ ಕರಂದ್ಲಾಜೆ

ಈ ಯಡಿಯೂರಪ್ಪ ಎಂತಾ ಯಡವಟ್ಟು ಗಿರಾಕಿ ಅನ್ನಲು ಈ ಘಟನೆ ಹೇಳಬೇಕಿದೆ.

ರೇಣುಕನ ಕಿರುಕುಳಗಳ ಬಗ್ಗೆ ಅಲವತ್ತುಕೊಳ್ಳಲು ಜಯಲಕ್ಷ್ಮಿ ಒಂದು ದಿನ ಯಡ್ಡಿಯ ಮನೆಗೆ ಹೋಗುತ್ತಾಳೆ. ಅಲ್ಲಿ ಯಡ್ಡಿ ಅವರ ಆಪ್ತ ಸ್ವಾಮಿ ಹಾಗೂ ಜಯಲಕ್ಷ್ಮಿ ಈ ಮೂವರೇ ಇದ್ದಾಗ ಸ್ವಲ್ಪ ಮುಕ್ತ ಮಾತುಕತೆ ನಡೆಯುತ್ತದೆ.

ಮಾತಿನ ಮಧ್ಯೆ ಈ ಜಯಲಕ್ಷ್ಮಿ "ಸಾರ್ ನೀವೂನು ಶೋಭಾ ಕರಂದ್ಲಾಜೆ ಎರಡನೇ ಮದುವೆ ಆಗಿದ್ದೀರಿ, ನಿಮ್ ಮೊದಲ್ನೆ ಹೆಂಡತಿದು ಆಕಸ್ಮಿಕ ಸಾವಲ್ಲ ಆತ್ಮಹತ್ಯೆ... ಅಂತಾ ರೇಣುಕಾಚಾರ್ಯ ನನಗೆ ಹೇಳಿದ" ಎಂದು ಒಂದೇ ಉಸಿರಿಗೆ ಬಡಬಡಿಸಿದ್ದಾಳೆ. ಅಷ್ಟಕ್ಕೆ ಗಾಬರಿಯಾದ ಯಡ್ಡಿ "ಇನ್ನೇನು ಹೇಳಿದ್ದಾನೆ, ಹೇಳು" ಎಂದಾಗ ಈ ನರ್ಸ್ "ಅದೇ ನೀವೊಂದು ಸಾರಿ ಹೊನ್ನಾಳಿ ಐಬಿಲಿ.... ಜೊತೆ ಉಳಿದುಕೊಂಡಿದ್ರಂತಲ್ಲ, ಅದನ್ನು ಹೇಳಿದ" ಅಂದಿದ್ದಾಳೆ. ಯಡ್ಡಿಗೆ ಮೊದಲೇ ಮುಂಗೋಪ ತಕ್ಷಣ ಕೆಂಡಾಮಂಡಲವಾಗಿ "ಇದನ್ನೆಲ್ಲಾ ಬೊಗಳಿದಾನೋ ಅವ್ನು" ಎಂದೆಲ್ಲಾ ಕೂಗಾಡಿಬಿಟ್ಟದ್ದಾರೆ.

"ಅದು ಸರಿ, ಯಡ್ಡಿ ಹೊನ್ನಾಳಿ ಐಬಿಲಿ ಯಾರ ಜೊತೆ ಉಳಿದುಕೊಂಡಿದ್ರು?" ಅಂತಾ ಲಂಕೇಶ್ ಕೇಳಿದಾಗ ಜಯಲಕ್ಷ್ಮಿ ಆ ಹೆಸರು ಹೇಳಿದಳು. ಅದೇನು ಹೊಸ ಹೆಸರಲ್ಲ ಬಿಡಿ.

11] ಆ ದಿನ ನಿಮ್ಮಿಬ್ಬರ ನಡುವೆ ನಡೆದ ವಾಗ್ವಾದದಲ್ಲ ರೇಣುಕಾಚಾರ್ಯರವರು ಉಪಮುಖ್ಯಮಂತ್ರಿ ಶ್ರೀ.ಯಡಿಯೂರಪ್ಪರವರ ಹೆಸರನ್ನು ಬಳಸಲು ಕಾರಣಗಳೇನು?


14] ತಮ್ಮ ದೂರಿನಲ್ಲ ಉಪಮುಖ್ಯಮಂತ್ರಿ ಶ್ರೀ.ಬಿ.ಎಸ್.ಯಡಿಯೂರಪ್ಪ ಮತ್ತು ಬಿ.ಜೆ.ಪಿ. ರಾಜ್ಯಾಧ್ಯಕ್ಷ ಶ್ರೀ.ಸದಾನಂದಗೌಡರ ಗಮನಕ್ಕೆ ತಂದಿರುವುದಾಗಿ ಹೇಳದ್ದು, ಈ ಬಗ್ಗೆ ನೀವು ಅವರಿಗೆ ಲಖಿತವಾಗಿ ದೂರು ಸಲ್ಲಸಿರುತ್ತೀರಾ? ಅಥವಾ ಮೌಖಿಕವಾಗಿ ತಿಳಸಿರುತ್ತೀರಾ? ಅದಕ್ಕೆ ಅವರ ಪ್ರತಿಕ್ರಿಯೆಗಳೇನು? ಎಂಬುದರ ಬಗ್ಗೆ ವಿವರಗಳು.

ಯಡ್ಡಿ ಬಗ್ಗೆ ಪೊಲೀಸರು ಕೇಳಿದ ಪ್ರಶ್ನೆಗಳು

11) [illegible]

12) [illegible]

14) [illegible] – 12[illegible]



ಈ ಸೆಕ್ಸ್ ಬಾಂಬ್ ಹಾಕಿಸಿದ್ದಿದೆಯಲ್ಲ.... ಈ ಗೌಡ ಮತ್ತವರ ಮಕ್ಕಳನ್ನು ದದ್ದರೆಂದು ಕೊಳ್ಳುವವರಿಗೆ ಬುದ್ಧಿ ಇಲ್ಲ ಅಷ್ಟೇ.

ನೀವೇ ಒಮ್ಮೆ ಯೋಚಿಸಿ ನೋಡಿ, ನರ್ಸ್ ಜಯಲಕ್ಷ್ಮಿ ತನ್ನ ಕಂಪ್ಲೇಂಟಿನಲ್ಲಿ ಯಡ್ಡಿ ಹೆಸರನ್ನು ಪ್ರಸ್ತಾಪಿಸಿದ ಮಾತ್ರಕ್ಕೇ ಪೊಲೀಸರೇಕೆ ಅದನ್ನೇ ಇನ್ನಷ್ಟು ಕೆದಕಬೇಕಿತ್ತು, ಅದು ಈ ರಾಜ್ಯದ ಉಪಮುಖ್ಯಮಂತ್ರಿ, ಹಾಲಿ ಸಮ್ಮಿಶ್ರ ಸರ್ಕಾರದ ಪ್ರಭಾವಿ ಲೀಡರ್ ಆಗಿರುವಾಗಲೂ? ಒಬ್ಬ ಯಕಶ್ಚಿತ್ ಪೂಜಾರಿ ಪೇಜಾವರನ ಮೇಲೆ ಹಲ್ಲೆ ದೂರು ಕೊಟ್ಟರೆ ಒಪ್ಪದ ಪೊಲೀಸರು, ಇನ್ನಿ ನಾಣಿ ರಾಷ್ಟ್ರಗೀತೆಗೆ ಅವಮಾನಿಸಿದ ಎಂದು ಮಾಜಿ ಸಚಿವ ನಂಜೇಗೌಡರೇ ಕಂಪ್ಲೇಂಟ್ ಕೊಟ್ಟರೂ ದಾಖಲಿಸಿಕೊಳ್ಳಲು ಹಿಂಜರಿಯುವ ಪೊಲೀಸರನ್ನು ನಾವು ನೋಡುತ್ತಿದ್ದೇವೆ. ಹೀಗಿರುವಾಗ ನರ್ಸ್ ಒಬ್ಬಳು ಇನ್ನಾವನೋ ಅಡ್ನಾಡಿ ಶಾಸಕನ ಮೇಲೆ ದೂರು ಕೊಡುವಾಗ (ಅದರಲ್ಲಿ ಸತ್ಯ ಇದೆ, ಅದು ಬೇರೆ ವಿಷಯ) ಉಪಮುಖ್ಯಮಂತ್ರಿ ಯಡಿಯೂರಪ್ಪನ ಹೆಸರನ್ನು ಪ್ರಸ್ತಾಪಿಸಿದರೆ ಪೊಲೀಸರಿಗೇಕೆ ಥ್ರಿಲ್ ಆಗಬೇಕಿತ್ತು?

ಜಯಲಕ್ಷ್ಮಿ-ರೇಣುಕಾಚಾರ್ಯ ಗಲಾಟೆ ನೆಪದಲ್ಲಿ ಯಡಿಯೂರಪ್ಪ-ಶೋಭಾ ಕರಂದ್ಲಾಜೆ ಬಗ್ಗೆ ಜಯಲಕ್ಷ್ಮಿ ಇನ್ನಷ್ಟು ರೋಚಕವಾಗಿ ಮಾತಾಡುವಂತೆ ಪ್ರಚೋದಿಸಬೇಕಿತ್ತು? ಇದು ಗೌಡಾ ಮತ್ತು ಮುಖ್ಯಮಂತ್ರಿ ಕುಮಾರಸ್ವಾಮಿಯ ಇಚ್ಛೆಯೂ ಆಗಿರದಿದ್ದರೆ ಪೊಲೀಸರು ಹೀಗೆ ವರ್ತಿಸಲು ಸಾಧ್ಯವಿರುತ್ತಿತ್ತೆ ಯೋಚಿಸಿ ನೋಡಿ.

ಇನ್ನೈದು ತಿಂಗಳಿಗೆ ಯಡಿಯೂರಪ್ಪ ಮುಖ್ಯಮಂತ್ರಿ ಆಗಬೇಕು ಅದು ಆಗಬಾರದು ಎಂದಾದರೆ ಇಂತಹ ಹಗರಣಗಳು ಯಡ್ಡಿಯ ಕುತ್ತಿಗೆಗೆ ಸುತ್ತಿಕೊಳ್ಳಬೇಕು. ಇದು ಗೌಡರ ಕುಟುಂಬದ ಅಸಲಿ ಮಸಲತ್ತು.

ರೇಣುಕನ ಪತ್ನಿ ಸುಮಾಳ ಅಸಹಾಯಕ[...]

"ನೋಡು ಜಯಲಕ್ಷ್ಮಿ. ಇವರು (ರೇಣು[...] ಚಾರ್ಯ) ನಿನ್ನ ಎರಡನೇ ಮದುವೆ ಆಗ್ತೀನಿ ಅ[...] ಹಠಾ ಮಾಡ್ತಿದ್ದಾರೆ. ನಿಮ್ಮಿಬ್ಬರಿಗೂ ಇದರಿಂದ ಸಂತೋ[...] ಆಗೋದಾದರೆ ಮದುವೆ ಆಗಿ, ಆದ್ರೆ ನಾನು ಮ[...] ಮನೆ ಬಿಟ್ಟು ಹೋಗಲ್ಲ, ಈಗಾಗಲೇ ನನ್ನ [...] ಶಾಂತಿಯ ಮದುವೇನೂ ಮುರಿದುಬಿದ್ದಿದೆ. ಈಗ [...] ಜೀವನಾನೂ ಅದೇ ತರ ಆದ್ರೆ ನಮ್ಮಪ್ಪ ಅಮ್ಮ ಸ[...] ಪಟ್ಟುಕೋತಾರೆ.'

-ಇದು ಶಾಸಕ ರೇಣುಕನ ಪತ್ನಿ ಸುಮಾ [...] ಗೆಳತಿ ನರ್ಸ್ ಜಯಲಕ್ಷ್ಮಿಗೆ ಹೇಳಿರುವ ಮಾತು. [...] ಮಾತುಗಳಲ್ಲಿ ಸುಮಾಳ ಸೂಕ್ಷ್ಮತೆ ಜೊತೆಗೆ ಅಸಹಾ[...] ಕತೆಗಳೆರಡೂ ವ್ಯಕ್ತವಾಗಿವೆ. ಸುಮಾರ ತಂಗಿ ಶ[...] ಈಗ ಕಟ್ಟಾಸುಬ್ರಮಣ್ಯಂ ನಾಯ್ಡುನ ರಿಯಲ್ ಎಸ್ಟೇ[...] ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಪಾಷಾಣಹೃದಯಿ ರೇಣುಕ ಮತ್ತವನ ಸೋದ[...] ಕಂಡವರ ಮನೆ ಹೆಣ್ಣುಮಕ್ಕಳ ಜೀವನ ಹಾಳು ಮಾಡ[...] ಮರೆಯುತ್ತಲೇ ಇದ್ದಾರೆ.

ಮಾಧ್ಯಮಗಳಿಗೆ ಹಿಡಿದಿರುವ ಸಮೂಹ ಸನ್ನಿ

(3 ನೇ ಪುಟದಿಂದ)


ಎಂಬುದನ್ನೇ ಉತ್ತಮವೆಂದು ವಾದಿಸುವ ಲಕ್ಕಿ/ಭೈರಪ್ಪ ಅದರ ಕೆಟ್ಟದಕ್ಕೆಲ್ಲ ಇಸ್ಲಾಂ ಧರ್ಮವನ್ನು ದೂಷಿಸುವುದು ನಗೆ ಹುಟ್ಟಿಸುತ್ತದೆ. ಏಕೆಂದರೆ ಈ ಪ್ರಖಾಂಡ ಪಂಡಿತರಾದ ಲಕ್ಕಿ/ಭೈರಪ್ಪನವರ ಪ್ರಕಾರ ಇಲ್ಲಿನ ಸತಿ ಪದ್ಧತಿಯೂ ಸೇರಿದಂತೆ ಹಿಂದೂ ಧರ್ಮದ ಹಲವಾರು ಅನಿಷ್ಟಗಳಿಗೆ ಮುಸಲ್ಮಾನರೇ ಕಾರಣ! ಇಂತಹ ವಾದಗಳನ್ನು ಹೇಗೆ ಒಪ್ಪಲಾಗುತ್ತದೆ.

ಅಂದಹಾಗೆ, ಭಾರತ ಹಿಂದುಳಿದಿರುವುದಕ್ಕೆ ಯಾವುದೋ ಕಾಲದ ಧರ್ಮಶಾಸ್ತ್ರಕಾರರು, ಪ್ರಾಚೀನ ಕಾಲದ ವೇದೋಪನಿಷತ್ತುಗಳನ್ನು ಬೈಯುವುದು ಈ ಸಂಶೋಧಕ ಜೋಡಿಗೆ ಸರಿ ಕಾಣಿಸುವುದಿಲ್ಲ, ಬದಲಾಗಿ ಇವರ ಪ್ರಕಾರ ಭಾರತ ಹಿಂದುಳಿದಿರುವುದಕ್ಕೆ ಕಾರಣ ಈ ದೇಶವನ್ನು ನಿರ್ವೀರ್ಯಗೊಳಿಸುತ್ತಾ ಬಂದಿರುವವರು (ಅಂದರೆ ಮುಸಲ್ಮಾನರು). ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ವಿವಾದವೆಬ್ಬಿಸಿದ ದಿಜೆಪಿಯ ಸಿಡಿಯಲ್ಲಿ ಹೇಳಿರುವಂತೆ "ಹಿಂದೂಗಳು ಒಂದೇ ಮದುವೆ ಆಗಿ ಎರಡು ಮಕ್ಕಳನ್ನು ಹೆತ್ತರೆ, ಮುಸಲ್ಮಾನರು ಐದೈದು ಮದುವೆಗಳಾಗಿ 35 ಕುನ್ನಿಗಳನ್ನು ಹೆರುತ್ತಾರೆ." ಆದರೆ ಇಂದಿಗೂ ಭಾರತದ ಮುಸ್ಲಿಮರ ಸಂಖ್ಯೆ ಶೇ. 14 ದಾಟುವುದಿಲ್ಲ, ಇನ್ನು ಹಿಂದಿನ ಕಾಲದಲ್ಲಿ ಅವರ ಸಂಖ್ಯೆ ಇದಕ್ಕಿಂತಲೂ ಕಡಿಮೆ ಇತ್ತು, ಆದರೆ ಇಷ್ಟು ಕಡಿಮೆ ಸಂಖ್ಯೆಯ (ಶೇ. 10 ಎಂದೇ ಇಟ್ಟುಕೊಳ್ಳೋಣ) ಮುಸಲ್ಮಾನರು ಅದು ಹೇಗೆ ಶೇ. 90 ರಷ್ಟಿದ್ದ 'ಹಿಂದೂ'ಗಳನ್ನು ನಿರ್ವೀರ್ಯರನ್ನಾಗಿಸಿದರು? ಹಾಗೆ ನೋಡಿದರೆ ಭಾರತೀಯರನ್ನು ಅಂದಿನಿಂದ ಇಂದಿನವರೆಗೂ ನಿರ್ವೀರ್ಯರನ್ನಾಗಿಸಿರುವುದು ಲಕ್ಕಿ/ಭೈರಪ್ಪನಂತಹ ಮನುವಾದಿಗಳೇ ಅಲ್ಲವೇ?

ಆದರೆ "ಇರಬಹುದು" ಎಂಬ ಘನ ಸಂಶೋಧನೆಯನ್ನು ಮಾಡುವ ಭೈರಪ್ಪನವರಿಗೆ ಪಾಪ ಇಂತಹ ಸರಳ ಸಂಗತಿಗಳು ಹೇಗೆ ಗೊತ್ತಾಗಬೇಕು ಬಿಡಿ.

ನನ್ನ ಪ್ರಕಾರ 'ಆವರಣ' ನಿಜವಾಗಲೂ ಹೇಸಿಗೆ ಹುಟ್ಟಿಸುವ ಪುಸ್ತಕ. ಮನುಷ್ಯನ ಆರೋಗ್ಯಕ್ಕೆ ಹಾನಿಕಾರವಾದ ಈ ಕಾದಂಬರಿಯನ್ನು ದಯವಿಟ್ಟು ಕೊಂಡು ಓದಬೇಡಿ. ಆಗಲೇ ನಿಮಗೆ ಗೊತ್ತಿರುವವರು ಕೊಂಡಿದ್ದರೆ, ಅದನ್ನು ಪಡೆದು ಓದಿ, ಭೈರಪ್ಪನ ಕಂತ್ರಿ ಬುದ್ಧಿ ಬಗ್ಗೆ ಅರಿತುಕೊಂಡು ಒಂದು ದೊಡ್ಡ ಸಲಾಮು ಹೇಳಿ ಹಿಂದುರುಗಿಸಿ.

-ಗೌರಿ ಲಂಕೇಶ್



ಕೋ-ಜಾಗಳ ಸ್ತ್ರೀ ಬಾಣಗಳು

'ಜಾತ್ಯತೀತತೆ ಅಂದರೇನು ನನಗೆ ಗೊತ್ತಿಲ್ಲ' ಎಂದು ಹೇಳಿದ್ದ ಕುಮಾರಸ್ವಾಮಿ[...] ಈಗ ಅದರ ಬೆಲೆ ಗೊತ್ತಾಗಿರಬಹುದು. ಹಾಗಾಗೇ ಅವರು ತಮ್ಮ ಜಾತಿಗೆ ಸೇರಿರದ ಮಹಿಳೆಯರೊಂದಿ[...] ಸ್ನೇಹದಿಂದಿರುತ್ತಾ ಜಾತ್ಯತೀತರಾಗುವ ಯತ್ನ ನಡೆಸಿದ್ದಾರೆ. ಕಬಾಬು ರಾಧಿಕಾ ಎಂಬ ಸುಂದರ ನಟಿಯೊಂದಿ[...] ಈಗ 'ತುಂಟಾಟ' ಎಂಬ ರೋಮ್ಯಾಂಟಿಕ್ ಸಿನಿಮಾದಲ್ಲಿ ನಟಿಸುತ್ತಿರುವ ಕುಮಾರಸ್ವಾಮಿಗೆ ಈ ಸಿನಿಮಾ[...] ಶೂಟಿಂಗ್ ವಿವರಗಳನ್ನೆಲ್ಲ ಪೇಪರ್‌ನವರಿಗೆ ಕೊಟ್ಟಿದ್ದೇ ಬಿಜೆಪಿಗಳೆಂಬ ಅನುಮಾನ ಇದೆ. ಹಾಗಾಗಿ ಆ ಸೇಡ[...] ತೀರಿಸಲು "ಯಡ್ಡಿ ಪ್ರಣಯ ಪ್ರಸಂಗ"ವನ್ನು 'ಶೋಭಾ'ಯಮಾನವಾಗಿ ಜನರು ನೋಡಲೆಂದು ಕುಮಾರ[...] ಜಯಲಕ್ಷ್ಮೀಯನ್ನು ಪರೋಕ್ಷವಾಗಿ ಬಳಸಿಕೊಂಡಿದ್ದಾರೆ. ಒಟ್ಟಿನಲ್ಲಿ ಕೋ-ಜಾ ಸರ್ಕಾರದಲ್ಲೀಗ ಸ್ತ್ರೀ ಹಗರಣಗಳದ್ದೇ[...] ಭರಾಟೆ. ಕುಮಾರ-ರಾಧಿಕಾ, ಯಡ್ಡಿ-ಶೋಭಾ, ರೇಣುಕಾಚಾರ್ಯ-ಜಯಲಕ್ಷ್ಮಿ.... ಹೀಗೆ ಗುಲ್ಲೋ ಗುಲ್ಲು[...]

ಅಷ್ಟಬಂಧ ಬ್ರಹ್ಮಕಲಶಗಳ ಭರಾಟೆ ನಡುವೆ ತಣ್ಣಗೆ ನಡೆದ ಸೇತುಬಂಧ!

ದಕ್ಷಿಣ ಕನ್ನಡ

ೋಲಿ ಶಿಷ್ಯ ನಾಗರಾಜಶೆಟ್ಟಿ ಧಾರ್ಮಿಕ ದತ್ತಿ ಾದುದರ ಫಲವೋ? ಭಕ್ತ-ಪೌರುಷದ ಷೆಯೋ? ಅಂತೂ ಅವಿಭಜಿತ ದಕ್ಷಿಣ ಕನ್ನಡ ಲ್ಲಿ ಬೆಂಕಿಯಂತಹ ಬಿರು ಬೇಸಿಗೆಯಲ್ಲೂ ನಗಳ ಪುನರ್ ಪ್ರತಿಷ್ಠೆ, ನವೀಕರಣ, ಅಷ್ಟಬಂಧ, ಲಶ... ಇವುಗಳದ್ದೇ ಸದ್ದು ಸುದ್ದಿ. ಅದೊಂದು ಮೇನಿಯಾವೇ ಆಗಿ ಇನ್ನು ಯಾವ ದೇವಸ್ಥಾನ ಎನ್ನುವಷ್ಟರ ಮಟ್ಟಿಗೆ ಆಗಿಬಿಟ್ಟಿದೆ.

ಬ್ರಹ್ಮಕಲಶದ ದಿಸೆಯಲ್ಲಿ ಹರಿದುಬರುವ ನ-ಕನಕ ದವಸ ಧಾನ್ಯಗಳ ಬಗ್ಗೆ ಹೇಳುವುದೇ ಲ್ಲಿ. ಸ್ವತಃ ಜಶೆಟ್ಟಿಯೇ ಗದ್ದ ಬಿಟ್ಟು ಗಡದ್ದಾಗಿ ನಡೆದ ಕಟೀಲು ಮಾತೆಯ ಬ್ರಹ್ಮಕಲಶ, ರ ಸ್ವತಃ ಮುಖ್ಯಮಂತ್ರಿ ರಸ್ವಾಮಿಯೇ ಬಿಜಯಂ ಜರುಗಿದ ನಾಗಮಂಡಲ. ಣಿಕೆ-ತಲೆಕಾಣಿಕೆ ಎಂದು ದ್ದ ಲೋಡುಗಟ್ಟಲೆ ಕರಕಾರಿ, ಎಳನೀರು. ಅದರಲ್ಲಿ ರ್ಧ ಹಾಳಾಗಿ ದದೆಷ್ಟು? ಅದನ್ನೆಲ್ಲಾ ವಾರಿ ಮಾಡೋದೇ ಒಂದು ಸಮಸ್ಯೆಯಾಗಿ ಬಿಟ್ಟಿತ್ತು.



ಗೋಗಟೆ

ಕಟೀಲಮ್ಮನ ಸೇವೆಯಲ್ಲಿ ಶೆಟ್ಟಿಯ ಶಿಷ್ಯ ನಳಿನ್‌ಕುಮಾರ್ ತ ಮಿಂಚಿದ್ದೂ ಆಯಿತು. ಅದೇ ಗೆ ಬಂಟ್ವಾಳದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ರು ಆಯೋಜಿಸಿದ್ದ ರಾಜ್ಯಮಟ್ಟದ ಕೃಷಿ ಮೇಳ ಕ್ಕೊಂದು ಟ್ಯಾಲಿಯಾಗದೇ ಜಿಲ್ಲೆಯಾದ್ಯಂತ ಬೃಹತ್ ್‌ಗಳು. ಅದರಲ್ಲಿ ಹೆಗ್ಗಡೆ ದಂಪತಿಗಳು ವಿವಿಧ ುಗಳಲ್ಲಿ ರಾರಾಜಿಸಿ ಹೆಗ್ಗಡೆ ಮೇಳವಾಗಿ ರೂಪು ಡು ಹಾಸ್ಯಾಸ್ಪದವಾಗಿ ಹೋಗಿತ್ತು. ಹೀಗೆ ಬ್ರಹ್ಮ -ಕೃಷಿಮೇಳಗಳ ಭರಾಟೆಯಲ್ಲಿ ಮಂತ್ರಿ ಶೆಟ್ಟಿ-ಿಗಳು ಸಾಕ್ಷಾತ್ ದೇವಮಾನವರಂತೆ ಮಿಂಚಿದರೆ, ನಮಕ್ಕಿ ಎಂಬಲ್ಲಿ ನಡೆದ ಸೇತುಬಂಧನವು ಯಾರ ಗೂ ಬೀಳದೇ ಏಪ್ರಿಲ್ 11ರಂದು ಲೋಕಾರ್ಪಣೆ ಯಿತು.

ರ್ಕಾರದ ಹಂಗಿಲ್ಲದೇ ಊರವರೇ ಕಟ್ಟಿದ ಸೇತುವೆ

ದಕ್ಷಿಣ ಕನ್ನಡ ಜಿಲ್ಲೆಯ ಒಂದು ಮೂಲೆಯಲ್ಲಿ ನಾಡಿನ ತಪ್ಪಲಲ್ಲಿರುವ ಹತ್ಯಡ್ಕ ಒಂದು ಕುಗ್ರಾಮ. ್ರಾಮ ಹೊರ ಜಗತ್ತಿಗೆ ಗೊತ್ತಾಗಿರೋದು ಮಂಗನ ಲೆಯಂತಹ ಭೀಕರ ರೋಗ ಮತ್ತು ಎಂಡೋ ್‌ನಂತಹ ಕರಾಳ ಚಿತ್ರಗಳಿಂದ.

ಪಶ್ಚಿಮ ಘಟ್ಟದಿಂದ ಹರಿದುಬರುವ ಕಪಿಲಾ ನದಿ ಗಡಿ-ಪುತ್ತೂರು ತಾಲ್ಲೂಕುಗಳನ್ನು ವಿಭಜಿಸಿ ಇಲ್ಲಿ ಯುತ್ತದೆ. ಕಪಿಲಾ ನದಿಯ ಆಸುಪಾಸಿನಲ್ಲಿ ಶಿಶಿಲ, ಹೊಳೆ, ಶಿಬಾಜೆ, ಅರಸಿನಮಕ್ಕಿ, ನೆಕ್ಕರಡ್ಕ, ಶಿಬರಾಜೆ, ಕ್ಕೋಟ, ದಬೆರತ್ತಡ್ಕ, ನೆಲ್ಲಿತ್ತಡ್ಕ, ಮುದ್ದಿಗೆ, ಪಾಲೆಂಜ, ಜ ಮುಂತಾದ ಪ್ರದೇಶಗಳಿದ್ದು ಇಲ್ಲೆಲ್ಲಾ ಬದುಕು ವವರು ಬಡ ಕೃಷಿಕರು. ಇವರೆಲ್ಲಾ ನಾಗರಿಕ ಅಗತ್ಯತೆಗಳಿಗಾಗಿ, ಮಕ್ಕಳು ಶಾಲೆಗೆ ಹೋಗಬೇಕಾದರೆ ಕೊಕ್ಕಡ ಸುದೆಗುಂಡಿ ಎಂಬಲ್ಲಿ ಕಪಿಲಾ ನದಿಯನ್ನು ದಾಟಿ ಬರಬೇಕು. ಇದರ ಸಮೀಪವೇ ಬೊಳ್ಳೋಡಿ ಎಂಬಲ್ಲಿ ಸುಮಾರು 40 ವರ್ಷಗಳ ಹಿಂದೆ ಕಾಲುಸೇತುವೆ ಇತ್ತಾದರೂ, ನದಿಯ ಪ್ರವಾಹಕ್ಕೆ ತಾಳಿಕೊಳ್ಳಲಾರದೇ ಅದು ಕೊಚ್ಚಿ ಹೋಗಿತ್ತು. ಆದ್ದರಿಂದ ಬೇಸಿಗೆಯಲ್ಲಿ ನದಿ ಬತ್ತಿ ಜನರ ಓಡಾಟಕ್ಕೆ ಸುಲಭವಾದರೆ, ಮಳೆಗಾಲದಲ್ಲಿ 6-8 ಕಿ.ಮೀ. ಸುತ್ತು ಬಳಸಿ ಕ್ರಮಿಸಬೇಕಾದ ಪರಿಸ್ಥಿತಿ ಇತ್ತು. ಈ ಬಗ್ಗೆ ಸ್ಥಳೀಯ ನಾಗರಿಕರು ಜನಪ್ರತಿನಿಧಿಗಳಲ್ಲಿ ಹಾಗೂ ಸರ್ಕಾರಿ ಅಧಿಕಾರಿಗಳಲ್ಲಿ ಕಳೆದ ನಲವತ್ತು ವರ್ಷಗಳಿಂದ ಗೋಗರೆದದ್ದು, ಯಾರ ಕಿವಿಗೂ ಬೀಳದೇ ಗೋರ್ಕಲ್ಲಿನ ಮೇಲೆ ಮಳೆ ಸುರಿದಂತೆ ಆಗಿಹೋಗಿತ್ತು.

ಚಿತ್ಪಾವನರ ಬೆಳ್ಳಿ ಹಬ್ಬದ ಕೊಡುಗೆ

ಮಹಾರಾಷ್ಟ್ರದ ರತ್ನಗಿರಿ, ಚಿಪ್‌ಳೂಣಕರ, ಪೂನಾ ಮುಂತಾದ ಕಡೆಗಳಿಂದ ಮೊಗಲರ ಕಾಲದಲ್ಲಿ ಓಡಿಬಂದ ಚಿತ್ಪಾವನರು ಕೃಷಿಕರು. ಬೆಳ್ತಂಗಡಿಯ ಶಿಶಿಲ, ಸೋಮಂತ್ತಡ್ಕ, ಕಾರ್ಕಳ, ಮಾಳ ಮುಂತಾದ ಕಡೆಗಳಲ್ಲಿ ನದಿ ತಟಗಳಲ್ಲಿ ಆಶ್ರಯ ಪಡೆದು ಕೃಷಿಯಲ್ಲಿ ನಿರತರಾಗಿದ್ದಾರೆ. ಈ ಪೈಕಿ ಸುಮಾರು 150 ಕುಟುಂಬಗಳನ್ನೊಳಗೊಂಡ ಶಿಶಿಲ ಸೀಮಾ ಚಿತ್ಪಾವನ ಸಮಾಜ ಸಂಘವೊಂದು ಕಳೆದ 25 ವರ್ಷಗಳಿಂದ ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿ ಕ್ರಿಯಾಶೀಲವಾಗಿದೆ. ಹತ್ಯಡ್ಕದಲ್ಲಿ ಪರಶುರಾಮನ ದೇವಾಲಯ, ಕಲ್ಯಾಣಮಂಟಪ, ವೇದ ಪಾಠಶಾಲೆ, ಮೋಕ್ಷಪದ ಇತ್ಯಾದಿಗಳನ್ನೆಲ್ಲಾ ಮಾಡಿರುವ ಈ ಸಂಘ ತನ್ನ ಬೆಳ್ಳಿಹಬ್ಬದ ಸಡಗರಕ್ಕೆ ಕುರುಹಾಗಿ ಏನಾದರೊಂದು ಗುರುತರವಾದ ಕೆಲಸ ಮಾಡಬೇಕೆಂದು ಹೊರಟಾಗ ತಕ್ಷಣ ಹೊಳೆದದ್ದೇ ಎರಡು ತಾಲ್ಲೂಕುಗಳನ್ನು ಬೆಸೆಯುವ ಕಪಿಲಾ ನದಿಗೆ ಸೇತುವೆ ಕಟ್ಟುವ ಪುಣ್ಯ ಕಾರ್ಯ.

ಸುಮಾರು 25 ಲಕ್ಷ ರೂ. ಅಂದಾಜು ವೆಚ್ಚದ ಈ ಕಾಮಗಾರಿಯನ್ನು ಸರ್ಕಾರದ ಅನುದಾನದ ಹಂಗಿಲ್ಲದೇ ಊರವರ, ದಾನಿಗಳ ಸಹಕಾರದಿಂದ ಮಾಡಲು ಹೊರಟ ಚಿತ್ಪಾವನರ ಸಂಘದ ಅಧ್ಯಕ್ಷರಾದ ಎನ್. ಕರುಣಾಕರ ಗೋಗಟೆಯವರನ್ನು ಕಂಡು ಇದು ಹೇಗೆ ಸಾಧ್ಯ ಎಂದು ಕೇಳಿದರೆ-"ಇದು ಸ್ನೇಹದ ನಗದೀಕರಣ. ನಾವು ಹಿಂದೂಗಳು (ಪಕ್ಕದಲ್ಲೇ ಇರುವ ಬೂಡುಮುಗೇರು ದೇವಸ್ಥಾನವನ್ನು ಉಲ್ಲೇಖಿಸಿ) ಒಂದು ಬ್ರಹ್ಮಕಲಶಕ್ಕೆ 65 ಲಕ್ಷ ಖರ್ಚು ಮಾಡಲು ಸಾಧ್ಯವೆಂದಾದರೆ ಹಿಂದೂ-ಮುಸ್ಲಿಂ-ಕ್ರೈಸ್ತರೆನ್ನದೇ ಎಲ್ಲರಿಗೂ ಬೇಕಾಗುವ, ಎಲ್ಲರನ್ನು ಬೆಸೆಯುವ ಸೇತುವೆ ಕಟ್ಟುವ ಕೆಲಸ ಕಷ್ಟದ್ದೇನಲ್ಲ" ಎನ್ನುತ್ತಾರೆ. ಹೀಗಾಗಲೇ ಊರ-ಪರವೂರ ದಾನಿಗಳು, ಸಂತೋಷ. ಜನರಂತೂ ಕೈಬಿಚ್ಚಿಲ್ಲಿ ತುಂಬು ಸಹಕಾರ ಕೊಟ್ಟಿದ್ದಾರೆ" ಎನ್ನುತ್ತಾರೆ ಅಧ್ಯಕ್ಷರಾದ ಗೋಗಟೆ.

ಯಾವುದೇ ಪ್ರಚಾರಕ್ಕೆ ಹೋಗದೇ, ಒಂದು ಒಳ್ಳೆಯ ಬ್ಯಾನರ್ ಕೂಡಾ ಕಟ್ಟದೇ ಬರಿಯ 50 ಸಾವಿರ ರೂಪಾಯಿ ಬಜೆಟ್‌ನಲ್ಲಿ ಬೆಳ್ಳಿಹಬ್ಬವನ್ನು ಆಚರಿಸಿದ ಚಿತ್ಪಾವನ ಸಂಘದವರು, ಕೊಲ್ಯ ಸಾಮೀಜಿಯವರ ಕೈಯಲ್ಲಿ ಅಷ್ಟೇ ಸರಳವಾಗಿ ಸೇತುವೆಯನ್ನು ಲೋಕಾರ್ಪಣೆ ಮಾಡಿದ್ದಾರೆ. ಸರ್ಕಾರ ಮಾಡುತ್ತದೆ ಅಂತ ಕೂತಿದ್ದರೆ ಇನ್ನೆಷ್ಟು ಕಾಲ ಕಾಯಬೇಕಿತ್ತೋ. ಬ್ರಹ್ಮಕಲಶ, ಕೃಷಿಮೇಳದ ಹೆಸರಲ್ಲಿ ಸಂಭವಿಸುವ ಮಂತ್ರಿ ಮಾಗಧರ



ಸರ್ಕಾರದ ಹಂಗಿಲ್ಲದೆ ಊರವರೇ ಕಟ್ಟಿದ ಸೇತುವೆ

ಕೆಲವೊಂದು ಸಂಘ-ಸಂಸ್ಥೆಗಳ ಸಹಕಾರ, ಸಾಲ-ಸೋಲ ಮಾಡಿ 15 ಲಕ್ಷ ರೂ. ಕೆಲಸ ಪೂರ್ಣಗೊಂಡಿದೆ. 2006ರ ಡಿಸೆಂಬರ್‌ನಲ್ಲಿ ಶಿಲಾನ್ಯಾಸಗೊಂಡು 2007ರ ಫೆ. 4ರಂದು ಕೆಲಸ ಆರಂಭಿಸಿ ಬರಿಯ ಎರಡೂವರೆ ತಿಂಗಳಲ್ಲೇ 100 ಮೀಟರ್ ಉದ್ದದ ಸೇತುವೆಯನ್ನು ಪುತ್ತೂರಿನ ಮಾಸ್ಟರ್ ಪ್ಲಾನರಿಯವರು ಕಟ್ಟಿ ನಿಲ್ಲಿಸಿದ್ದಾರೆ. ಇನ್ನು 10% ಕೆಲಸವಷ್ಟೇ ಬಾಕಿ ಉಳಿದಿದೆ. "ನಮ್ಮ ಕೆಲಸ ನೋಡಿ ಬೆಳ್ತಂಗಡಿಯ ಶಾಸಕರು 5 ಲಕ್ಷವನ್ನು ಸಂಸದರ ನಿಧಿಯಿಂದ ಕೊಡಿಸುವ ಭರವಸೆ ನೀಡಿದ್ದಾರೆ. ಪುತ್ತೂರಿನ ಶಾಸಕರೂ ಕೊಡುತ್ತೇನೆಂದಿದ್ದಾರೆ. ಸಿಕ್ಕರೆ

ಒಡ್ಡೋಲಗವನ್ನೇ ವರ್ಣರಂಜಿತವಾಗಿ ಬಿತ್ತರಿಸುವ ವಾರ್ತಾ ಪತ್ರಿಕೆಗಳಿಗೆ ಅದ್ಯಾಕೋ ಈ ಸೇತುಬಂಧ ಒಂದು ಮಹತ್ವದ ಸುದ್ದಿ ಎನಿಸಲೇ ಇಲ್ಲ.

ಇದು ನಮ್ಮ ಮಾಧ್ಯಮಗಳ ದುರಂತ. ಇರಲಿ ಅಷ್ಟಬಂಧ, ಬ್ರಹ್ಮಕಲಶಗಳ ಭರಾಟೆಯ ನಡುವೆ ಚಿತ್ಪಾವನರು ಕೈಗೊಂಡ ಈ ಎರಡು ತಾಲ್ಲೂಕಿನ ಜನರ ಹೃದಯ ಬೆಸೆಯುವ ಕೈಂಕರ್ಯ 'ಸೇತುಬಂಧ' ಮಾದರಿ ಎನ್ನಿಸುವುದಿಲ್ಲವೆ?

-ಪ್ರಕಾಶ್ ಪಿಂಟೋ

ಮಾರಲ್ ಪೊಲೀಸರ ಅಟ್ಟಹಾಸ

ಅನಿಸಿಕೆ

ಕೆಲ ದಿನಗಳ ಹಿಂದೆ ಮಂಗಳೂರಿನಲ್ಲಿ ಒಬ್ಬ ವ ಮಹಿಳಾ ಕಾರ್ಪೊರೇಟರ್‌ಗೆ ಸಂಜೆ ಹೊತ್ತು ಬೀದಿಯಲ್ಲಿ ಕೆಲ ಯುವಕರು ಹಲ್ಲೆ ನಡೆಸಿದರು. ೆ ಗೊತ್ತೇ? ಸೋನಿಯಾ ಡಿಸೋಜಾ ಎಂಬ ನ ತುಂಬಾ ಸಜ್ಜನ ಕಾರ್ಪೊರೇಟರ್ ಆದ ಇವರು ಪ್ರದೇಶದ ಕೆಲ ಯುವಕರ ಅಹವಾಲುಗಳನ್ನು ಲು ಒಂದು ಹೋಟೆಲ್‌ನಲ್ಲಿ ಕುಳಿತಿದ್ದೇ ಇವಳ ಹಿಂದೂ ಸಂಘಟನೆಯೊಂದರ ಸ್ವಘೋಷಿತ ರಲ್ ಪೊಲೀಸರಿಂದ" ಈಕೆ ಹಾಗೂ ಇವರ ರರ ಮೇಲೆ ಹಲ್ಲೆ, ಅವಳ ಚಾರಿತ್ಯ ಪ್ರಶ್ನಿಸಿ ಜನಿಕವಾಗಿ ಅವಮಾನ.


ಇದೇನು ಒಂದು isolated ಪ್ರಕರಣವಲ್ಲ, ಹಿಂದಿನ ವರ್ಷಗಳಿಂದ ಇದು ತುಂಬಾ ಹೆಚ್ಚಿದೆ. ಧರ್ಮದ ಲ್ಲಿ, ಭಾರತೀಯ ಸಂಸ್ಕೃತಿ ರಕ್ಷಣೆಯ ನೆಪದಲ್ಲಿ ಸ್ವಘೋಷಿತ ಸಮಾಜದ ರಕ್ಷಕರ ಕಾಟ ದಕ್ಷಿಣ -ಉಡುಪಿ ಜಿಲ್ಲೆಗಳಲ್ಲಿ ತುಂಬಾ ಹೆಚ್ಚಿದೆ. ಇಲ್ಲಿಯ ೀಸರೂ ಖಾಕಿಯ ಅಡಿ ಕಾವಿ ಹೊದ್ದಿರುವುದರಿಂದ, ರ ವಿರುದ್ಧ ದೂರು ಕೊಡುವವರಲ್ಲೇ ತಪ್ಪು ಹುಡುಕಿ ಯಿಸುವುದರಿಂದ, ಈ ಭಂಡ 'ಮಾರಲ್ ೀಸರ' ಧೈರ್ಯ ದಿನೇ ದಿನೇ ಹೆಚ್ಚುತ್ತಿದೆ.

ಮುಂಬೈ, ಹಾಗೂ ಕೊಲ್ಲಿ ದೇಶಗಳ ಸಂಪರ್ಕದಿಂದ ೂ ಕ್ರೈಸ್ತ ಧರ್ಮದ ಪ್ರಭಾವ ಇಲ್ಲಿ ದಟ್ಟವಾಗಿರುವು ದ, ದಕ್ಷಿಣ-ಉಡುಪಿಯ ಜನ ಬಹಳ ಪ್ರಗತಿಪರರು ಹೆಗ್ಗಳಿಕೆ ಗಳಿಸಿದ್ದರು. ಬೆಂಗಳೂರಿಗಿಂತಲೂ ಮಂಗಳೂರು ಹೆಚ್ಚು ಕಾಸ್ಮೋಪಾಲಿಟನ್ ಎಂದು ಹೆಸರು ಗಳಿಸಿತ್ತು. ಆದರೆ ಈಗಿನ ವಿದ್ಯಮಾನಗಳಿಂದ ಇಲ್ಲಿನ ಜನ ಅಧೋಗಾಮಿಗಳು, ಮಧ್ಯಯುಗೀನ ಮನೋಧರ್ಮದವರು ಎಂದು ದೇಶವಿದೇಶಗಳಲ್ಲಿ ಪ್ರಚಾರ ಪಡೆಯುತ್ತಿರುವುದು ಖೇದಕರ. ಈಗ ಇಲ್ಲಿ ಹಗಲು ಹೊತ್ತಿನಲ್ಲಿಯೂ ತರುಣ ಗಂಡ-ಹೆಂಡತಿ, ಅಣ್ಣ-ತಂಗಿ ಹೊರಗೆ ಒಟ್ಟಿಗೆ ತಿರುಗಾಡುವಂತಿಲ್ಲ, ಎಲ್ಲಿಂದಲೋ ಪ್ರತ್ಯಕ್ಷರಾಗುವ ಮಾರಲ್ ಪೊಲೀಸರು ಸುತ್ತುವರಿದು ಅವರನ್ನು ಪ್ರಶ್ನಿಸಿ ಹಿಂಸಿಸಲು ಶುರು ಮಾಡುತ್ತಾರೆ ಅವರ ಚರಿತ್ರೆಯನ್ನು ಸಂಶಯಿಸಿ ಸಾರ್ವಜನಿಕವಾಗಿ ಅವಮಾನಿಸುತ್ತಾರೆ ಹಲ್ಲೆ ನಡೆಸುತ್ತಾರೆ ಅಥವಾ ಪೊಲೀಸ್ ಸ್ಟೇಷನ್‌ಗೆ ಜಬರ್‌ದಸ್ತಿ ಎಳೆದೊಯ್ಯುತ್ತಾರೆ. ನವ-ವಿವಾಹಿತ ದಂಪತಿಗಳು ತಮ್ಮ ಮ್ಯಾರೇಜ್ ಸರ್ಟಿಫಿಕೇಟ್ ಕೊರಳಲ್ಲಿ ನೇತಾಡಿಸಿಕೊಂಡು ತಿರುಗಾಡುವ ಪರಿಸ್ಥಿತಿ ಈಗ ತುಳುನಾಡಿನಲ್ಲಿ ಉದ್ಭವಿಸಿದೆ. ದಕ್ಷಿಣ-ಉಡುಪಿ ಜಿಲ್ಲೆಗಳಲ್ಲಿ ಹತ್ತಾರು ವೃತ್ತಿಪರ ಕಾಲೇಜುಗಳಿರುವುದರಿಂದ, ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ಹೊರರಾಜ್ಯದ ವಿದ್ಯಾರ್ಥಿಗಳು ಮಾತ್ರವಲ್ಲ ವಿದೇಶಿ ವಿದ್ಯಾರ್ಥಿಗಳೂ ವಿದ್ಯಾರ್ಜನೆಗೆ ಬರುತ್ತಾರೆ. ಕಳೆದ ತಿಂಗಳು ಉಡುಪಿಯ ಮಲ್ಪೆ ಬೀಚ್‌ನಲ್ಲಿ ಕೆಲ ಹೊರರಾಜ್ಯದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ರಜೆ ದಿನ ವಿಹಾರಾರ್ಥವಾಗಿ ಬಂದಿದ್ದಾಗ ಈ ಮಾರಲ್ ಪೊಲೀಸರಿಂದ ಹಲ್ಲೆ ನಡೆಯಿತು. ಹುಡುಗರು ಕೇವಲ ಹುಡುಗರೊಂದಿಗೆ ಹಾಗೂ ಹುಡುಗಿಯರು ಕೇವಲ ಹುಡುಗಿಯರ ಗುಂಪಿನಲ್ಲೇ ಪಿಕ್‌ನಿಕ್, ಚಾರಣಗಳಿಗೆ ಹೋಗಬೇಕು ಎಂಬುದು ಈ 'ಮಾಪೊ'ಗಳ ಹೊಸ ರೂಲ್ಸ್. ಈ 'ಮಾಪೊ'ಗಳ ವಿರುದ್ಧ ಮಲ್ಪೆ, ಉಡುಪಿಯ ಪೊಲೀಸ್ ಸ್ಟೇಷನ್‌ಗಳಲ್ಲಿ ದೂರ ದಾಖಲಿಸಲು ನಿರಾಕರಿಸಲಾಯಿತು. ಇಂತಹ ಇನ್ನೊಂದು ಘಟನೆ ಸುರತ್ಕಲ್ ಬೀಚ್‌ನಲ್ಲೂ ಹೊರರಾಜ್ಯದ ವಿದ್ಯಾರ್ಥಿ-ವಿದ್ಯಾರ್ಥಿನಿಗಳೊಂದಿಗೆ ನಡೆದಿದೆ. ಹಾಗಾಗಿ ಈಗ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಒಟ್ಟಿಗೆ ಶಾಪಿಂಗ್, ಪಿಕ್‌ನಿಕ್‌ಗೆ ಹೋಗಲು ಭಯಪಡುವಂತಾಗಿದೆ. ಬೀಚ್, ಪಾರ್ಕ್, ರಿಸಾರ್ಟ್, ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗಳಲ್ಲಿ ಈ 'ಮಾಪೊ'ಗಳ ಕಾಟ ಹೆಚ್ಚುತ್ತಿರುವುದರಿಂದ ಪ್ರವಾಸಿ ತಾಣಗಳು ಕಳೆಗುಂದಿವೆ. ಹೋಟೆಲ್-ಸ್ಟೋರ್‌ಗಳ ವ್ಯಾಪಾರ ಬಿದ್ದು ಹೋಗಿದೆ. ಬ್ಯಾಂಕ್ ಅಧಿಕಾರಿಗಳು, ಸರ್ಕಾರಿ ನೌಕರರು, ತಮ್ಮ ಆಫೀಸ್ ಕೆಲಸಕ್ಕೆ ರಿಕವರಿ, ಡಿಪಾಸಿಟ್ ಸಂಗ್ರಹ, ಕೋರ್ಟ್ ಕೇಸ್‌ಗಾಗಿ ತಮ್ಮ ತರುಣ ಮಹಿಳಾ ಸಹೋದ್ಯೋಗಿಗಳೊಟ್ಟಿಗೆ ಹೊರಗೆ ಹೋದರೂ ಈ 'ಮಾಪೊ'ಗಳು ಎಲ್ಲಿಂದಲೋ ಪ್ರತ್ಯಕ್ಷರಾಗಿ ಹಿಂಸಿಸುತ್ತಾರೆ. ಮೊದಮೊದಲು ಶ್ರೀಮಂತ ಮುಸ್ಲಿಮ್ ಹುಡುಗರು ಬಡ ಹಿಂದೂ ಹುಡುಗಿಯರ ಹಾದಿ ತಪ್ಪಿಸಿ ಮಜಾ ಉಡಾಯಿಸಲು ಕರೆದೊಯ್ಯುತ್ತಾರೆ ಎಂಬ ನೆಪದಲ್ಲಿ ಶುರುವಾದ ಈ ಮಾರಲ್ ಪೊಲೀಸಿಂಗ್‌ನ್ನು ಈಗ ಎಲ್ಲಾ ವರ್ಗಕ್ಕೂ ಕೇಸರಿ ಪಡೆಗಳು ವಿಸ್ತರಿಸಿವೆ. ಇನ್ನು ಈ ಮಾರಲ್ ಪೊಲೀಸರೆಂದರೆ ಯಾರು? ರಿಕ್ಷಾವಾಲಾಗಳು, ಸಿಟಿ ಬಸ್ ಸಿಬ್ಬಂದಿ, ರಸ್ತೆ ಬದಿ ವ್ಯಾಪಾರಿಗಳು, ಕೆಲಸವಿಲ್ಲದ ಪಡ್ಡೆಗಳು. ಇವರಿಗೆಲ್ಲಾ ನೇತಾರರು, ಸಮಾಜ ಸೇವಕರೆಂದು ಕರೆಸಿಕೊಳ್ಳುವ ಸಮಾಜ ಕಂಟಕ ಪುಡಿ ರಾಜಕಾರಣಿಗಳು ಹಾಗೂ ಪ್ರಾಕ್ಟೀಸ್ ಇಲ್ಲದೆ ಸ್ವತಃ ಕ್ರಿಮಿನಲ್‌ಗಳಾದ ಕ್ರಿಮಿನಲ್ ಲಾಯರ್‌ಗಳ ಬೆಂಬಲವಿದೆ. ಇವರೆಲ್ಲಾ ಹಿಂದೂ ಸೇನೆ, ಭಜರಂಗದಳದ ಸದಸ್ಯರು. ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಇಲಾಖೆ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಈ ಮಾರಲ್ ಪುಂಡರ ಉಪಟಳವೇ ಇನ್ನೊಂದು ಕೋಮುಗಲಭೆಗೆ ಕಾರಣವಾದೀತು

-ಪ್ರವೀಣ್ ಎಸ್. ಶೆಟ್ಟಿ ಮಂಗಳೂರು

ಕೌಟುಂಬಿಕ ದೌರ್ಜನ್ಯದ ಸಂಕೀರ್ಣ ಮುಖಗಳು

ಮಹಿಳಾ ಹೋರಾಟ ಮತ್ತು ಮಹಿಳಾ ಅಧ್ಯಯನ ದಲ್ಲಿ ತೊಡಗಿರುವವರಿಗೆ ಮಹಿಳಾಪರ ಚಿಂತನೆ ಮತ್ತು ಕಾಳಜಿಗಳು ಯಾವ ಕಡೆಯಿಂದ ಬಂದರೂ ಸ್ವಾಗತಾರ್ಹ. ಅಂಥ ಎಲ್ಲ ಆಲೋಚನೆಗಳೂ ಒಟ್ಟಾಗಿ ಮಹಿಳೆಯರು ಎದುರಿಸುವ ಶೋಷಣೆಯ ಸಂಕೀರ್ಣ ಮುಖಗಳನ್ನು ಮತ್ತು ವಿಮೋಚನೆಯ ವಿವಿಧ ಸಾಧ್ಯತೆಗಳನ್ನು ಅರಿಯಲು ಪೂರಕವಾಗಿರುತ್ತವೆ. ಭಾಷೆ, ಧರ್ಮ, ಸಂಸ್ಕೃತಿ ಮತ್ತು ಪ್ರದೇಶಗಳ ಗಡಿಗಳನ್ನೂ ಮೀರಿ ಮಹಿಳೆಯರ ನೋವು ಸಮಾನ ಎಂಬುದು ಅಧ್ಯಯನಕಾರರ ಮತ್ತು ಹೋರಾಟ ಗಾರರ ಅರಿವಿಗೆ ಬಂದಿರುವ ಸತ್ಯ ವಾಗಿದೆ. ಆದುದರಿಂದ ವಿವಿಧ ಸಮುದಾಯಗಳ ಮಹಿಳೆಯರ ಸೃಜನಶೀಲ ಬರಹಗಳು, ಆತ್ಮ ಕಥನಗಳು, ವೈಚಾರಿಕ ಬರಹಗಳು ಹೆಚ್ಚುಹೆಚ್ಚಾಗಿ ದೇಶೀ ಭಾಷೆಗಳಿಗೆ ಅನುವಾದಗೊಳ್ಳಬೇಕಿದೆ. ಆಗ ಆಯಾ ದೇಶೀಯ ಮಹಿಳಾ ಸಮುದಾಯಗಳ ಹೋರಾಟ ಮತ್ತು ತಾತ್ವಿಕತೆಗಳು ಹೆಚ್ಚು ಸಧೃಢಗೊಳ್ಳುವುದರಲ್ಲಿ ಅನುಮಾನ ಎಲ್ಲ. ಈ ಹಿನ್ನಲೆಯಲ್ಲಿ ಈಜಿಪ್ಷಿ ಯನ್ ಲೇಖಕಿ ನವಲ್ ಎ ಸಾದವಿ ಅವರ Woman at point zero ಎಂಬ ಕಾದಂಬರಿ ಕನ್ನಡಕ್ಕೆ ಅನುವಾದಗೊಂಡಿರುವುದು ಅರ್ಥಪೂರ್ಣವಾಗಿದೆ. ಇದನ್ನು 'ಶೂನ್ಯವಾದವಳು' ಎಂಬ ಹೆಸರಿನಲ್ಲಿ ವೆಂ. ವನಜ ಅವರು ಅನುವಾದಿಸಿದ್ದಾರೆ.



'ಶೂನ್ಯವಾದವಳು' ಕೃತಿಯನ್ನು ಓದುವಾಗ ಇದೊಂದು ಕಾದಂಬರಿಯೇ, ಆತ್ಮಕಥನವೇ, ಜೀವನ ಚರಿತ್ರೆಯೇ ಅಥವಾ ಒಂದರೊಳಗೊಂದು ಬೆಸೆದುಕೊಂಡ ಹಾಗೂ ಬೇರ್ಪಡಿಸಲಾಗದ ಒಂದು ಸಾಹಿತ್ಯಿಕ ರೂಪವೇ ಎಂಬ ಪ್ರಶ್ನೆ ಎದುರಾಗುತ್ತದೆ. ಒರ್ವ ಗಂಡಸನ್ನು ಕೊಂದ ಅಪರಾಧಕ್ಕಾಗಿ ಮರಣದಂಡನೆಯ ಶಿಕ್ಷೆಗೊಳಗಾದ ನಾಯಕಿ ಫಿರ್ದೋಸಳು ಜೈಲಿನ ಕೋಣೆಯೊಂದರಲ್ಲಿ ಸಾವಿನ ಕ್ಷಣಗಳನ್ನು ಎದುರುನೋಡುತ್ತಿರುವಲ್ಲಿಂದ ಕಾದಂಬರಿ ಆರಂಭವಾಗುತ್ತದೆ ಹಾಗೂ ಅವಳ ಮರಣದಂಡನೆಯು ಊರ್ಜಿತ ವಾಗುವಲ್ಲಿಗೆ ಮುಕ್ತಾಯ ವಾಗುತ್ತದೆ. ಈ ನಡುವಿನ ಕೆಲವು ಗಂಟೆಗಳಲ್ಲಿ ಫಿರ್ದೋಸ್ ನಿರೂಪಕಿ ಯೆದುರು ತೆರೆದಿಡುವ ತನ್ನ ಬದುಕಿನ ಸತ್ಯಗಳೇ ನಿರೂಪಕಿ ಯನ್ನೂ ಒಳಗೊಂಡಂತೆ ಓದುಗ ರನ್ನು ಗಾಢವಾಗಿ ಪ್ರಭಾವಿಸುತ್ತವೆ.

"ಒಬ್ಬ ಬಡಗಿ ಬಂದು ಬೀಗ ಮುರಿದು ಬಾಗಿಲು ತೆರೆದು ಕೊಟ್ಟದ್ದೇ ತಡ, ಕೂಡಲೇ ಮನೆ ಯಿಂದ ಬೀದಿಗೆ ಓಡಿದೆ. ಏಕೆಂದರೆ ಬೀದಿಯೊಂದೇ ನಾನು ಆಶ್ರಯಿಸ ಬಹುದಾದ, ನನ್ನ ಇಡಿಯಾದ ಅಸ್ತಿತ್ವದೊಂದಿಗೆ ತಪ್ಪಿಸಿಕೊಳ್ಳಬಹು ದಾದ ಸುರಕ್ಷಿತ ಸ್ಥಳವಾಗಿತ್ತು" (ಪುಟ 40) ಎಂಬ ಫಿರ್ದೋಸಳ ಮಾತುಗಳು ಮೊದಲ ಓದಿಗೆ ತುಂಬ ವಿಚಿತ್ರ ಎನಿಸುವುದಲ್ಲದೆ, ನಮ್ಮಲ್ಲಿ ಗಾಬರಿಯನ್ನೂ ಹುಟ್ಟುಹಾಕುತ್ತವೆ. ಏಕೆಂದರೆ ಶತಮಾನಗಳಿಂದ ಹೆಣ್ಣಿಗೆ ಯಾವುದನ್ನು ಸುರಕ್ಷಿತ, ಸುಭದ್ರ ಮತ್ತು ಶಾಂತಿ, ನೆಮ್ಮದಿಗಳ ಪ್ರತೀಕವೆಂದು ಸಾರುತ್ತ ಬರಲಾಗಿತ್ತೋ ಅಂತಹ ಮನೆಯೊಂದರಿಂದ ಬಿಡುಗಡೆಗಾಗಿ ಕಾದಂಬರಿಯ ನಾಯಕಿ ಒದ್ದಾಡುತ್ತಾಳೆ. ಅಷ್ಟೇ ಅಲ್ಲ, ಬೀದಿಯೊಂದೇ ತನ್ನ ಇಡಿಯಾದ ಅಸ್ತಿತ್ವದೊಂದಿಗೆ ಆಶ್ರಯಿಸಬಹುದಾದ ತಾಣವೆಂಬ ನಿರ್ಣಯಕ್ಕೆ ಬರುತ್ತಾಳೆ! ಕಾದಂಬರಿ ಯುದ್ದಕ್ಕೂ ಆಕೆಯ ನಿರಂತರ ಓಟ ಇರುವುದೇ- ಹೆಣ್ಣೆಂದರೆ ಕೇವಲ ಮೈಯೆಂದು ತಿಳಿದ, ಆಕೆಯನ್ನು ತಮ್ಮ ತೀಟೆತೀರಿಸಿಕೊಳ್ಳಲಿರುವ ಸಾಧನವೆಂದು ಭಾವಿಸಿದ- ಗಂಡುಗಳಿಂದ ತಪ್ಪಿಸಿಕೊಳ್ಳುವ ಓಟವಾಗಿದೆ. ಮೇಲಿನ ಅವಳ ಮಾತುಗಳು ಯಾವ ಭಾವತೀವ್ರತೆಯ ನೆಲೆಯಲ್ಲೂ ಬಂದವುಗಳಲ್ಲ; ಅಥವಾ ಆಕೆಯಲ್ಲಿ ಹುಟ್ಟಿದ ಕಾಲಿಕವಾದ ಸಂಚಾರೀ ಭಾವಗಳೂ ಅಲ್ಲ; ಬದಲಾಗಿ ಅವಳ ಅನುಭವ ಮತ್ತು ಓಟಗಳು ಆಕೆಗೆ ಕಲಿಸಿಕೊಟ್ಟ ಪಾಠದಿಂದ ರೂಪಿತವಾದ ಮಾತುಗಳು. ಹೀಗಾಗಿ ಅವಳ ಮಾತುಗಳು ಓದುಗರಲ್ಲಿ ಪ್ರಶ್ನೆ ಮತ್ತು ಸಂದೇಹಗಳ ನಿರಂತರ ತರಂಗಗಳನ್ನು ಹುಟ್ಟುಹಾಕುತ್ತವೆ.

'ಲೈಂಗಿಕ ದೌರ್ಜನ್ಯ ಲೈಂಗಿಕ ಕಿರುಕುಳಗಳು ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬರಿಗಾಗುತ್ತವೆ; ಅವು ಕೆಲವು ನಿರ್ದಿಷ್ಟ ವರ್ಗದ ಮಹಿಳೆಯರ ಸಂದರ್ಭದಲ್ಲಿ ಜರುಗುತ್ತವೆ; ಅವು ಯಾರೂ ಇರದ ನಿರ್ಜನ ಪ್ರದೇಶಗಳಲ್ಲಿ, ಅಪರಿಚಿತ ಪ್ರದೇಶಗಳಲ್ಲಿ ಜರುಗುತ್ತವೆ; ಇಂತಹ ಹಲ್ಲೆಗಳನ್ನು ನಡೆಸು ವವರು ಸಾಮಾನ್ಯವಾಗಿ ಅಪರಿಚಿತರು, ವಿಕೃತ ಕಾಮಿಗಳು, ಗೂಂಡಾ ಪ್ರವೃತ್ತಿಯವರು; ಲೈಂಗಿಕ ದೌರ್ಜನ್ಯ ನಡೆಯುವುದಕ್ಕೆ ಮಹಿಳೆಯರ ಉದ್ರೇಕಕಾರಿ ಉಡುಗೆ- ತೊಡುಗೆಗಳು, ಹಾವಭಾವಗಳು ಪ್ರೇರಣೆ ನೀಡಿರುತ್ತವೆ ಅಥವಾ ವೈಯಕ್ತಿಕ ಇಲ್ಲವೆ ಕೌಟುಂಬಿಕ ನೆಲೆಯ ದ್ವೇಷ, ಅಸೂಯೆ, ಕ್ರೋಧಗಳು ಇತರ ಕ್ರೌರ್ಯಗಳಿಗೆ ಕಾರಣವಾಗಿರುತ್ತವೆ;' ಇವೇ ಮುಂತಾದ ಅಭಿಪ್ರಾಯಗಳನ್ನು ಸಾಮಾನ್ಯವಾಗಿ ಕೇಳುತ್ತಿರುತ್ತೇವೆ. 'ಶೂನ್ಯವಾದವಳು' ಕಾದಂಬರಿಯು ಮೇಲಿನ ಈ ಬಗೆಯ ಎಲ್ಲ ಮಿಥ್ಯೆಗಳನ್ನೂ ಕಪೋಲಕಲ್ಪಿತ ಚಿಂತನೆಗಳನ್ನೂ ಬಯಲಿಗೆಳೆಯುತ್ತದೆ. ಸಮಾಜದ ಮುಖವಾಡವನ್ನು ಕಿತ್ತೆಸೆದು, ಅದರೊಳಗಿನ ಕರಾಳ ಮುಖವನ್ನು, ಕಠೋರ ಸತ್ಯವನ್ನು ಫಿರ್ದೋಸಾ ಎಂಬ ಪಾತ್ರದ ಮೂಲಕ ಅನಾವರಣ ಮಾಡುತ್ತದೆ.

"ಯಾರು? ಯಾರು ಶುರು ಮಾಡಿದ್ರು? ನಿನ್ನ ತಂದೆ, ಅಣ್ಣ, ಮಾವ. . . ? ಯಾರೇ ಆದರೂ ಅವರಲ್ಲಿ ವ್ಯತ್ಯಾಸವೇನೂ ಇಲ್ಲ, ಅವರೆಲ್ಲಾ ಒಂದೇ, ಕುನ್ನಿಗಳು. ಅವು ಹುಸೇನ, ಫಾಜಿ, ಸಬ್ರಿ, ಇಬ್ರಾಹಿಂ, ಅವಾದೇವ್, ಬಯೂಮಿಯಂಥ ಬೇರೆ ಬೇರೆ ಹೆಸರಿನಲ್ಲಿ ಸುತ್ತ ಸುತ್ತುತ್ತವೆ" (ಪುಟ ೪೨) ಎಂಬ ಶರೀಫಾಳ ಮಾತುಗಳು ಸಮಸ್ಯೆಯ ವ್ಯಾಪಕತೆ ಮತ್ತು ಸಂಕೀರ್ಣತೆಯತ್ತ ನಮ್ಮನ್ನು ಚಿಂತಿಸುವಂತೆ ಮಾಡುತ್ತವೆ. ಫಿರ್ದೋಸಳ ಮೇಲೆ ನಿರಂತರ ಲೈಂಗಿಕ ಹಲ್ಲೆಗಳನ್ನು ನಡೆಸಿದವರಲ್ಲಿ ಅವಳ ಸೋದರಮಾವ, ನೆರೆಮನೆಯ ಹುಡುಗ, ಗಂಡ ಹೀಗೆ ತೀರ ಹತ್ತಿರದ ಸಂಬಂಧಿಗಳಿರುವಂತೆ ಅಧಿಕಾರದ ಮತ್ತು ಹಣದ ಬಲವನ್ನು ಹೊಂದಿದ ಹೊರಗಿನ ವ್ಯಕ್ತಿಗಳೂ ಇದ್ದಾರೆ. ಈ ವಿನ್ಯಾಸವೇ ಒಟ್ಟು ಸಮಾಜದ ಕೊಳಕ ಸ್ಥಿತಿಯ ದ್ಯೋತಕವಾಗಿದೆ.

ಕೋಣ.... ನಾಪತ್ತೆ!

ಹುಲಿ ಕೋಣದ ಕುತ್ತಿಗೆಯನ್ನು ಕಚ್ಚಿ ಎಳೆದುಕೊಂಡು ಹೋಗಿತ್ತು. ಹಾಗಾಗಿ ಕೋಣದ ಹಿಂಭಾಗ ನೆಲಕ್ಕೆ ಉಜ್ಜಿಕೊಂಡು ಹೋಗಿದೆ. ಈ ಅವಕಾಶದಲ್ಲಿ ಎಳೆತದ ಜಾಡನ್ನು ಹಿಡಿಯುವುದು ಸುಲಭ, ಅದು ನೆಲಕ್ಕೆ ಸಮಾನಾಂತರವಾಗಿರುವವರೆಗೆ. ಕೆಲವು ನೂರು ಗಜಗಳವರೆಗೆ ಹುಲಿ ಬೆಟ್ಟಕ್ಕೆ ಪರ್ಯಾಯವಾಗಿ ಸಾಗುತ್ತಿದ್ದ ರಸ್ತೆಯಲ್ಲಿ ಕೋಣವನ್ನು ಎಳೆದುಕೊಂಡು ಹೋಗಿತ್ತು, ಅಲ್ಲೊಂದು ಕಡೆ ಜೇಡಿಮಣ್ಣಿನ ದಂಡೆ ಅದಕ್ಕೆ ಎದುರಾಗುವವರೆಗೆ. ಆದರೆ ಜೇಡಿಮಣ್ಣಿನ ದಂಡೆಯನ್ನು ದಾಟುವಾಗ ಕೋಣ ಹುಲಿಯ ಹಿಡಿತ ತಪ್ಪಿ, ಕೆಳಕ್ಕೆ ಜಾರಿಬಿಟ್ಟಿದೆ. ಹುಲಿಗಿಂತ ಮುಂಚಿತವಾಗಿ ಅದು ಮತ್ತೆ ನೆಲ ತಲುಪಿದೆ.



ಅಕ್ಕಪಕ್ಕದಲ್ಲಿ ಇಳಿದುಹೋಗುವುದು ಸಾಧ್ಯವೇ ಇರಲಿಲ್ಲ, ಆಳವಾದ ಪ್ರಪಾತಗಳು, ಕಡಿದಾದ ಕೋಡುಗಲ್ಲುಗಳು, ದಟ್ಟವಾದ ಪೊದೆ, ಕುರುಚಲುಕಾಡು, ಎತ್ತರವಾದ ಮರಗಳಿಂದಾವೃತವಾದ ಸುತ್ತಮುತ್ತಲ ಇಳಿಜಾರಿನಲ್ಲಿ ಇಳಿಯುವುದು ಆತ್ಮಹತ್ಯೆಯ ವಿಕಾರ ಪ್ರಯತ್ನವಾಗುತ್ತಿತ್ತು, ಇನ್ನು ಆ ಮೃತ್ಯುರೂಪದಂತಿರುವ ಬಂಡೆಯ ಮೇಲಕ್ಕೆ ಹತ್ತಿ ಹುಲಿಯನ್ನು ಒಂದು ಕೈ ನೋಡೇಬಿಡೋಣ ಎಂದರೆ ಬೆಳಕು ಹೆಚ್ಚೆಂದರೆ ಇನ್ನು ಕೆಲವೇ ನಿಮಿಷಗಳಲ್ಲಿ ಕಳೆದು ಹೋಗುತ್ತಿತ್ತು, ಆಮೇಲೆ? ಒಟ್ಟಾರೆ ಈ ದಾರಿಯಿಂದ ಕದಲುವುದು ಅಕಾಲಿಕ ಸಾವಿಗೆ ಸಮನಾಗಿತ್ತು, ನಿಧಾನವಾಗಿ ನನ್ನ ರೈಫಲ್ಲಿನ ಸೇಫ್ಟಿ ಕ್ಯಾಚನ್ನು ತೆಗೆದು, ಬಂದೂಕವನ್ನು ಸಿದ್ಧವಾಗಿಸಿ ಹೆಗಲ ಮೇಲಿಟ್ಟುಕೊಂಡು, ಅತ್ತಿತ್ತ ಎಚ್ಚರದಿಂದ ನೋಡುತ್ತಾ.... ಆ ಬಂಡೆಯ ಚಾಚನ್ನು ದಾಟುವ ನಿರ್ಧಾರದೊಂದಿಗೆ ಮುಂದುವರಿದೆ.

ಈ ಕೋಡುಗಲ್ಲಿನ ಬಳಿ ರಸ್ತೆ ಎಂಟು ಅಡಿಗಳಷ್ಟು ಅಗಲವಾಗಿತ್ತು, ಅದರ ಇನ್ನೊಂದು ಅಂಚು ಪ್ರಪಾತಕ್ಕೆ ಅಂಟಿಕೊಂಡಿತ್ತು, ನಾನು ನಡಿಗೆಯನ್ನು ಆರಂಭಿಸಿದೆ. ಒಂದೊಂದೇ ಹೆಜ್ಜೆ... ಏಡಿಯಾಯಂತೆ ನಿಧಾನವಾಗಿ..... ಅಳೆದು ತೂಗಿ... ಒಂದು ಹೆಜ್ಜೆಯನ್ನು ಎತ್ತಿ ಅದನ್ನು ಮತ್ತೆ ನೆಲದ ಮೇಲೂರುವ ನಡುವೆ ತಿಲಮಾತ್ರದ ಶಬ್ದವಾಗದಂತೆ ಎಚ್ಚರ ವಹಿಸಿದ್ದೆ, ಪ್ರಗತಿ ತುಂಬಾ ನಿಧಾನವಾಗಿತ್ತು, ಹಾಗೆ ಮಾಡುತ್ತಾ... ಮಾಡುತ್ತಾ... ಕೋಡುಗಲ್ಲಿನ ಕೆಳಕ್ಕೆ ಬಂದುಬಿಟ್ಟೆ, ಹುಲಿ ಎಲ್ಲಿ ಅಡಿತ್ತೋ ಅಲ್ಲೇ ಇತ್ತು. ಇತ್ತಲಿಂದ ನೋಡಿದರೆ ಅದು ಮಲಗಿರುವುದು ಕಾಣುತ್ತಿತ್ತು. ಆದರೆ ನನ್ನನ್ನು ಹಿಡಿಯುವಲ್ಲಿ ಅದು ವಿಫಲವಾಗಿತ್ತು, ನಾನು ಆ ಬಂಡೆಯ ದುಃಸ್ವಪ್ನದಿಂದ ಪೂರ್ತಿ ಹೊರಬಂದಾದ ಮೇಲೆ ಹುಲಿ ಸಣ್ಣದಾಗಿ ಗುರುಗುಟ್ಟಿದ್ದು ಕೇಳಿಸಿತು. ಅದರ ಹಿಂದೆಯೇ ಜಿಂಕೆಗಳ ಕೂಗು, ಅದಾದ ಸ್ವಲ್ಪ ಹೊತ್ತಿನಲ್ಲಿ ತ್ರಿಕೋನಾಕಾರದ ಬೆಟ್ಟದ ಕಡೆಯಿಂದ ಎರಡು ಸಾರಂಗಗಳು ಜೀವ ಹೋಗುವಂತೆ ಕೂಗಿಕೊಳ್ಳುತ್ತಾ ಓಡಿಹೋದವು.

ಹುಲಿಯಂತೆಯೇ ಇಂದು ನನ್ನ ಅದೃಷ್ಟ ಸಹ ಚೆನ್ನಾಗಿತ್ತು, ಹಾಗಾಗಿಯೇ ನಾನು ಇಲ್ಲಿದ್ದೇನೆ. ಇದಕ್ಕಾಗಿ ವಿಷಾದಿಸುವ ಅಗತ್ಯವಿಲ್ಲ, ಹುಲಿ ಇಲ್ಲಿಂದ ಹೊರಟು ಬೆಟ್ಟದತ್ತ ಸಾಗುತ್ತಿದೆ ಎಂದು ಸಾರಂಗಗಳು ನೀಡುತ್ತಿರುವ ಸೂಚನೆಗಳನ್ನು ಕೇಳುತ್ತಿದ್ದೇನೆ. ಹಾಗೇ ನಾನು ಹೊಂಡದ ಬಳಿ ಕಟ್ಟಿರುವ ಕೋಣದ ಕೊರಳಿನ ಗಂಟೆಯ ಸದ್ದು ಹುಲಿಗೂ ಕೇಳಲಿ ಎಂದು ಆಶಿಸಿದ್ದೇನೆ. ಯಾರಿಗೆ ಗೊತ್ತು ನಾಳೆ ಏನಾಗುತ್ತದೆ ಎಂದು?. ಹೀಗೇ... ಯೋಚಿಸುತ್ತಾ ನಾನು ಕೃಷಿ ಭೂಮಿಯ ಅಂಚನ್ನು ತಲುಪಿದಾಗ ಅಲ್ಲಿ ನಮ್ಮವರೊಂದಿಗೆ ಹಳ್ಳಿಗರೂ ನನಗಾಗಿ ಕಾದು ನಿಂತಿದ್ದರು. ಹುಲಿ ನನ್ನ ಕಣ್ಣಿಗೆ ಬೀಳದಿರುವುದರ ಬಗ್ಗೆ ಸಖೇದಾಶ್ಚರ್ಯಗೊಂಡರು. ಆದರೆ 'ನನಗೆ ನಾಳೆಯ ಬಗ್ಗೆ ಅಪಾರ ಭರವಸೆ ಇದೆ' ಎಂದಾಗ ಖುಷಿಗೊಂಡರು.

ಗಂಟಲಕೆರೆತಕ್ಕೆ ಲಂಗೂರದ ಮದ್ದು

ಅಂದು ರಾತ್ರಿ ಇಡೀ ಪ್ರದೇಶದಲ್ಲಿ ಧೂಳಿನ ಚಂಡಮಾರುತವೆದ್ದಿತು. ಅದನ್ನು ಹಿಂಬಾಲಿಸಿ ರಭಸವಾದ ಮಳೆಯೂ ಆರಂಭವಾಯಿತು. ಇದರಿಂದ ನಾನು ತುಂಬಾ ತೊಂದರೆಗೊಳಗಾದೆ. ನಮ್ಮ ಗುಡಿಸಲು ಕಂಡಲ್ಲೆಲ್ಲಾ ಸೋರುತ್ತಿತ್ತು, ಅತ್ತ ಇತ್ತ ಜಾಗ ಬದಲಿಸುವುದೇ ದೊಡ್ಡ ಕೆಲಸವಾಯಿತು. ಕೊನೆಗೊಮ್ಮೆ ಕಡಿಮೆ ಸೋರುವ ಜಾಗವನ್ನು ಹುಡುಕಿಕೊಂಡು ಮಲಗಿದಾಗ ಮಧ್ಯರಾತ್ರಿ ಮೀರಿತ್ತು, ಬೆಳಿಗ್ಗೆ ಹೊರಬಂದಾಗ ಮನಸ್ಸು ಉಲ್ಲಾಸದಿಂದ ಅರಳಿತು. ಅದೊಂದು ಉಜ್ವಲವಾದ ಮುಂಜಾನೆ. ವಾತಾವರಣ ತೊಳೆದಿಟ್ಟಂತೆ ಶುಭ್ರವಾಗಿತ್ತು, ರಾತ್ರಿ ಸುರಿದ ಮಳೆ ಧೂಳು-ಸೊಗೆಗಳನ್ನೆಲ್ಲಾ ತೊಳೆದುಕೊಂಡು ಹೋಗಿತ್ತು, ಸೂರ್ಯನ ಎಳೆಯ ಬೆಳಕಿಗೆ ಒಂದೊಂದೂ ಎಲೆಯ ಅಂಚುಗಳು ಥಳಥಳಿಸುತ್ತಿದ್ದವು.

ಈವರೆಗೂ ಪ್ರತಿದಿನ ಹತ್ತಿರದಲ್ಲಿದ್ದ ಕೋಣದ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು ಬರಲು ಮೊದಲು ಹೋಗುತ್ತಿದ್ದೆ. ಇಂದು ಅದನ್ನು ಬದಲಿಸಿ, ನಮ್ಮವರಿಗೆ ಇನ್ನೂ ಸ್ವಲ್ಪ ಸಮಯದ ನಂತರ ಇಲ್ಲಿನ ಕೋಣಕ್ಕೆ ಹುಲ್ಲುನೀರು ನೋಡಿಕೊಂಡು ಬರಲು ಸೂಚಿಸಿ, ಮೊದಲು ಹೊಂಡದ ಬಳಿ ಇರುವ ಕೋಣವನ್ನು ನೋಡಿಕೊಂಡು ಬರಲು ಹೊರಟೆ. ಇದಕ್ಕೂ ಮೊದಲು ನನ್ನ 450/400 ರೈಫಲ್ಲನ್ನು ಸ್ವಚ್ಛಗೊಳಿಸಿ, ಆಯಿಲಿಂಗ್ ಮಾಡಿದೆ. ಇದೊಂದು ಸಮರ್ಥವಾದ ನಂಬಿಕೆಗೆ ಅರ್ಹವಾದ ಬಂದೂಕವಾಗಿತ್ತು, ಎಲ್ಲದಕ್ಕೂ ಸಿದ್ಧವಾಗಿದ್ದ ಅದನ್ನು ಕೈಯಲ್ಲಿ ಹಿಡಿದು ಉತ್ಸಾಹದಿಂದ ಚಕ್ಕಕಲ್ ರಸ್ತೆಗಿಳಿದೆ.

ನಿನ್ನೆ ನನ್ನಲ್ಲಿ ಇನ್ನಿಲ್ಲದ ಭೀತಿ ಹುಟ್ಟಿಸಿದ್ದ ಆ ಕೋಡುಗಲ್ಲು ಇಂದು ನಿರ್ಲಿಪ್ತವಾಗಿ ಮಲಗಿತ್ತು, ಸಾವಕಾಶವಾಗಿ ಆ ಬಂಡೆಯ ಅಡಿಯಿಂದ ಹಾದು

ಶೂನ್ಯವಾದವಳು
(ಕಾದಂಬರಿ)
ಮೂಲ: ನವಲ್ ಎಲ್ ಸಾದವಿ
ಕನ್ನಡಕ್ಕೆ : ಡಾ.ವೆಂ.ವನಜ
ಮಾನಸ ಪ್ರಕಾಶನ,
ಬೆಂಗಳೂರು 560026
ಪ್ರಥಮ ಮುದ್ರಣ: 2006
ಬೆಲೆ: 50 ರೂಪಾಯಿಗಳು

ಟುಂಬಿಕ ದೌರ್ಜನ್ಯ ಮತ್ತು ಲೈಂಗಿಕ ಕ್ರೌರ್ಯಗಳನ್ನು ಾಜಿಕ ಹೋರಾಟದ ಭಾಗವಾಗಿ ಎದುರಿಸುವ ಒಂದು ನೆಲೆಯಾದರೆ, ಅವುಗಳನ್ನು ಸಾಹಿತ್ಯ ಸೃಷ್ಟಿಗೆ ದಿಸುವ ಬಗೆ ಇನ್ನೊಂದು ಆಯಾಮವನ್ನು ುಕೊಳ್ಳುತ್ತದೆ. ಕನ್ನಡ ಸಾಹಿತ್ಯದಲ್ಲಿ ದಲಿತ-ಬಂಡಾಯ ರಾಟದ ಭಾಗವಾಗಿ ಬಂದ ಕಥನಗಳಲ್ಲಿ ಮಹಿಳೆಯರ ಲಿನ ಲೈಂಗಿಕ ದೌರ್ಜನ್ಯಗಳ ಮಸ್ತುವೇನೋ ಸಾಕಷ್ಟಿದೆ. ೆ ಅಲ್ಲಿನ ಶೋಷಕರು ಊಳಿಗಮಾನ್ಯ ಪುರೋಹಿತ ಇಲ್ಲವೇ ಅಧಿಕಾರಶಾಹಿ ವರ್ಗದವರಾಗಿದ್ದಾರೆ. ದ ಕೃತಿಗಳು 'ಶೂನ್ಯವಾದವಳು' ಕಾದಂಬರಿ ನೀಡುವ ುಂಬಿಕ ದೌರ್ಜನ್ಯದ ಸಂಕೀರ್ಣ ಮುಖಗಳನ್ನು ದಿಡುವ ಪ್ರಯತ್ನ ಮಾಡಿದ್ದು ಅತಿವಿರಳ.

ನಿರೂಪಕಿ ಮತ್ತು ಕಥಾನಾಯಕಿ ಫಿರ್ದೋಸಳ ನಡುವೆ ುವ ಸಂಬಂಧ ಕಾದಂಬರಿಯ ಮುಖ್ಯ ತಿರುವಾಗಿದೆ. ರೊಂದಿಗೂ ಸಂಪರ್ಕ ಬೆಳೆಸಲು ಇಚ್ಛಿಸದ ಫಿರ್ದೋಸಳ ತ್ವವೇ ನಿರೂಪಕಿಯನ್ನು ಇನ್ನಿಲ್ಲದಂತೆ ಕಾಡುತ್ತದೆ ಮತ್ತು ಳ ಭೇಟಿಗೆ ತಹತಹಿಸುವಂತೆ ಮಾಡುತ್ತದೆ. ನಿರೂಪಕಿ ಾನ್ಯ ವ್ಯಕ್ತಿಯಲ್ಲ; ಜೈಲಿನ ವಿಚಾರಣಾಧೀನ ಕೈದಿಗಳ ತ್ವವನ್ನು ಅಧ್ಯಯನ ಮಾಡುತ್ತಿದ್ದ ಮನೋವೈದ್ಯೆ. ೋರ್ಸ್ ತನ್ನ ಭೇಟಿಗೆ ನಿರಾಕರಿಸಿದಂತೆಲ್ಲ ನಿರೂಪಕಿ ಲ್ಲಿ ವಿಚಿತ್ರ ತಲ್ಲಣ ಹುಟ್ಟಿಕೊಳ್ಳುತ್ತದೆ. 'ಆ ಹೆಣ್ಣೇ ಿಂತ ವಾಸಿಯೇನೋ' ಎನಿಸುವಂತೆ ಮತ್ತು 'ಅವಳಿಗೆ ಲಿಸಿದರೆ ನಾನೇನೂ ಆಗಿರಲಿಲ್ಲ, ನೆಲದ ಮೇಲೆ ುವ ಲಕ್ಷಾಂತರ ಕೀಟಗಳಲ್ಲಿ ನಾನೊಂದು ಸಣ್ಣ ವಾಗಿದ್ದೆ' (ಪುಟ ೩) ಎಂಬ ಕೀಳರಿಮೆಯನ್ನು ಹುಟ್ಟು ುತ್ತದೆ; ನಿರೂಪಕಿಯಲ್ಲಿ ಅಸಹಾಯಕತೆ ಮತ್ತು ತ್ರೆಗಳ ಭಾವನೆಯನ್ನು ಮೂಡಿಸಿ, ಅವಳ ಅಸ್ವಸ್ಥತೆಗೆ ಣವಾಗುತ್ತದೆ. ಎಂದರೆ ಫಿರ್ದೋಸಳ ನಿರಾಕರಣೆ ೂಪಕಿಯನ್ನು 'ಸ್ವ'ದ ಕುರಿತು ಯೋಚಿಸಹಚ್ಚುತ್ತದೆ. ನೆಗೂ ಫಿರ್ದೋಸಳ ಭೇಟಿಯಾಗಿ, ಅವಳ ಆತ್ಮಕಥನವನ್ನು ಕೇಳಿದಾಗ "ತಾನು ಹೇದಿ ಆಕೆ ಧೈರ್ಯಶಾಲಿ" (ಪುಟ ೮೮) ಎಂದು ಉದ್ಗರಿಸುವಂತೆ ಮಾಡುತ್ತದೆ.

ತಾನು ಹೇಳುತ್ತಿರುವುದು ಖೈದಿಯೋರ್ವಳ ನಿಜಕಥನವನ್ನು ಎಂಬುದು ನಿರೂಪಕಿಯ ಮಾತುಗಳಿಂದ ತಿಳಿದುಬರುತ್ತದೆ. ಕಾದಂಬರಿಯ ಯಶಸ್ಸು ಖೈದಿಯ ಅಂತರಂಗವನ್ನು ನಿರೂಪಕಿ ತಾದಾತ್ಮ್ಯದಿಂದ ನಿರೂಪಿಸಿದ ಕ್ರಮದಲ್ಲಿದೆ. ಫಿರ್ದೋಸಳ ನೋವು, ಹತಾಶೆ, ಭಯ, ಪ್ರೀತಿ, ಸಹಾನುಭೂತಿ ಹೀಗೆ ಭಾವಾವೇಶಗಳೆಲ್ಲ ಅವಳು ಎದುರಿರುವವರ ಕಣ್ಣುಗಳನ್ನು ಓದುವ ಮೂಲಕ ಅನಾವರಣಗೊಳ್ಳುತ್ತವೆ. ಈ ತಂತ್ರ ಕಾದಂಬರಿಯ ಹಲವೆಡೆ ಮತ್ತೆಮತ್ತೆ ಬಳಕೆಯಾಗಿದೆ. ನಿದರ್ಶನಕ್ಕೆ ತನ್ನ ತಾಯಿಯ ಕಣ್ಣುಗಳ ಕುರಿತು ಹೀಗೆ ಹೇಳುತ್ತಾಳೆ, "ನನಗೆ ಆವಳ ಎರಡು ಕಣ್ಣುಗಳು ಮಾತ್ರ ನೆನಪಿದ್ದವು. . . ನಾನು ಅವುಗಳನ್ನು, ಅವು ನನ್ನನ್ನು ಗಮನಿಸುತ್ತಿದ್ದವು. ನಾನೊಂದು ವೇಳೆ ಅವುಗಳ ದೃಷ್ಟಿಯಿಂದ ದೂರವಾಗಿದ್ದರೂ ಅವು ನನ್ನನ್ನು ನೋಡಬಹುದಾಗಿತ್ತು, ನಾನು ನಡೆಯಲು ಕಲಿಯುವಾಗ ಎಡವಿ ಬೀಳಬಹುದಾದ ನನ್ನನ್ನು ಹಿಡಿದೆತ್ತಲೆನ್ನುವಂತೆ ಅವು ನನ್ನನ್ನು ಹಿಂಬಾಲಿಸುತ್ತಿದ್ದವು...." (ಪುಟ 11). ಮುಂದೆ ಫಿರ್ದೋಸ್ ತನ್ನ ಸೋದರ ಮಾವನ ಮನೆಯಿಂದ ತಪ್ಪಿಸಿಕೊಂಡು ಬಂದಾಗ ಬೀದಿಯಲ್ಲಿ ಉಂಟಾದ ಭಯ ನಿರೂಪಿತವಾಗಿರುವುದೂ ಕಣ್ಣುಗಳ ಚಿತ್ರಣದಿಂದ. "ಕತ್ತಲಲ್ಲಿ ಇದ್ದಕಿದ್ದಂತೆ ಎರಡು ಕಣ್ಣುಗಳು ಕಂಡವು ಅಥವಾ ಹಾಗನ್ನಿಸಿತು. ಅವು ನಿಧಾನವಾಗಿ ಹತ್ತಿರ ಮತ್ತಷ್ಟು ಹತ್ತಿರವಾಗುತ್ತಿದ್ದವು. ಅವುಗಳ ನೋಟ ನಿಧಾನವಾಗಿ ನನ್ನ ಶೂಗಳ ಮೇಲೆ ಹರಿದು ಒಂದು ಕ್ಷಣ ಅಲ್ಲೇ ನೆಟ್ಟವು. ಮರುಕ್ಷಣವೇ ಅಲ್ಲಿಂದ ನಿಧಾನವಾಗಿ ಕಾಲು, ತೊಡೆ, ಹೊಟ್ಟೆ, ಮೊಲೆ ಮತ್ತು ಕುತ್ತಿಗೆಗಳ ಮೇಲೆ ಹರಿದು ಕೊನೆಗೆ ಅಲ್ಲೇ ನೆಟ್ಟವು. ಅದೇ ಕ್ರೂರ ಉದ್ದೇಶದಿಂದ ಕಣ್ಣುಗಳಲ್ಲಿ ಸ್ಥಿರವಾಗಿ ಬೆಸೆದುಕೊಂಡವು" (ಪುಟ 32). ವಾಸ್ತವದಲ್ಲಿ ಹೀಗೆ ಫಿರ್ದೋಸಳನ್ನು ಭೀತಳನ್ನಾಗಿಸುವ ಆ ಕಣ್ಣುಗಳು ಎದುರಿನ ವ್ಯಕ್ತಿಯದೋ ಅಥವಾ ಆಕೆಯದೋ ಆಂತರಿಕ ಭಯದ್ದೋ ಎಂಬುದು ಕಾದಂಬರಿಯಲ್ಲಿ ಅಸ್ಪಷ್ಟವಾಗಿದೆ. ಇಂತಹ ಹಲವು ಸಂದರ್ಭಗಳಲ್ಲಿ ಎದುರಿನ ವ್ಯಕ್ತಿಯ ಕಣ್ಣುಗಳು ಅವಳನ್ನು ಹಿಂಸಿಸಿದ, ನೋಯಿಸಿದ, ಸಾಂತ್ವನಗೈಯ್ದ ವಿವರಗಳನ್ನು ಕಾದಂಬರಿ ತಿಳಿಸುತ್ತದೆ. ಈಗಾಗಲೇ ಹೇಳಿದಂತೆ ನಿರೂಪಕಿ ಕಥಾನಾಯಕಿಯ ಕಥನವನ್ನು ಅತ್ಯಂತ ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಇಂಥ ಚಿತ್ರಣಗಳಿಂದ ಮುಟ್ಟಿಸಿದ್ದಾಳೆ.



NAWAL EL SAADAWI

ವೇಶ್ಯೆ ಮತ್ತು ಗೃಹಿಣಿಯರ ಬದುಕನ್ನು ಫಿರ್ದೋಸ್ ಕಟ್ಟಿಕೊಡುವ ಬಗೆ ಹೀಗಿದೆ. "ವೇಶ್ಯೆ ತನ್ನ ಬದುಕನ್ನು ಕಳೆದುಕೊಳ್ಳಲು ಹೆದರುವುದಕ್ಕಿಂತ ಹೆಚ್ಚಾಗಿ ಒಬ್ಬ ಹೆಣ್ಣು ತನ್ನ ನೌಕರಿಯನ್ನು ಕಳೆದುಕೊಳ್ಳಲು ಹೆದರುತ್ತಾಳೆಂದು ತಿಳಿದುಕೊಂಡೆ. ಆದರೆ ಒಬ್ಬ ವೇಶ್ಯೆಯ ಬದುಕು ತನ್ನ ಬದುಕಿಗಿಂತ ಉತ್ತಮವಾಗಿರುತ್ತದೆಂದು ಅವಳಿಗೆ ತಿಳಿದಿರುವುದಿಲ್ಲ, ಆದುದರಿಂದಲೇ. . . . ಅತ್ಯಂತ ಕಡಿಮೆ ಬೆಲೆಯ ವಸ್ತುಗಳಿಗೆ ಗರಿಷ್ಠ ಬೆಲೆಯನ್ನು ತೆರುತ್ತಿರುತ್ತಾಳೆ. ಬೇರೆ ಬೇರೆ ಬೆಲೆಗಳಲ್ಲಿ ತಮ್ಮನ್ನು ತಾವು ಮಾರಿಕೊಳ್ಳುವ ನಾವೆಲ್ಲರೂ ವೇಶ್ಯೆಯರೇ" (ಪುಟ 62-63) ಎಂಬ ಫಿರ್ದೋಸಳ ಚಿಂತನೆ, ಇಡೀ ಮಹಿಳಾ ಲೋಕದ ಅಸ್ಮಿತೆಯ ಕುರಿತು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆ. ಗೃಹಿಣಿಯೂ ಜೀವನ ನಿರ್ವಹಣೆಗೆ ತನ್ನ ಲೈಂಗಿಕತೆಯನ್ನು ಮಾರಾಟ ಮಾಡುವವಳೇ ಎಂಬ ಸತ್ಯವು ಧರ್ಮ ಮತ್ತು ಸಾಮಾಜಿಕ ಬದ್ಧತೆ ಎಂಬ ಕುರುಡುಪಟ್ಟಿಯನ್ನು ಕಟ್ಟಿಕೊಂಡವರ ಗಮನಕ್ಕೆ ಬರುವುದಿಲ್ಲ ಅಷ್ಟೆ.

ಕೊನೆಯದಾಗಿ, 'ಶೂನ್ಯವಾದವಳು' ಕಾದಂಬರಿ ಓದಬೇಕಾದ ಕಾದಂಬರಿ. ವೆಂ.ವನಜ ಅವರು ಮಾಡಿರುವ ಅನುವಾದ ತುಂಬ ಸೃಜನಶೀಲವಾಗಿದೆ. ಭಾಷೆಯ ಬಳಕೆ ಮತ್ತು ನಿರ್ವಹಣೆ, ಅದೊಂದು ಅನುವಾದ ಕಾದಂಬರಿ ಎಂಬುದನ್ನು ಎಲ್ಲೂ ನೆನಪಿಸುವುದಿಲ್ಲ. 'ಇದೊಂದು ಮುಸ್ಲಿಂ ಸಮುದಾಯದ ಕಥೆ, ಹೀಗಾಗಿ ಇದನ್ನು ಓದುಗರು ಹೇಗೆ ಸ್ವೀಕರಿಸಿಯಾರೋ' ಎಂಬ ಅಳುಕು ಅನುವಾದಕಿಗೆ ಇದ್ದಂತಿದೆ. ಅದು ಅರ್ಥಹೀನ. ಅಲ್ಲಿಯ ಹೆಸರುಗಳನ್ನು ಬದಲಾಯಿಸಿದರೂ, ಆದಲುಬದಲು ಮಾಡಿದರೂ ಕಥನ ಹೇಳಬಯಸುವ ಸಂಗತಿಗಳು ಬದಲಾಗಲಾರವು. ಇಂಗ್ಲಿಷ್ ಮೂಲದ ಪಠ್ಯವನ್ನು ಕನ್ನಡದ ಓದುಗರಿಗೆ ನೀಡುವ ಮೂಲಕ ಈಜಿಪ್ಶಿಯನ್ ಲೇಖಕಿ ಮತ್ತು ಅವಳ ಚಿಂತನೆಗಳನ್ನು ಪರಿಚಯಿಸಿದ ವೆಂ.ವನಜ ಅವರು ಅಭಿನಂದನಾರ್ಹರು.

–ಡಾ.ಸಬಿಹಾ ಭೂಮೀಗೌಡ



ಶಿಕಾರಿ ಜಿಮ್ ಕಾರ್ಬೆಟ್‌ನ ಕಥನಗಳು

ಮೋಹನ್ನಾಡ ನರಭಕ್ಷಕ

ಂದುವರಿಯುತ್ತಾ ಹುಲಿಯ ಕುರುಹುಗಳಿಗಾಗಿ ಡುಕತೊಡಗಿದೆ. ರಾತ್ರಿ ಮಳೆ ಬಿದ್ದಿದ್ದರಿಂದ ಮಣ್ಣು ೃದುವಾಗಿತ್ತು. ಹೀಗಿದ್ದರೂ ನಾನು ಹೊಂಡ ುಪುವವರೆಗೂ ಯಾವ ಗುರುತುಗಳೂ ಕಾಣಲಿಲ್ಲ. ರೆ ಹೊಂಡದ ಆಚೆ ಬದಿಗಿದ್ದ ಮೆತು ಮಣ್ಣಿನಲ್ಲಿ ಲಿಯ ಹೆಜ್ಜೆ ಗುರುತುಗಳು ಮೂಡಿದ್ದವು. ಗಾಳಿಗಿಂತ ಮುಂಚೆ ಮತ್ತು ಬರುಗಾಳಿಯ ನಂತರ ೂಡಿದ್ದ ಹೆಜ್ಜೆ ಗುರುತುಗಳನ್ನು ಸ್ಪಷ್ಟವಾಗಿ ುತಿಸಬಹುದಿತ್ತು. ಬರುಗಾಳಿಗೆ ಮುಂಚೆ ಅದು ಅಲ್ಲಿಗೆ ದು, ಅದು ನಿಂತ ಮೇಲೆ ಕೋಣವನ್ನು ಕಟ್ಟಿದ ವೆಯತ್ತ ಹೋಗಿತ್ತು. ನನ್ನ ಸಮೀಪದಲ್ಲಿ ಸುಮಾರು ೂರಡಿ ಎತ್ತರದ ಕಲ್ಲೊಂದು ಬಿದ್ದಿತ್ತು. ರಸ್ತೆ ಬದಿಯಲ್ಲಿದ್ದ ನ್ನು ಈ ಹಿಂದೆ ನಾನೇ ಎತ್ತಿ ತಂದು ಇಲ್ಲಿ ಹಾಕಿದ್ದೆ. ರ ಮೇಲೆ ಹತ್ತಿನಿಂತು ನೋಡಿದರೆ ಇಲ್ಲಿಂದ ನಲವತ್ತು . ದೂರದಲ್ಲಿದ್ದ ಕೋಣ ಕಾಣುತ್ತಿತ್ತು. ಕಲ್ಲನ್ನು ಹತ್ತಿ ಾನವಾಗಿ ಮೇಲೆದ್ದು, ಇಂಚಿಂಚಾಗಿ ತಲೆ ಎತ್ತರಿಸುತ್ತಾ ತೆ. ಓಹ್.... ಕೋಣ.... ನಾಪತ್ತೆ. ಈ ಅನ್ವೇಷಣೆ ್ನನ್ನು ಉದ್ವೇಗಕ್ಕೀಡುಮಾಡಿತ್ತು. ಈ ದ್ವೇಗಾನಂದಗಳನ್ನು ಈಗ ವಿವರಿಸಲು ಸಾಧ್ಯವಿಲ್ಲ. ರೆ ಹುಲಿ ಕೋಣವನ್ನು ಅಲ್ಲಿಂದ ಎಳೆದುಕೊಂಡು ೋಗದಿರಲಿ ಎಂದು ನಾನು ಹಗ್ಗವನ್ನು ಹಲವು ರಗಳಲ್ಲಿ ಹೊಸೆದು ಕಟ್ಟಿದ್ದೆ ಅದು ನನ್ನ ನಿರೀಕ್ಷೆಯನ್ನೂ ೀರಿ ಎಲ್ಲೋ ರಾತ್ರಿಗೆ ಗೊತ್ತು ಕೂರಲು ್ಯವಿಲ್ಲದಂತಹ ಜಾಗಕ್ಕೆ ಕೋಣವನ್ನು ಎಳೆದುಕೊಂಡು ೋಗಿರಬಹುದು ಎಂಬ ಸಂದೇಹ ಹುಟ್ಟಿತು. ಒಂದು ಅದು ಇಲ್ಲೇ ಬಿಟ್ಟಿದ್ದರೂ ರಾತ್ರಿಗೆ ಗೊತ್ತುಕೂರುವ ಯದಲ್ಲಿ ನನ್ನ ಗಂಟಲಿನ ಮೇಲೆ ನನಗೇ ಭರವಸೆ ಲಿಲ್ಲ, ಆ ಮಾತು ಬೇರೆ.

ನಾನು ತೊಟ್ಟಿದ್ದ ರಬ್ಬರ್ ಅಟ್ಟೆಯ ಬೂಟುಗಳು ್ಬ ನಡಿಗೆಗೆ ಹೇಳಿ ಮಾಡಿಸಿದಂತಿದ್ದವು. ಹಾಗೇ ಗರೂಕತೆಯಿಂದ, ಸಾವಧಾನವಾಗಿ ಕೋಣವನ್ನು ್ದ ಗಿಡದ ಬಳಿಗೆ ಬಂದೆ. ಹುಲಿ ಬಿರುಗಾಳಿ ಂಭವಾಗುವುದಕ್ಕೆ ಮುಂಚೆಯೇ ಕೋಣವನ್ನು ಂದಿತ್ತು, ಆದರೆ ಮಳೆ ನಿಂತಮೇಲೆ ಅಲ್ಲಿಂದ ಸಾಗಿಸಿತ್ತು ು ಹಲವು ಎಳೆಗಳಲ್ಲಿ ಹೊಸೆದು ಕಟ್ಟಿದ್ದ ಹಗ್ಗವನ್ನು ದು ತುಂಡುಮಾಡಿತ್ತು, ಸಾಮಾನ್ಯವಾಗಿ ಹುಲಿಗಳು ಗೆ ಮಾಡುವುದಿಲ್ಲ, ಅವು ಎಳೆಯುವ ರಭಸಕ್ಕೇ ತುಂಡಾಗಿ ಹೋಗುತ್ತದೆ. ಆದರೆ ಈ ಹುಲಿ ಹೀಗೆ ದಿತ್ತು, ಕೋಣವನ್ನು ಇಲ್ಲಿ ತಿನ್ನುವ ಪ್ರಯತ್ನ ದಿರಲಿಲ್ಲ, ಅದನ್ನು ಮೋಹನದ ಕಡೆಗೆ ಮುಖ ದಿದ್ದ ಬೆಟ್ಟದ ಕಡೆಗೆ ಎಳೆದುಕೊಂಡು ಹೋಗಿತ್ತು, ಗೆ ಮಾಡುವ ಮೂಲಕ ಅದು ನನ್ನ ತಂತ್ರಗಳನ್ನೆಲ್ಲಾ ಾಯವಾಗಿ ಉಲ್ಟಾ ಹೊಡೆಸಿತ್ತು, ಅದೃಷ್ಟವಶಾತ್ ಯೋಣಾದರೂ ಮಳೆ ಬಾರದೇ ಹೋಗಿದ್ದಲ್ಲಿ ನಾನು ನಿಸ್ಸಹಾಯಕನಾಗುತ್ತಿದ್ದೆ. ಒಣಗಿದ ನೆಲದಲ್ಲಿ ಆ ಬೆಟ್ಟದ ದಾರಿಯಲ್ಲಿ ಜಾಡು ಹಿಡಿಯುವುದು ಅಷ್ಟು ಸುಲಭವಲ್ಲ. ಮಳೆ ನನ್ನ ಸಹಾಯಕ್ಕೆ ಬಂದಿತ್ತು. ಈ ಕಾರಣದಿಂದ ನೆಲದ ಮೇಲೆ ಹಾಸಿದಂತೆ ಹರಡಿದ್ದ; ಕಾಲಿಟ್ಟರೆ ಪ್ರಳಯವಾದಂತೆ ಮುರುಗುಟ್ಟುತ್ತಿದ್ದ ತರಗೆಲೆಗಳು ಈಗ ನೆಂದು ಮೃದುವಾಗಿಬಿಟ್ಟಿದ್ದವು. ನಾನು ಯಾವ ತಪ್ಪೂ ಮಾಡದೆ ಸಲೀಸಾಗಿ ಹುಲಿಯ ಅಡಗುದಾಣವನ್ನು ಸಮೀಪಿಸಬಹುದಿತ್ತು. ಹುಲಿ ಕೋಣವನ್ನು ಇಲ್ಲಿಂದ ಸಾಗಿಸಲು ಪಟ್ಟಿರುವ ಕಷ್ಟ ನಾನು ಪಡಲಿರುವ ಕಷ್ಟದ ಅನುಪಾತದಲ್ಲಿ ಹೆಚ್ಚೆಂದೇ ಹೇಳಬೇಕು.

ಇಂತಹ ಸಮಯದಲ್ಲಿ ಒಮ್ಮೆ ಕಾಡಿನೊಳಕ್ಕೆ ಪ್ರವೇಶಿಸುವಾಗ ಯಾವುದೇ ಘಳಿಗೆಯಲ್ಲಿ ತುರ್ತಾಗಿ ಗುಂಡು ಹಾರಿಸುವ ಸಂದರ್ಭ ಎದುರಾಗಬಹುದು. ತುರ್ತಿನಲ್ಲಿ ಕುದುರೆ ಎಳೆಯುತ್ತಿದ್ದಂತೆ ಗುಂಡು ಸಿಡಿದು ಹಾರಬೇಕು. ಇದು ಯಾವ ಶಿಕಾರಿಯಲ್ಲಾದರೂ ಸರಿ. ಹಾಗೊಂದು ಪಕ್ಷ ಬಂದೂಕವನ್ನು ಪರೀಕ್ಷಿಸದ ನಮ್ಮ ನಿರ್ಲಕ್ಷ್ಯದಿಂದಾಗಿ ಗುಂಡು ಸಿಡಿಯಲಿಲ್ಲ ಎಂದರೆ ಈ ಬೇಜವಾಬ್ದಾರಿತನಕ್ಕೆ ಕ್ಷಮೆಯೇ ಇರುವುದಿಲ್ಲ, ಜೀವವೇ ಹೋದ ಮೇಲೆ ಕ್ಷಮಿಸುವುದು ಯಾರು? ಯಾರನ್ನು? ಈ ಕಾರಣದಿಂದ ನಾನು ನನ್ನ ರೈಫಲ್ಲನ್ನು ಮತ್ತೊಮ್ಮೆ ಪರೀಕ್ಷಿಸಿಕೊಂಡೆ. ಗುಂಡುಗಳಿರುವುದನ್ನು ಖಚಿತಪಡಿಸಿಕೊಂಡೆ. ಸಿದ್ಧನಾಗಿ 'ಎಳೆತ'ದ ಜಾಡನ್ನು ಹಿಂಬಾಲಿಸಿದೆ.

ಈ 'ಎಳೆತ'ವನ್ನು ಇಂಗ್ಲಿಷ್‌ನಲ್ಲಿ 'ಡ್ರ್ಯಾಗ್' ಎನ್ನುತ್ತಾರೆ. (ಸಾಮಾನ್ಯವಾಗಿ ಶಿಕಾರಿದಾರರು ಒಂದು ಮಾಂಸಾಹಾರಿ ಪ್ರಾಣಿ–ಮುಖ್ಯವಾಗಿ ನರಭಕ್ಷಕಗಳು, ಅದರಲ್ಲೂ ಮುಖ್ಯವಾಗಿ ಹುಲಿಗಳು– ತಾನು ಇನ್ನೊಂದು ಪ್ರಾಣಿಯನ್ನು ಕೊಂದು, ಅದನ್ನು ಕೊಂದ ಜಾಗದಿಂದ ಬೇರೊಂದು ಜಾಗಕ್ಕೆ ಎಳೆದುಕೊಂಡು ಹೋಗುವಾಗ ಮೂಡಿದ ಗುರುತಿಗೆ ಈ 'ಡ್ರ್ಯಾಗ್' ಪಾರಿಭಾಷಿಕ ಪದದಂತೆ ಬಳಕೆಯಾಗುತ್ತದೆ. ಇದನ್ನು ನಾನು ಕನ್ನಡದಲ್ಲಿ 'ಎಳೆತ' ಎಂದು ಬಳಸಿದ್ದೇನೆ) ಅದು ಯಾವುದೇ ದೂರಕ್ಕೆ ತನ್ನ ಶಿಕಾರಿಯನ್ನು ಎಳೆದುಕೊಂಡು ಹೋಗಿರಬಹುದು. ಆದರೆ ಎಲ್ಲಾ ಸಂದರ್ಭದಲ್ಲಿ ಅದು ಎಳೆದುಕೊಂಡೇ ಹೋಗುತ್ತದೆ ಎಂದು ಹೇಳಲಾಗುವುದಿಲ್ಲ, ಅನೇಕ ಬಾರಿ ಅವು ಎತ್ತಿಕೊಂಡು ಹೋಗುತ್ತವೆ.

ಒಮ್ಮೆ ನಾನೇ ಕಂಡಿರುವಂತೆ ಒಂದು ನರಭಕ್ಷಕ ತಾನು ಕೊಂದ, ಪೂರ್ಣಪ್ರಮಾಣಕ್ಕೆ ಬೆಳೆದಿದ್ದ ಹಸುವೊಂದನ್ನು ನಾಲ್ಕು ಮೈಲಿಗಳ ದೂರಕ್ಕೆ ಎತ್ತಿಕೊಂಡು ಹೋಗಿತ್ತು. ಹೀಗೆ ಎತ್ತಿಕೊಂಡು ಹೋಗಲು ಸಾಧ್ಯವಿಲ್ಲದಷ್ಟು ಶಿಕಾರಿ ತೂಕವಾಗಿದ್ದರೆ ಅಥವಾ ತನ್ನ ಶಿಕಾರಿಯ ತೂಕವನ್ನು ಹೊರುವ ಸಾಮರ್ಥ್ಯ ಕೊಂದ ಪ್ರಾಣಿಗಿಲ್ಲದಿದ್ದರೆ ಸಾಮಾನ್ಯವಾಗಿ ಅದು ಎಳೆದುಕೊಂಡು ಹೋಗುತ್ತದೆ. ಇದೂ ಖಚಿತವಲ್ಲ, ಅನೇಕ ಬಾರಿ ಅದು ಆಯಾ ಪ್ರಾಣಿಯ ವೈಯಕ್ತಿಕ ಸ್ವಭಾವವನ್ನು ಆಧರಿಸಿರುತ್ತದೆ. ಹೀಗೆ ಅದು ಎಳೆದುಕೊಂಡು ಹೋದ ಗುರುತು ಸ್ಪಷ್ಟವಾಗಿರಬಹುದು, ಅಥವಾ ಅಸ್ಪಷ್ಟವಾಗಿರಬಹುದು. ಇದೂ ಆ ಶಿಕಾರಿಯ ತೂಕ ಮತ್ತು ಎತ್ತಿಕೊಂಡು ಹೋಗುವ ಸ್ವರೂಪವನ್ನು ಆಧರಿಸಿರುತ್ತದೆ. ಉದಾಹರಣೆಗೆ; ಒಂದು ಹುಲಿ ಒಂದು ಸಾರಂಗವನ್ನು ಕೊಂದು, ಅದನ್ನು ಕುತ್ತಿಗೆಯ ಬಳಿ ಕಚ್ಚಿ ಎತ್ತಿಕೊಂಡು ಹೋಗುತ್ತಿದೆ ಎಂದಾದರೆ ಆ ಸಾರಂಗದ ಅರವತ್ತು ಭಾಗ ನೆಲದಲ್ಲಿ ಎಳೆದುಕೊಂಡು ಹೋಗಿರುತ್ತದೆ, ಹಾಗೇ ಅದರ ಹಿಂಭಾಗವನ್ನು ಕಚ್ಚಿ ಎಳೆದುಕೊಂಡು ಹೋದಾಗಲೂ ಸಹ. ಇಂಥ ಸಮಯದಲ್ಲಿ ಎಳೆತದ ಗುರುತು ಸ್ಪಷ್ಟವಾಗಿ ಮೂಡಿರುತ್ತದೆ. ಆದರೆ ಅದು ಸಾರಂಗದ ನಡುಬೆನ್ನಿಗೆ ಬಾಯಿಹಾಕಿ ಎತ್ತಿಕೊಂಡು ಹೋಗುತ್ತಿದೆ ಎಂದಾದರೆ, ಅನೇಕ ಬಾರಿ ಎರಡೂ ಕಡೆ ಎಳೆತದ ಗುರುತು ಮೂಡಬಹುದು, ಮೂಡದೇ ಇರಬಹುದು. ಇದು ಹುಲಿಯ ಸಾಮರ್ಥ್ಯ, ಸಂದರ್ಭದ ಒತ್ತಡ ಹಾಗೂ ನೆಲದ ಸ್ವಭಾವವನ್ನು ಅವಲಂಬಿಸಿರುತ್ತದೆ.

ಈ ಸಂದರ್ಭದಲ್ಲಿ ಹುಲಿ ಕೋಣದ ಕುತ್ತಿಗೆಯನ್ನು ಕಚ್ಚಿ ಎಳೆದುಕೊಂಡು ಹೋಗಿತ್ತು. ಹಾಗಾಗಿ ಕೋಣದ ಹಿಂಭಾಗ ನೆಲಕ್ಕೆ ಉಜ್ಜಿಕೊಂಡು ಹೋಗಿದೆ. ಈ ಅವಕಾಶದಲ್ಲಿ ಎಳೆತದ ಜಾಡನ್ನು ಹಿಡಿಯುವುದು ಸುಲಭ, ಅದು ನೆಲಕ್ಕೆ ಸಮಾನಾಂತರವಾಗಿರುವವರೆಗೆ. ಕೆಲವು ನೂರು ಗಜಗಳವರೆಗೆ ಹುಲಿ ಬೆಟ್ಟಕ್ಕೆ ಪರ್ಯಾಯವಾಗಿ ಸಾಗುತ್ತಿದ್ದ ರಸ್ತೆಯಲ್ಲಿ ಕೋಣವನ್ನು ಎಳೆದುಕೊಂಡು ಹೋಗಿತ್ತು. ಅಲ್ಲೊಂದು ಕಡೆ ಜೇಡಿಮಣ್ಣಿನ ದಂಡೆ ಅದಕ್ಕೆ ಎದುರಾಗುವವರೆಗೆ. ಆದರೆ ಜೇಡಿಮಣ್ಣಿನ ದಂಡೆಯನ್ನು ದಾಟುವಾಗ ಕೋಣ ಹುಲಿಯ ಹಿಡಿತ ತಪ್ಪಿ ಕೆಳಕ್ಕೆ ಜಾರಿಬಿಟ್ಟಿದೆ. ಹುಲಿಗಿಂತ ಮುಂಚಿತವಾಗಿ ಅದು ಮತ್ತೆ ನೆಲ ತಲುಪಿದೆ. ಹೀಗೆ ಜಾರಿದ ಕೋಣ ಸುಮಾರು 30-40ಜಗಳ ಕೆಳಗಿನವರೆಗೂ ಜಾರಿ ಬಂದಿದೆ. ಅಲ್ಲೊಂದು ಮರ ಅಡ್ಡಾಗಿದ್ದರಿಂದ ಜಾರುವುದು ನಿಂತಿದೆ. ಹುಲಿ ಕೆಳಕ್ಕೆ ಬಂದು ಜಾರಿದ ಕಳೇಬರದ ಮೇಲೆ ಮತ್ತೆ ಹಿಡಿತ ಸಾಧಿಸಿ ಎಳೆದುಕೊಂಡು ಹೋಗಿ ಆ ದಂಡೆಯ ಇನ್ನೊಂದು ಬದಿಗೆ ಹಾಕಿಕೊಂಡಿದೆ.

ಈ ಬಾರಿಯ ಎಳೆತದ ಸಂದರ್ಭದಲ್ಲಿ ಕೋಣದ ಒಂದೇ ಒಂದು ಕಾಲು ಮಾತ್ರ ಅಲ್ಲಲ್ಲಿ ನೆಲಕ್ಕೆ ಸವರಿಕೊಂಡು ಹೋಗಿದೆ. ಈ ಪ್ರದೇಶದಲ್ಲಿ ಜರೀಗಿಡಗಳು ಹಾಸಿದಂತೆ ಬೆಳೆದಿವೆ. ಆದರೆ ಜಾಡು ಹಿಡಿಯುವುದು ಕಷ್ಟವಾಗಿರಲಿಲ್ಲ, ಆದರೆ ಕೋಣ ಹಿಡಿತ ತಪ್ಪಿ ಎತ್ತೆತ್ತಲೋ ಜಾರಿಕೊಂಡು ಹೋದಾಗ ಹುಲಿ ಗೊಂದಲ ಗೊಂಡಿರಬೇಕು. ಹಾಗಾಗಿಯೇ ಎತ್ತ ಕಡೆಗೆ ಎಳೆದುಕೊಂಡು ಹೋಗಬೇಕು ಎಂದು ಅರಿಯದೆ; ಮೊದಲು ನೂರಾರು ಗಜ ಬೆಟ್ಟದ ಮೇಲಕ್ಕೆ ಎಳೆದುಕೊಂಡು ಹೋಗಿ ಮತ್ತೆ ಅದಕ್ಕೆ ಸಮಾನಾಂತರವಾಗಿ ಬಂದ ದಿಕ್ಕಿಗೇ ಎಳೆದುಕೊಂಡು ಬಂದು ಅಲ್ಲಿದ್ದ ಚಿಟ್ಟ ಬಿದಿರಿನ ಮೆಳೆಗಳ ನಡುವೆ ಹಾಕಿದೆ. ಅಲ್ಲಿಂದ ಬೆಟ್ಟಕ್ಕೆ ಓರೆಯಾಗಿ ಕರ್ಣರೇಖೆಯಂತೆ ಬೆಳೆದಿದ್ದ ಬಿದಿರು ಮೆಳೆಗಳ ಮಧ್ಯದಿಂದ ಕೋಣವನ್ನು ಸಾಗಿಸಿ ಕೆಲವು ನೂರು ಗಜಗಳಷ್ಟು ಮುಂದುವರೆದಿದೆ. ಅಷ್ಟರಲ್ಲಿ ನೆಲಕ್ಕೆ ಚಿಡ್ಡಿಹಾಕಿದಂತೆ ದೊಡ್ಡ ಬಂಡೆಯೊಂದು ಎದುರಾಗಿದೆ. ಇದು ನೆಲದಿಂದ ದುತ್ತನೆ ಆರು ಅಡಿಗಳಷ್ಟು ಎದ್ದಿದ್ದು, ಏರುವಿಕೆಯನ್ನು ಪ್ರತಿಬಂಧಿಸಿದೆ. ಆದರೂ ಅಲ್ಲಿ ಕೋಣದ ಕಳೇಬರ ಇಲ್ಲ, ಬೇರೆಡೆಗೆ ಎಳೆದ ಗುರುತೂ ಇಲ್ಲ. ಈ ಬಂಡೆ ಹಾಗೇ ಸುಮಾರು ಇಪ್ಪತ್ತು ಅಡಿಗಳಷ್ಟು ಚಿಮ್ಮಿದಂತೆ ಎದುರು ದಿಕ್ಕಿನತ್ತ ಮುಂಚಾಚಿಕೊಂಡಿದೆ.

ಈ ಕಲ್ಲಿನ ಮೇಲ್ತುದಿಯಿಂದ ಆ ಬದಿಯ ನೆಲದವರೆಗಿನ ಭಾಗದಲ್ಲಿ ಟೊಳ್ಳಿದ್ದು, ಅಲ್ಲೊಂದು ಗುಹೆ ನಿರ್ಮಾಣವಾಗಿರಬೇಕು, ಅದು ಹುಲಿಯ ಶಾಶ್ವತ ಅಡಗುದಾಣವಾಗಿರಬೇಕು ಎಂದು ಊಹಿಸಿದೆ. ಆ ಆರಡಿ ಎತ್ತರದ ಕಡಿದನ್ನು ಹತ್ತಿ ನಿಧಾನವಾಗಿ ಬಂಡೆಯ ಮೇಲೆ ಸರಿಯುತ್ತಾ ಇನ್ನೊಂದು ಮುಖದ ತುದಿಗೆ ಬಂದಾಗ ನನಗೆ ನಿರಾಶೆ ಕಾದಿತ್ತು. ಬೆಟ್ಟದ ಆ ಮುಖದ ಮೇಲ್ಮೈ ಬಂಡೆಯ ತುದಿಯವರೆಗೂ ಅಂಟಿಕೊಂಡಿತ್ತು. ಅಲ್ಲಿ ಗುಹೆಯಾಗಲೀ, ಟೊಳ್ಳಾಗಲೀ ಇರಲಿಲ್ಲ.

ನಾನು ನಿಂತಿದ್ದ ಬಂಡೆಯ ತುದಿಯಿಂದ ಆದರ ಮುಂದಿದ್ದ ಎರಡೂ ಬದಿಗಳಲ್ಲಿ ದಟ್ಟವಾಗಿ ಮರಗಳು ಬೆಳೆದಿದ್ದ ಕಣಿವೆ ಹಾಗೂ ಸುತ್ತಮುತ್ತಲ ಕಾಡಿನ ವಿಹಂಗಮ ನೋಟ ಕಾಣುತ್ತಿತ್ತು. ಈ ಜಾಗ ನರಭಕ್ಷಕನ ದಾಳಿಗೆ ಸಿಕ್ಕದಂತೆ ಸುರಕ್ಷಿತವಾಗಿತ್ತು. ನಾನು ನೆಮ್ಮದಿಯಿಂದ ಕುಳಿತುಕೊಂಡು ಯೋಚಿಸತೊಡಗಿದೆ. ಅಷ್ಟರಲ್ಲಿ ನನ್ನ ಮುಂದೆ 40-50ಗಜಗಳ ದೂರದಲ್ಲಿ ದಟ್ಟವಾದ ಕುರುಚಲಿನ ನಡುವೆ ಕೆಂಪು ಬಿಳಿಮಿಶ್ರಿತ ವಸ್ತುವೊಂದು ಕಾಣಿಸಿತು. ಕಾಡಿನಲ್ಲಿ ಹುಲಿಯ ಬೆನ್ನು ಹತ್ತಿದವರಿಗೆ ಕೆಂಪು ಬಣ್ಣ ತಟ್ಟನೆ ಗಮನ ಸೆಳೆಯುತ್ತದೆ. ಗಮನ ಸೆಳೆಯುತ್ತದೆ ಎಂಬುದಕ್ಕಿಂತ ಕಾಣುವುದೆಲ್ಲಾ ಕೆಂಪಾಗಿಯೇ ಕಾಣುತ್ತದೆ. ಹಾಗೆ ಕಾಣುವ ಕೆಂಪೆಲ್ಲಾ ಹುಲಿಯಂತೆಯೇ ಕಾಣಬಹುದು ಎನಿಸುತ್ತದೆ. ಆದರೆ ಈಗ ಹಾಗಲ್ಲ, ನನಗೆ ಬರೀ ಕೆಂಪಲ್ಲ ಅದರ ಪಟ್ಟೆಗಳೂ ಕಾಣುತ್ತಿದ್ದವು.

ಅನುವಾದ: ಡಾ. ಟಿ.ಎಸ್. ವಿವೇಕಾನಂದ

ಎಂ.ಪಿ. ಪ್ರಕಾಶ್ ರಿಟೈರಾಗಿ ಭಾಳಾ ದಿನಾಗಿತ್ತು ಕಣೋ

ಮೌನ ನಿರೀಕ್ಷೆಯಲ್ಲಿ ಕುಳಿತಿದ್ದ ಕಾಳಮಾವನಿಗೆ. ಉಗ್ರಿ ಹೇಳಿದ ಮಾತು ಹಿತಕರವಾಗಿರಲಿಲ್ಲ. ಆದ್ದರಿಂದ,

"ಪ್ರಕಾಶ್ಯಾಕೆ ರಾಜಕೀಯ ಬ್ಯಾಡ ಅಂದವುನೇ" ಎಂದ.

"ರಾಜಕೀಯನೆ ಬ್ಯಾಡ ಅಂತ ಹೇಳಿಲ್ಲ ಕಣಮಾವ. ಯಲೆಕ್ಷನ್ನಿಗೆ ನಿಲ್ಲದಿಲ್ಲ ಅಂತ ಅಂದವುನೆ."

"ಪಾಪ ವಳ್ಳೆ ಮನ್ಸ" ಎಂದ ಸೀರ.

"ವಳ್ಳೆ ಮನ್ಸಾಗೊವತ್ತಿಗೆ ಅಲವೆ, ಅಪ್ಪಮಕ್ಕಳು ಕೊಟ್ಟ ಕ್ಯಲಸ್ನಲ್ಲ ತಡಕಂದಿದ್ದು" ಎಂದಳು ಜುಮ್ಮಿ.

"ಇವುರೇನು ಕ್ಯಲ ಕೊಟ್ರುಲೇ?" ಎಂದ ಕಾಳ ಮಾವ ಸಿಟ್ಟಿನಿಂದ.

ಬಂಗಾಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಉಗ್ರಿನೆ ಕೇಳು."

"ಅಯ್ಯೋ ಮಾವ, ಎಂ.ಪಿ. ಪ್ರಕಾಶಾಗೋವತ್ತಿಗೆ ಈ ಅಪ್ಪ ಮಕ್ಕಳಾಟ ನೋಡಿಕಂಡು ಇನ್ನೂ ಇದ್ದ. ಇನ್ಯಾವನಾರ ಆಗಿದ್ರೆ ಯಾವತ್ತೊ ಇವುರ ಮರಿಯಾದಿ ತಗುದು ಹೋಗನು."

"ಅಂಗಂತಿಯಾ?"

"ಊ ಕಣಮಾವ. ಅವುನ್ನ ಇದ್ದಕ್ಕಿದ್ದಂಗೆ ಉಪಮುಖ್ಯಮಂತ್ರಿ ಮಾಡಿದ್ರು, ಉಪಮುಖ್ಯಮಂತ್ರಿ ಯಾದೋನು ಮುಖ್ಯಮಂತ್ರಿಯಾಗಬೇಕು ತಾನೆ? ಆದ್ರೆ ಮಗನ್ನ ಮುಖ್ಯಮಂತ್ರಿ ಮಾಡಿ ಪ್ರಕಾಶನ್ನ ಒಸಿ ದಿನ ಅಂಗೆ ಕುಂಡ್ರುಸಿದ್ದ. ಅಮ್ಯಾಲೆ ಕುಮಾರ ಸ್ವಾಮಿಗೆ ವಿಧಾನಸಭೆಲಿ ಮಾತಾಡಕ್ಕೆ ಬರದಿಲ್ಲ ಅಂತವ ತಿರಗ ಪ್ರಕಾಶನ್ನು ಮಂತ್ರಿ ಮಾಡಿ ಮಗನ ಮಾನ ಕಾಪಾಡು ಅನ್ನಂಗೆ ಮಾಡಿ ಮಡಗಿದ್ದ."

"ದ್ಯಾವೇಗೌಡನಿಂದ್ಲೆ ಕಂಡ್ಯ ಯಲ್ಲ ನ್ಯಡಿತಾಯಿರದು. ಪಾಪ ವಳ್ಳೊರ ಮಾನ ಹಳ್ಳಿಲೋಯ್ತು ಅಂತ ಮರಿಯಾದಿಯಾಗಿ ಇದ್ದ ಪ್ರಕಾಶನ ಮಾನ ದ್ಯಾವೇ ಗೌಡನ ಸಂಗ ಮಾಡಿ ಹಾಳಾಯ್ತು" ಎಂದು ಸೀರ ಮಾನಹೋದ ಮುಖ ಮಾಡಿದ.

"ನಾನು ಮದುಲ್ನೆ ಸಕಿ ಗೆದ್ದಾಗ ಮಾತಾಡಿಸಿದ್ದೆ ಅವುನ್ನ" ಎಂದಳು ಜುಮ್ಮಿ.

"ಅವುನ್ನೇನು ಯಾರಾದ್ರು ಮಾತಾಡುಸಬವುದು ಅಂಗಿದ್ದ. ಮಂತ್ರಿಯಾಗ್ನಿ ಆಗದೆಯಿರ್ಲಿ ಸಾಮಾನ್ಯ ಮನುಸ್ನಂಗೆ ನ್ಯಡಕಳೋನು. ಆದೇ ಚಲುವರಾಯಸ್ವಾಮಿ ನೋಡು, ಮಾತ್ನೆ ಆಡನಾರ, ಕಣ್ಣನೆ ಬುಡ್ನಾರ ಅಂಕಾರ ಬಂದುಬುಟ್ಟದೆ."

"ತಿರಕಂಡು ತಿಂತಿದ್ದ ಮರತೆಬುಡ ತವೆ ಬಡ್ಡೆತ್ತವು."

"ಸೋಕಿ ಕಲ್ತುಬುಟ್ಟವುರೆ ಕಣಮಾವ, ಸೂಳೆಮಕ್ಳು ದಿಢೀರಂತ ಮಂತ್ರಿಗಳಾಗಿಬುಟ್ರು. ದುಡ್ಡು ಹರದುಬಂದುಬುಡ್ತು, ಕಂಡಕಂಡ ಹೆಂಗುಸ್ರು ಸಿನುಮಾ ಆರ್ಗ್‌ಟ್ರುಸ್ನು ಕರಕಂಡು ಹೋಗಿ ಮಜ ಮಾಡ್ತ ಕುಂತವುರೆ. ಕುಮಾರಸ್ವಾಮಿಗೆ ಅಂಗಾಗಿರುವಾಗ ಇನ್ನು ಈ ನನ್ನ ಮಕ್ಕಳು ಸುಮ್ಮನಿದ್ದರೆ?"

"ಅವುನ್ಯಾರೊ ವನ್ನಳ್ಳಿ ಯಮ್ಮೆಲ್ಲೆ ಯಾರ್‍ನೊ ಹಿಡಕಳಕ್ಕೋಗಿ ಪಾಪ ಆ ಹುಡುಗಿ ಇಸ ಕುಡಿಯಕ್ಕೋಗಿ ಬದಿಕ್ಕಂಡದಂತಲ್ಲಾ?" ಎಂದ ಸೀರ.

"ಊ ಕಣ ಮಾವ. ಆ ಮುಂಡೆ ಮಗನ ಮ್ಯಾಲೆ ಬೇಕಾದೋಟು ಕೇಸು ಇದ್ದವಂತೆ. ಯಾವುದ್ಕು ಕೇರ್ ಮಾಡದಿಲವಂತೆ."

"ಅಂಥೋನು ಯಮ್ಮೆಲ್ಲೆ ಆಗಿದ್ದನೆ?" ಎಂದು ಕಾಳಮಾವ ಅಚ್ಚರಿಗೊಂಡ.

"ಊ ಕಣಮಾವ ಬಿಜೆಪಿ ಎಮ್ಮೆಲ್ಲೆ."

"ಬಿಜೆಪಿಯೋನೆ? ಮತ್ತೆ ಬಿಜೆಪಿಯೋರ್ಯಲ್ಲ ಸಾಬಸ್ತರು ಅಂತ ಕೊಚ್ಚಗತಿದ್ರಲ್ಲಾ?"

"ಅಯ್ಯೋ ಮಾವ, ಆ ನನಮಕ್ಕಳು ಯಂತಾ ಗತಿಗ್ಯಟ್ಟೋರು ಅಂದ್ರೇ, ಆ ಕಾಂಗ್ರೆಸಿನವು ಐವತ್ತೊರ್ಸ ಮಾಡಿದ ಆಸ್ತಿಯ ಇವುರು ಐದೇ ವರ್ಸಕ್ಕೆ ಮಾಡಿಕಂಡ್ರು. ಇನ್ನು ಹೆಂಗಸರ ವಿಸಿಯದಲ್ಲಂತೂ ಆ ಎಡೂರಪ್ಪನೆ ಅಂಗಾಗಿ ಕುಂತವುನೆ, ಇನ್ನ ಉಳದೋರಂತೂ ಕೇಳಲೇ ಬ್ಯಾಡ."

"ಹಾಳಾಗೋದ್ರು ಬುಡು ಸೂಳೆಮಕ್ಕಳು."

"ಇವುರಿಗೋಲಿಸಿದ್ರೆ ಕಾಂಗ್ರೆಸ್ಸಿನೋರು ಮರ್‍ಯಾದಸ್ತ ರಂಗೆ ಕಾಣ್ತರೆ."

"ಎಗ್ಗಾಟ್ಟೆ ಕರಟ್ ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ನಿಮ್ಮ ಫ್ರೆಂಡು ರಿಟೈರಾದರಂತಲ್ಲೊ?" ಎಂದ ಉಗ್ರಿ.



"ಅವುರು ರಿಟೈರಾಗಿ ಭಾಳದಿನಾಗಿತ್ತು. ಈಗ ಅನವುನ್ಸ ಮಾಡಿದ್ರು ಅಷ್ಟೆ."

"ಅದ್ಯಾವಾಗ ರಿಟೈರಾಗಿದ್ರು?"

"ಇದಾನಸಭೆವಳಗಡೆ ಕುಮಾರಸ್ವಾಮಿ ಮುಖ್ಯ ಮಂತ್ರಿಯಾಗುವಾಗ ಸಿಂಧ್ಯಾ ಮಾತಾಡ್ತ ಪ್ರಕಾಶ್ ನಮ್ಮ ನಾಯಕ ಅಂದ. ಆಗ ಪ್ರಕಾಶ್ ಕುಮಾರಸ್ವಾಮಿನೆ ನಮ್ಮ ನಾಯಕ ಅಂದಿದ್ರು. ದಟೀಸ್ ರಿಯಲಿ ರಿಟೈರ್ ಮೆಂಟ್ ಅನವುನ್ಸು."

"ದೇವರಂತ ಮನ್ಸ ಕಣೊ."

"ಅದರಲ್ಯರಡು ಮಾತಿಲ್ಲ ಕಣೊ. ದೇವರಿಂದ ಏನು ಪ್ರಯೋಜನ ಹೇಳು? ಅಂಗಿದ್ರು ಪ್ರಕಾಶ್."

"ನೀನಂಗಂತಿ. ಅವುರಿಗೆ ಫೋನ್ ಮಾಡಿ ಕ್ಯಲಸ ಮಾಡಿಸಿಗಂದಿರೊ ಸಾಯಿತಿಗಳು, ಕಲಾವಿದರು, ಬ... ರಾಜಕಾರಣಿಗಳು ವಸಿಜನಿದ್ದರೇನೊ?"

"ಮಿಸ್ಟರ್ ಉಗ್ರಿ ಫೋನ್ ಮಾಡಿದೇಟಿಗೆ ಪ್ರಕಾ... ಕ್ಯಲಸ ಮಾಡಿದ್ರು, ಕರದಿತ್ತಕೆ, ಬಂದಿದ್ದ ಒಪ್ಪಿಗ್ತ್ರಿ... ಆದ್ರೆ ನಿನ್ನಂತ ಜಂಟ್ಲುಮ್ಯಾನು ಸರಿಯಾಗಿ ಮಾತಾಡ... ಟೈಂ ಬಂದಿತ್ತು, ಆಗ ನೀನು ಮಾತಾಡ್ಲಿಲ್ಲ, ಅ... ದ್ಯಾವೇಗೌಡನ ಫ್ಯಾಮಿಲಿ ಬ್ಯಳಕಂಡುಬುಡ್ತು, ಮೋ... ಬಾರದ್ನೆ ಮಾಡ್ತ ಕುಂತದೆ. ಇದಕ್ಕೆ ಎಂ.ಪಿ. ಪ್ರಕಾ... ಕಾರಣ ಅನ್ನದು ಹಿಸ್ಟರಿ ವಳಗೆ ಸೇರಿಬುಡ್ತು ಕಣೊ..."

"ಹಿಸ್ಟರಿ ಯಾವನಿಗೆ ಬೇಕೊ ಇವತ್ತು?"

"ಬ್ಯಾಡ ಬುಡು, ಆದ್ರು ಎಂ.ಪಿ. ಪ್ರಕಾ... ರಾಜಕಾರಣದಿಂಧ ನಾನು ನಿವೃತ್ತಿ ಆಯ್ತಿನಿ ಅಂದಿದ್ರೋ... ದಳ ದಲ್ಲಾಗಿ ಬಿಜೆಪಿ ಬ್ಯಳಕತ್ತಾ ಅದೆ."

"ಬಿಜೆಪಿ ಬ್ಯಳಿತಾ ಅದೆ ಅಂತಿಯಾ?"

"ದಳವ ತಲಿಮುಂದಾಗಿ ನುಂಗತ ಕುಂತವುರೆ ಕಣೊ. ದ್ಯಾವೇಗೌಡ ಯಮ್ಮೆಲ್ಲೆ ಮಂತ್ರಿಗಳು ನನ್ನ ಮಾತ ಕೇಳ್ತಾಯಿಲ್ಲ ಅನ್ನದಕು, ಆ ಕುಮಾರಸ್ವಾಮಿ ಬಾಯಿಗೆ ಬಂದಂಗೆ ಮಾತಾಡದ್ಕು, ಈ ನನ್ನ ಮಕ್ಕಳು ವಿಕಾಸಯಾತ್ರೆ ಮಾಡಿಕೊಂಡು ವಿಕಾಸ ಆಗ್ತಾಯಿರದ್ಕು, ತಾಳೆ ಹಾಕಿದ್ರೆ ದಳ ಹೋಯ್ತಾ ಅದೆ ಕಣೊ."

"ದ್ಯಾವೇಗೌಡ್ಯಾಕೆ ಸುಮ್ಮ... ವುನಲ್ಲಾ?" ಎಂದ ಸೀರ.

"ದ್ಯಾವೇಗೌಡ ಸುಮ್ಮನಿದ್ರೆ ಪ್ರಕಾಶ... ಯಾಕೆ ರಿಟೈರಾಯ್ತಿದ್ರು ಚಿಗಪ್ಪ?"

"ಅಂಗಂತಿಯಾ?"

"ಊ ಮತ್ತೆ ಮುಂದೆ ಸರ್ಕಾರ ಬದ್ಲಾಗಿ ಎಡೂ... ಮುಖ್ಯಮಂತ್ರಿಯಾದಾಗ ಪ್ರಕಾಶ್ ಉಪಮುಖ್ಯಮಂ... ಯಾಗಂಗಿದ್ದತೇ? ಆ ದ್ಯಾವೇಗೌಡ ರೇವಣ್ಣನ ಮಾ... ಬೇಕು ಅಂತ ಲ್ಯಕ್ಕ ಹಾಕಿರಬವುದು."

"ನೋವನುಭವಿಸ್ಯವುನೆ ಬುಡು. ಇವತ್ತಿನ ದಿವಸದ... ಪ್ರಕಾಶ್ ಏನೇ ಹೇಳ್ಲಿ ಜನ ತಿಳಕಳದೇನಪ್ಪಾ ಅಂದ... ಈ ಅಪ್ಪಮಕ್ಕಳ ಕಾಟ ತಡಿಯಕ್ಯಾಗದೆ ಪ್ರಕಾಶ... ಮನಿಗ್ಸಂಟವುನೆ ಅಂದಕತ್ತರೆ."

"ರಾಜಕೀಯ ಬುಟ್ಟು ಪ್ರಕಾಶೇನು ಮಾಡ್ತರ್ಲ?" ಎಂದಳು ಜುಮ್ಮಿ.

"ಅವುರು ಮೂಲತ ಡ್ರಾಮಾ ಆರ್ಟಿಸ್ಟು ಕಣ..."

ಭಾಜಪಾ ಸಂಸದನೂ ಬಾಡಿಗೆ ಹೆಂಡತಿಯೂ

ಅವನಿಗೆ ಕಿತ್ತು ತಿನ್ನುವ ಬಡತನ. ಮೇಲೆ ಮನೆ ತುಂಬ ಮಕ್ಕಳು. ದುರ್ಬಿಕ್ಷದಲ್ಲಿ ಅಧಿಕ ಮಾಸ ಅನ್ನುವ ಹಾಗೆ ಆಗಾಗ ಅಮರಿಕೊಳ್ಳುವ ಎಂತ ಹದ್ದೋ ರೋಗ. ವೈದ್ಯರ ಬಳಿಗೆ ಹೋಗಿ ತನ್ನ ಸಂಕಟ ತೋಡಿಕೊಂಡ. ಪರೀಕ್ಷೆ ಮಾಡಿದ ವೈದ್ಯರು ಕೇಳಿದರು- 'ನಿನಗೆಷ್ಟಯ್ಯ ಮಕ್ಕಳು?' ಅವನು ಹೇಳಿದ್ದ ಕೇಳಿ ಅವರು ಮೂರ್ಛೆ ಹೋಗುವುದೊಂದು ಬಾಕಿ. ಸುಧಾರಿಸಿಕೊಂಡು 'ಅಲ್ಲಯ್ಯ ಇಷ್ಟೊಂದು ಮಕ್ಕಳು ಮಾಡಿಕೊಳ್ಳುವುದಕ್ಕೆ ಮುಂಚೆ ಕೊಂಚಾನಾದ್ರೂ ಯೋಚಿಸಬಾರದಾಗಿತ್ತೇನಯ್ಯ' ಅಂತ ಬೇಸರದಿಂದ ಮುಖ ಸಿಂಡರಿಸಿಕೊಂಡರು ವೈದ್ಯರು. 'ಯೋಚಿಸ್ತಿನಿ ಡಾಕ್ಟರೆ.' ಆದರೆ, ಅಂದ ಆತ. 'ಏನಯ್ಯ ಆದರೇ... ಅಂತ ರಾಗ ಎಳೀತೀಯಲ್ಲ' ಅಂತ ಕೇಳಿದರು ಅವರು. 'ಏನೂ ಇಲ್ಲ ಡಾಕ್ಟರೆ. ಆವಾಗ ಎಂತಹ ಹುಮ್ಮಸ್ಸು ಬಂದುಬಿಡುತ್ತೆ ಅಂದರೆ ಇಂತಹವು ಇನ್ನೂ ನೂರು ಮಕ್ಕಳಾದರೂ ಸಾಕಬಲ್ಲೆ ಅನ್ನಿಸಿಬಿಡುತ್ತೆ' ಅಂದ ಅವ!



ಈ ಪುರಾಣ ಎಲ್ಲ ಯಾಕೆ ಒದರ್‍ತಿದೀನಿ ಅಂದರೆ ಈ ಸೆಕ್ಸ್ ಇದೆಯಲ್ಲ ಅದರ ಶಕ್ತಿನೆ ಅಂತಹದ್ದು. ಸುರಕ್ಷಿತ ಲೈಂಗಿಕ ಪದ್ಧತಿ ಅನುಸರಿಸಬೇಕು ಅಂತ ಯಾರಿಗೆ ಅರಿವಿರಲ್ಲ ಹೇಳಿ... ಆದರೂ ಆ ಗಳಿಗೇನೆ ಅಂತಹದು, 'ಯಾವ ಕಾಯಿಲೆ ನನ್ನನ್ನ ಏನು ಮಾಡುತ್ತೆ', 'ಎಲ್ಲಾ ಕಡೆನೂ ಏಡ್ಸ್ ಇರುತ್ತೆ', 'ಅದು ನನ್ನನ್ನ ಏನೂ ಮಾಡಲಾರದು' ಇಂತಹ ಮೊಂಡುವಾದಕ್ಕೆ ಮೊರೆಬಿಡುತ್ತೆ, ಅದೂ ಲಾರಿ ಚಾಲಕರಾದರಂತೂ ಕೇಳುವ ಹಾಗೇ ಇಲ್ಲ, ತಿಂಗಳಾನು ಗಟ್ಟಲೆ ಮನೆಯಿಂದ ದೂರ ಇರಬೇಕಾಗಿರುವ ಅನಿವಾರ್ಯತೆ. ರಸ್ತೆ ಪಕ್ಕ ನಿಂತು ವಯ್ಯಾರ ಮಾಡುವ ಹೆಂಗಸರು ಬೇರೆ ಅವರ ತಲೆ ಧೀಂ ಅನ್ನಿಸಿಬಿಡ್ತಾರೆ. ಇಂತಹ ಅವಕಾಶ ದೊರೆತಾಗ ತಮ್ಮ ಆಸೇನ ಪೂರೈಸಿಕೊಳ್ಳದೆ ಬೇರೆ ದಾರೀನೆ ಅವರಿಗೆ ತೋಚುವುದಿಲ್ಲ.

ಈ ಲಾರಿ ಚಾಲಕರು ಅನ್ನೊ ಮುಂಡೇಮಕ್ಕಳು ತಾವು ಹಾಳಾಗುವುದಲ್ಲದೆ ಏನೂ ಅರಿಯದ ಹೆಂಡತಿಗೂ ರೋಗ ಅಂಟಿಸಿಬಿಡುತ್ತಾರಲ್ಲ ಅಂತ ನೊಂದ ಸರ್ಕಾರ ಇಂತಹವರಿಗಾಗಿ ಏಡ್ಸ್ ಜಾಗೃತಿ ಶಿಬಿರ ಏರ್ಪಡಿಸಿತ್ತಂತೆ. ಕಿವಿಗೆ ಮಾತ್ರ ಈ ವಿಷಯ ತಿಳಿಸಿದರೆ ಒಂದು ನೊಣಾನೂ ಶಿಬಿರಕ್ಕೆ ಬರೋಲ್ಲ ಅಂತಾನೋ ಏನೋ ಕಣ್ಣಿಗೂ ಇಂಪಾಗಿ ಇರಲಿ ಅಂತ ಬಾಲಿವುಡ್ ನಟ ಶಿಲ್ಪಾಶೆಟ್ಟಿ ಎಂಬ ಬೆಡಗಿನೂ ಕರೆಸಿದ್ರಂತೆ. ಇನ್ನೂ ಕಳೆ ಕಟ್ಟಲಿ ಅಂತ ಅಮೆರಿಕಾದ ನಟ ರಿಚರ್ಡ್ ಗೇರ್ ಅವರನ್ನು ಕೂಡಿ ಹಾಕಿದ್ರಂತೆ. ಆಮೇಲೆನಾಯ್ತಂತೆ ಅಂತೀರಿ... ಆ ನಟ ಅನ್ನೋನು ವೇದಿಕೆಯ ಮೇಲೆ ಸಾರ್ವಜನಿಕವಾಗಿ ನಟೀಮಣಿಯನ್ನು ತಬ್ಬಿ ಹಿಡಿದು ಆಕೆಯ ಕೆನ್ನೆಯ ಮೇಲೆ ಮುತ್ತಿನ ಸು... ಮಳೆಗೈದನಂತೆ. ಅದು ಎಷ್ಟೊಂದು ಪ್ರಚೋದನಕಾ... ಯಾಗಿತ್ತು ಅಂದರೆ ಇತರರ ಮಾತು ಹಾಗಿರಲಿ... ಸಂಯಮಿಗೂ ಯಾವುದಾದರೂ ಹೆಂಗಸಿನ ಸಂ... ತಕ್ಷಣವೇಬೇಕು ಅನ್ನಿಸುತ್ತಿತ್ತಂತೆ. ವಿದೇಶಿ ಕೆಂಪು... ಕೋತಿಯೊಂದು ಕಂದುಬಣ್ಣದ ಬೆಡಗಿಯ ಮೇಲೆ ಈ... ರೀತಿ ಆಕ್ರಮಣವನ್ನು ಬಹಿರಂಗವಾಗಿ ಮಾಡಿದ್ದು... ಭಾರತೀಯ ಸಂಸ್ಕೃತಿ ರಕ್ಷಕರ ತಲೆ ಬಿಸಿಯೇರಿಸಿತಂತೆ... ತಮಗಿಲ್ಲದ ಅವಕಾಶಾನ ಇವನು ಹೊಡೆದುಕೊಂಡನಲ್ಲ... ಅಂತ ಅವರಿಗೆ ಯದ್ವಾತದ್ವಾ ಕೋಪ ಬರಿಸಿತಂತೆ...

ಅಶಾಂತ

ಎಚ್.ಎಲ್. ಕೇಶವಮೂರ್ತಿ

ಇಷ್ಟು ಸಾಲದು ಎಂಬಂತೆ ಆ ಬೆಡಗಿಗೆ ಯಾ... ಇದನ್ನೆಲ್ಲ ಸಹಿಸಿಕೊಂಡೆ ಅಂದದ್ದಕ್ಕೆ 'ಇದು ಅವ... ಸಂಸ್ಕೃತಿ' ಅಂತ ಮಾದಕ ನಗು ಬದ್ದು ಹುಚ್ಚೆಬ್ಬಿಸಿತಂತೆ... ಸಂಸ್ಕೃತಿ ರಕ್ಷಕರು ತಮ್ಮ ಮಾಮೂಲಿ ವರಸೇಲಿ ದೊಂ... ಮಾಡಿ, ಬೆಂಕಿ ಹಚ್ಚಿ ಸಂಸ್ಕೃತಿ ರಕ್ಷಿಸಿದರಂತೆ.

ಅಲ್ಲ, ಅವರ ಸಂಸ್ಕೃತೀನೇ ಹಾಗೆ ಅಂತ ಶಿಲ್ಪಾಶೆ... ಹೇಳಿರುವುದನ್ನ ಕೇಳಿದ ಮೇಲೆ ಬಿಎ ರೋಮನ್...

ಜೊತೆಯೆಲ್ಲಾ ಡ್ರಾಮಾದಲ್ಲಿ ಆಕ್ಟ್ ಮಾಡ್ತ
ರ್ರ."
ವಳ್ಳಿ ಆಗುಟ್ರ?"
ವಳ್ಳಿ ಸೈಡಾಕ್ತು. ರಾಜಾ ಪಾರ್ಟು ಬ್ಯಾಡ ಅಂತರೆ,
ತ್ರಿ ಪಾರ್ಟು, ರಾಣಿ ಅಪ್ಪನ ಪಾರ್ಟು, ಇಂತವು
ಗೊಪ್ಪತವೆ. ಕುರುಕ್ಷೇತ್ರ ಆದಿದ್ರೆ ವಿಧುರ ಶಲ್ಯ
ಗೊಪ್ಪತವೆ. ರಾಮಾಯಣ ಆದಿದ್ರೆ ಸುಮಂತ್ರ
ವ ವಿಭೀಷಣ ಇಂತ ಪಾರ್ಟಗೆ ಜೀವ ತುಂಬತರೆ.
ಣ್ಣನ ಪಾರ್ಟು ಒಪ್ಪತದೆ."

"ಬಸವಣ್ಣೇನೂ ಲಿಂಗಾಯಿತ್ರೂನಲ್ಲ ಅಂತ ಕುಂತವು
?" ಎಂದ ಸೀರ.

"ಯಾರ ಚಿಗಪ್ಪ ಅಂದೋರು?"

"ಈ ಉಗ್ರಿನೆ ಅಂಗಂದನಪ್ಪ."

"ಉಗ್ರಿನು ಏನು ಸಂಶೋಧನೆ ಮಾಡಿ ಹೇಳಿಲ್ಲ.
ನಿಗೂ ಯಾರೊ ಹೇಳ್ಯವುರೆ, ಅಂಗಂದವುನೆ.
ವಣ್ಣ ಮಾದಿಗರೋನು ಅಂದ್ರೆ ನಂಬಕ್ಯಾದತೆ?"

"ಬಸವಣ್ಣ ಲಿಂಗಾಯಿತರೋನು ಕಂಡ್ಯ" ಎಂದ
ಮಾವ.

"ದ್ವಡಪ್ಪ, ಬಸವಣ್ಣನ್ನ ಅಂಗ್ಯಲ್ಲ ಲಿಂಗಾಯಿತ್ರೂನು
ದಿಗರೋನು ಅಂತ ಜಗಳಾಡಬಾರ್ದು. ರಾಜ
ಾರ ಕುವೆಂಪು ಇವುರನ್ಯಲ್ಲ ಅವುರ ಹೆಸರ ಮ್ಯಾಲೆ
ಡಿದವೇ ಹೊರತು ಜಾತಿ ಮ್ಯಾಲೆ ನೋಡಿದವೆ?"

"ಇಲ್ಲ ಬುಡು."

"ಬಸವಣ್ಣ ಮಾದಿಗರೋನು ಅಂದೇಟಿಗೆ ಮಾದಿ
ಗೆ ಬಂದಿದ್ದೇನೂ? ಹೋಗ್ಲಿ ಲಿಂಗಾಯಿತ್ರ ಬುಟ್ಟು
ತಂಗಿದ್ದರೆ?"

"ಇಲ್ಲ ಬುಡು, ಹಿಂದೊಂದ ಸತಿ ಅವುನ್ಯಾರೊ
ದಾಸ ಬ್ಯಾಡ್ರೊನು ಅಂದ. ಬ್ಯಾಡ್ರು ಸುಮ್ಮನಿದ್ರು.
ಬ್ರು ಸುಮ್ಮನಿದ್ರು. ಜಾತಿನೇ ಇಲ್ಲ ಅಂದ ಕನಕ
ನ್ನ ಜಾತಿ ಗೊಂತಿಗೆ ಬಗಿಯದು ಸರಿಲ್ಲ ಕಣೊ."

"ನಿಜ ಕಣೊ, ಅದೇನಾರ ಆಗ್ಲಿ ಬಸವಣ್ಣಂತೂ
ದಿಗಲ್ಲ."

"ಅದ್ಯಂಗೇಳ್ತಿಯೋ?"

"ಅವುನ ಮಾದಿಗಾಗಿದ್ರೆ ಇಡೀ ಕರ್ನಾಟಕದ ಕೃಪಿ
ಅವುನಿಂದೆ ಹೋಯ್ತಿದ್ರ? ಹನ್ನೆರಡನೇ ಶತಮಾನ
ಡು ಈ ಇಪ್ಪತ್ತನೇ ಶತಮಾನದಲ್ಲಿ ಬಿ. ಕೃಷ್ಣಪ್ಪ
ತಾ ದೊಡ್ಡ ವ್ಯಕ್ತಿ ಅವುನಿಂದೆ ವಲೇರೆ ಹೋಗಲಿಲ್ಲಪ್ಪ
ೇಸ್ ಪ್ಯಾಕ್ಟು.

"?!"

-ಬಿ. ಚಂದ್ರೇಗೌಡ

ಮರೆಯುವ ಮುನ್ನ




■ಪಿ. ಲಂಕೇಶ್ ನವೆಂಬರ್ 20, 1988

ಬಕಾಸುರರು

ವಜ್ರ ವೈಢೂರ್ಯಗಳು, ಮುತ್ತುರತ್ನಗಳು, ರತ್ನಖಚಿತ ತೋಳಬಂದಿ, ಕಾಲುಕಡಗ, ಡಾಬುಗಳು. ಇಂಗ್ಲಿಷ್ ಸ್ಕೂಲುಗಳಲ್ಲಿ ಓದಲು ಹೋಗಿ ಹೆಡ್‌ಮಾಸ್ಟರ್ "ಹೀಗಾದರೆ ನೀನು ವಿದ್ಯಾವಂತನಾಗುವುದು ಹೇಗೆ?" ಎಂದು ಕೇಳಿದರೆ, "ಬೇಕಿಲ್ಲ, ನಾನಿಲ್ಲಿ ಬಂದಿರುವುದು ಚೆಕ್‌ಗಳಿಗೆ ಸಹಿ ಮಾಡುವುದನ್ನು ಕಲಿತುಕೊಳ್ಳಲು"ಎನ್ನುವ ಯುವರಾಜ. ದಿನಕ್ಕೊಬ್ಬಳು ಕನ್ಯೆ ಬಯಸುತ್ತಿದ್ದು ಆ ಬಗ್ಗೆ ಹೇಳಿಕೊಳ್ಳುತ್ತಿದ್ದ ಪಾಟಿಯಾಲ ಮಹಾರಾಜ. ಮಾಡಲು ಬೇರೆ ಕೆಲಸವೇ ಇಲ್ಲದೆ ಶಿಕಾರಿಗೆ ಹೋಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದ ಚಕ್ರವರ್ತಿ. ಸಾವಿರ ಹೆಣ್ಣುಗಳ ಅಂತಃಪುರ. ಒಮ್ಮೆ ಕೂಡ ದೊರೆಯ ಮುಖ ನೋಡದೆ ನಿಟ್ಟುಸಿರುಡುತ್ತಿದ್ದ ಎಳೆಯ ರಾಣಿ. ಭೀಕರ ಹೊಟ್ಟೆಯ ಯುವರಾಜ ವ್ಯಾಯಾಮ ಮಾಡಿ ಬಿದ್ದು ಹೋದಾನೆಂದು ಮೂರುಗಾಲಿಯ ಸೈಕಲ್ ಸವಾರಿಯ ಕಡ್ಡಾಯ; ಆತ ನಿಜಕ್ಕೂ ಸಂಭೋಗ ಮಾಡಬಲ್ಲನೇ ಎಂದು ತಿಳಿದುಕೊಳ್ಳಲು ರಿಹರ್ಸಲ್, ದೊಡ್ಡ ಒಡ್ಡು ಕಟ್ಟಿ ಆತನ ಹೊಟ್ಟೆ ಈಚೆಗೆ, ಹುಡುಗಿ ಆಚೆಗೆ ಇರುವಂತೆ ನೋಡಿಕೊಂಡು ಯಶಸ್ವೀ ಮಿಲನ. ಈತ ಕಪುರ್ತಾಲಾ ರಾಜ್ಯದ ದೊರೆ ಮಗ.

ಈಕೆ ಸೀತಾದೇವಿ. ಬರೊಡಾ ಮಹಾರಾಜನ ಪತ್ನಿ. ಇಂಡಿಯಾ ಸರ್ಕಾರ ರಾಜರನ್ನ ಸಿಂಹಾಸನಗಳಿಂದ ಇಳಿಸಿದೊಡನೆ ಇದ್ದಬದ್ದ ಒಡವೆ, ಹಣ, ಬೆಲೆಯುಳ್ಳ ವಸ್ತುಗಳನ್ನೆಲ್ಲ ಕಟ್ಟಿಕೊಂಡು ಮಗನೊಂದಿಗೆ ಪ್ಯಾರಿಸ್ ಸೇರಿದ ಮಹಾರಾಣಿ ಈಕೆ. ಸಣ್ಣಪುಟ್ಟ ಶ್ರೀಮಂತಿಕೆಗೆ ಬೆಲೆ ಕೊಡದ ಮಹಾ ಸ್ವಪ್ರತಿಷ್ಠೆಯ ಪ್ಯಾರಿಸ್ ನಗರವನ್ನು ತನ್ನ ದುಂದುವೆಚ್ಚ, ರಸಿಕತೆ, ಧಿಮಾಕಿನಿಂದ ತಲ್ಲಣಗೊಳಿಸಿ, ಪುಲಕಗೊಳಿಸಿದ ಸೀತಾದೇವಿ; ಪಾಪರ್ ಆಗುತ್ತಿದ್ದಂತೆ ಈಕೆಯ ಮಗ ಕ್ರಮೇಣ ನಶಿಸಿ ಹೋಟೆಲ್‌ಗಳಲ್ಲಿ ಮಾಣಿಯಾಗಿ, ಕಳ್ಳರ ಕೂಟ ಸೇರಿಕೊಂಡು ಕೊಲೆಯಾದಾಗ.... ಸೀತಾದೇವಿ ತನ್ನ ದುಷ್ಟ ಬದುಕಿನಿಂದಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿ.




ಭಾರತದ ಆತ್ಮವಂಚನೆಯ, ಅನ್ಯಾಯದ ಇನ್ನೊಂದು ರೂಪ ಈ ದೊರೆಗಳು, ಅವರ ಜೀವನ, ಅವರ ಜಡಗೊಂಡ ಚೇತನಗಳು; ಭಾರತ ಪತನಗೊಂಡ ರೀತಿಯನ್ನು ತೋರುವಂತಿದೆ ಈ ಲೋಫರ್‌ಗಳ ಪತನ. ಆನ್ ಮಾರೋ ಎಂಬುವಳ ಇತ್ತೀಚಿನ ಪುಸ್ತಕದಲ್ಲಿ ಇದೆಲ್ಲ, ಇದಕ್ಕಿಂತ ಮಿಗಿಲಾದ ವಿಷಯಗಳು ಕೂಡ ಇವೆ. ಇಡೀ ಭಾರತವನ್ನು ತಮ್ಮ ಹೊಣೆಗೇಡಿತನದಿಂದ ಅನಾಥವಾಗಿಸಿದ ಈ ದೊರೆಗಳು, ದೊರೆಸಾನಿಯರು ಇವತ್ತಿಗೂ ಜನರನ್ನು ದಾರಿ ತಪ್ಪಿಸುತ್ತಲೇ ಇದ್ದಾರೆ. ಇತ್ತೀಚೆಗೆ ಕೇಂದ್ರ ಸಂಪುಟದಲ್ಲಿ ಸ್ಟೇಟ್ ಮಂತ್ರಿಯಾಗಿರುವ ಮಾಜಿ ದೊರೆ ಸಿಂಧ್ಯಾ ತನ್ನ ಮಗಳ ಮದುವೆ ಮಾಡಿದ. ಹೇಗೆ ಗೊತ್ತೆ? ಹನ್ನೆರಡನೆ ಶತಮಾನದ ಚಕ್ರವರ್ತಿಗಳನ್ನು ನಾಚಿಸುವಷ್ಟು ಅದ್ದೂರಿ, ವೈಭವದಿಂದ. ಸೀತಾದೇವಿಯ ಗಂಡ ಇವತ್ತು ಕೈಗಾರಿಕೆಗಳ ತಿಮಿಂಗಿಲ. ಸಿಂಧ್ಯಾನ ತಾಯಿ ರಾಜಮಾತೆಯಾಗಿ ಭಾರತೀಯ ಜನತಾಪಕ್ಷದ ನೇತಾರೆ.

ಇಲ್ಲಿ ಆಗಿರುವಷ್ಟು ಕರಾಳ ವ್ಯಕ್ತಿಗಳ ಆರಾಧನೆ ಇನ್ನೆಲ್ಲೂ ಆಗಿರಲಾರದು; ಆದ್ದರಿಂದಲೇ ಇಲ್ಲಿರುವಷ್ಟು ಬಡತನ, ಮೂಢನಂಬಿಕೆ, ಮೋಸ ಇನ್ನೆಲ್ಲೂ ಇಲ್ಲ.

ಗೇಲಿ ಮಾಡಬೇಕೆನ್ನಿಸುತ್ತದೆ. ಕೆಲವರ ಮಿದುಳು ಲಡ್ಡಾಗಿರುತ್ತದೆ. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ; ಅದು ಲಡ್ಡಾಗಿಲ್ಲ ಎಂಬಂತೆ ವರ್ತಿಸುತ್ತದೆ. ನಜೀರ್‌ಸಾಬ್ ಸತ್ತರು. ಅವರಿಗೆ ಪ್ರೀತಿ, ಕೃತಜ್ಞತೆ ಹೇಗೆ ತೋರಬೇಕು? ಪ್ರತಿಮೆ ಪ್ರತಿಷ್ಠಾಪಿಸಿ! ಇದ್ದಾಗ ಆತನ ಮಾತು ಕೇಳಲಿಲ್ಲ, ಪ್ರಶ್ನಿಸಲಿಲ್ಲ, ಹದ್ದುಬಸ್ತಿನಲ್ಲಿಟ್ಟು ಆತನನ್ನು ರೂಪಿಸಲಿಲ್ಲ, ಈಗ, ಸರಿ, ವಿಧಾನಸೌಧದ ಎದುರು ನಜೀರ್‌ಸಾಬ್ ಪ್ರತಿಮೆ. ನಾನು

ಪ್ರತಿಮಾ ನಾಟಕ



ವೈಯಕ್ತಿಕವಾಗಿ ಈ ರೀತಿಯ ಸರಳ ಮನ್ನಣೆಯನ್ನು ಇಷ್ಟಪಡುವುದಿಲ್ಲ, ಆದರೂ ಸುಮ್ಮನಿರಬಹುದು. ಆದರೆ ವಿಧಾನ ಸೌಧ ದೆದುರು ಈ ಪ್ರತಿಮೆ ಯಾಕೆ? ಅಧಿಕಾರ ವಿಕೇಂದ್ರೀಕರಿಸುವ ಕನಸು ಕಂಡ ನಜೀರ್‌ಗೆ ಇದು ಹಾಸ್ಯಾಸ್ಪದವಾಗಿ ಕಾಣುವುದಿಲ್ಲವೆ? ಈತನ ಪ್ರತಿಮೆಯನ್ನು ಧಾರವಾಡದ ಯಾವುದಾದರೊಂದು ಗ್ರಾಮದಲ್ಲಿ ಸ್ಥಾಪಿಸಬೇಕಲ್ಲವೆ? ಆತನನ್ನು ಲೋಕಸಭಾ ಚುನಾವಣೆಯಲ್ಲಿ ಸೋಲಿಸಿದ್ದು, ಆದರೂ ಆತನನ್ನ ಪ್ರೀತಿಯಿಂದ ಕಂಡದ್ದು ಧಾರವಾಡ ಜಿಲ್ಲೆಯ ಹಳ್ಳಿಗಳು.

ಆದರಲಿ. ನಜೀರ್‌ಸಾಬ್ ಅವರನ್ನು ಹೊಗಳಿದೊಡನೆ ಕೆಲವರು ಒಕ್ಕಲಿಗರು, ಲಿಂಗಾಯತ ನಾಯಕರಿಗೆ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಗುತ್ತದೆ. ಮಂಡ್ಯದ ಕೆಲವರು "ನಾಯಕ"ರು ಹೇಳಿರುವುದನ್ನು ನೀವು ಗಮನಿಸಿರಬಹುದು; ಎಲ್ಲೆಡೆ ಲಿಂಗಾಯತರು ಒಳಗೊಳಗೇ ಕರುಬುತ್ತಿರುವುದನ್ನು ಗಮನಿಸಿರಬಹುದು. ಬೊಮ್ಮಾಯಿ, ಜತ್ತಿ, ದೇವೇಗೌಡ, ವೀರೇಂದ್ರ ಪಾಟೀಲ ಮುಂತಾದವರು ಈ ರಾಜ್ಯಕ್ಕಾಗಿ ಹಗಲಿರುಳು ಬೆವರು ಸುರಿಸಿ ಎಲ್ಲರೂ ನಿಟ್ಟುಸಿರಿಡುವಂತೆ ಮಾಡಿದ್ದರೂ ನೀರು ಕೊಟ್ಟ ನಜೀರರನ್ನು ಹೊಗಳುವುದನ್ನು ಅವರು ಹೇಗೆ ಸಹಿಸಿಯಾರು?

ಸ್ಥಾನ-ಮಾನ

ಮಾತಾಡುವುದಕ್ಕಾಗಿ ಮಾತಾಡುವವರು, ಉತ್ತರ ಗೊತ್ತಿದ್ದರೂ ಪ್ರಶ್ನೆ ಕೇಳುವವರು, ಬುದ್ಧಿಜೀವಿ ಅನ್ನಿಸಿಕೊಳ್ಳುವ ಹಂಬಲವುಳ್ಳವರು ಎಲ್ಲೆಲ್ಲೂ ಇರುತ್ತಾರೆ. ಚನ್ನಗಿರಿಯಲ್ಲಿ ಹತ್ತಾರು ಜನ ನನ್ನೊಂದಿಗೆ ಮಾತಾಡುತ್ತ ಕೂತಿದ್ದರು. "ನಿಮ್ಮ ಮೇಲೆ ಹಲ್ಲೆಯಾದರೆ ಏನು ಮಾಡ್ತೀರಿ?" ಎಂದು ಒಬ್ಬ ಕೇಳಿದ. ನಾನು ಸುಮ್ಮನಿದ್ದೆ. "ನೀವು ದಯವಿಟ್ಟು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಪ್ರಶ್ನೆ ಕೇಳ್ತೇನೆ" ಅಂದ ಇನ್ನೊಬ್ಬ. "ನಾನು ತಪ್ಪು ತಿಳಿಯದಿರುವ ಭರವಸೆ ಕೊಡಲಾರೆ. ಎಂಥ ಭರವಸೆಯನ್ನೂ ನಾನು ಕೊಡೋಲ್ಲ. ಯಾಕೆ ಮುಜುಗರ? ಕೇಳಿ" ಅಂದೆ.

"ಜನತಾ ಸರ್ಕಾರ ಖಾದ್ರಿ ಶಾಮಣ್ಣ, ಅನಂತನಾಗ್ ಮುಂತಾದವರಿಗೆ ಸ್ಥಾನಮಾನ ಕೊಟ್ಟಂತೆ ನಿಮಗೂ ಕೊಡದಿದ್ದುದಕ್ಕೆ ನೀವು ಅವರನ್ನು ವಿರೋಧಿಸುತ್ತಿದ್ದೀರಿ, ಅಲ್ಲವೆ?"

ನಾನು ಸುಮ್ಮನಿದ್ದೆ. ಎಲ್ಲರೂ ಉತ್ತರಕ್ಕಾಗಿ ಕಾದು ಮೌನವಾದರು. ನಾನು ಗಂಭೀರವಾಗಿ ಹೇಳಿದೆ: "ಹೌದು."

ಕಸಿವಿಸಿಯ ಮೌನ. ನಾನು ನಗಲಿಲ್ಲ ಕೂಡ. ಎಲ್ಲರೂ ಗೊಳ್ಳೆಂದು ನಕ್ಕರು. ಪ್ರಶ್ನೆ ಕೇಳಿದವನು ನಾಚಿಕೆಯಿಂದ ಕೆಂಪಾದ. ಆತ ಹೇಳಿದ, "ಕ್ಷಮಿಸಿ ಸಾರ್."

"ತಲೆಹರಟೆಯಲ್ಲಿ ವೇಳೆ ಹಾಳುಮಾಡಬಾರದು" ಅಂದೆ.

ೆ ಯು ಆರ್ ಇನ್ ರೋಮ್ ಅನ್ನುವ ಮಾತನ್ನೇ
ಲಿಸಿ ಬಿಎ ಇಂಗ್ಲಿಷ್ ಮನ್ ವೆನ್ ಯು ಆರ್
ೆ ಇಂಡಿಯಾ ಅನ್ನಬಹುದಾ ಅಂತ...

ಉತ್ತರ ಪ್ರದೇಶದ ಚುನಾವಣೆ ನಡೆಯುತ್ತಿರುವ
ಸಂದರ್ಭದಲ್ಲಿ ಶಿಲ್ಪಾ-ಗೇರ್ ವಿಷಯವನ್ನೇ ಚುನಾ
ಾ ಸುದ್ದಿ ಮಾಡಿ ಬಹಿರಂಗ ಚುಂಬನ ನೀಡುವಂತೆ
ಡಿದ ಇದು ಏಡ್ಸ್ ಜಾಗೃತಿ ಸಮ್ಮೇಳನವೋ
್ಸ್ ಪ್ರಚೋದನಾ ಸಮ್ಮೇಳನವೋ ಎಂದು ಯುಪಿಎ
ರ್ಕಾರದ ಜನ್ಮ ಜಾಲಾಡಬೇಕು ಎಂದಿರುವಾಗ...
ಟಕಟಾ... ಭಾರತೀಯ ಜನತಾ ಪಕ್ಷದ ಸಂಸದ
ಬುಭಾಯಿ ಕಟಾರನ ಸುದ್ದಿ ಮಾಧ್ಯಮಗಳಲ್ಲಿ
ರೆಯಬೇಕೇ...

ಆದದ್ದು ಏನಪ್ಪ ಅಂದರೆ ಈ ಕಟಾರ ಸಾಹೇಬರು
ಡಾದ ಟೊರಾಂಟೋಗೆ ಹೊರಟದ್ದರಂತೆ. ವಿದೇಶ
ಯಾಣ ಮಾಡುವಾಗ ಒಂದು ಹೆಂಗಸು
ತೆಯಲ್ಲಿದ್ದರೆ ಅದರ ಮಜವೇ ಬೇರೆ ಅಂತಾನೋ
ೋ ಅದಕ್ಕೂ ಅನುವು ಮಾಡಿಕೊಂಡಿದ್ದರಂತೆ.
ಕ್ಕ ತಕ್ಕ ದಾಖಲಾತಿನೂ ಪಡೆದಿದ್ದರಂತೆ. ದೆಹಲಿಯ
ತರರಾಷ್ಟ್ರೀಯ ವಿಮಾನನಿಲ್ದಾಣಕ್ಕೂ ಪತ್ನಿ ಪುತ್ರ
ೇತ ಬಂದರಂತೆ. ಆದರೇನು ಚಮತ್ಕಾರ ನಡೆದು
ೋಗಿತ್ತು ಅಂತೀರಿ... ಶಾರದ ಬೆನ್ ಮತ್ತು ರಾಜೇಶ್
ರಿನಲ್ಲಿದ್ದ ಪಾಸ್‌ಪೋರ್ಟನಲ್ಲಿ ಪರಮಜಿತ್ ಕೌರ್
ತ್ತು ಆಕೆಯ ಮಗ ಅಮರ್‌ಜಿತ್ ಅವರ
ೇಟೋಗಳು ರಾರಾಜಿಸುತ್ತಿದ್ದವಂತೆ!

ಕಟಾರ ಸಾಹೇಬರಿಗೆ ಇದೆಲ್ಲ ಮಾಮೂಲಿ ಕೆಲಸ
ತೆ. ನಾಲ್ಕೈದು ಬಾರಿ ಹೀಗೇ ಯಾವುಯಾವುದೋ
ಗಸಿನ ಜೊತೆ ಹೆಂಡತಿ ಪಾಸ್‌ಪೋರ್ಟಿನ ಆಧಾರದ
ಲೆ ಹೋಗಿಬಂದಿದ್ದರಂತೆ. ಮೊದಲೇ ರಾಜತಾಂತ್ರಿಕರ
್‌ಪೋರ್ಟು. ಹೆಂಗಸು ಅಂತ ಇದ್ದ ಮೇಲೆ
ೋಗೀತು. ಇದು ನಿಮ್ಮ ಹೆಂಡತೀನಾ ಅಂತ ಯಾರೂ
ಪ್ರಶ್ನೆ ಮಾಡಿರಲಿಲ್ಲವಂತೆ. ಅದೇ ಧೈರ್ಯದ ಮೇಲೆ ಶಾಕುರೀಕಾಗಿ ಬಂದ ಈ ದಂಪತಿಗಳ ಮೇಲೆ ಒಬ್ಬನಿಗೆ ಅದೇನೋ ಅನುಮಾನ ಗುಮ್ಮಿತಂತೆ. ಆ ಅನುಮಾನ ಏನಪ್ಪ ಅಂದರೆ ಸಾಹೇಬರ ಹೆಂಡತಿಯ ಪಾಸ್‌ಪೋರ್ಟಿನ ನಂಬರು ಬದಲಾಗ್ತಾನೆ ಇದೆಯಲ್ಲ ಯಾಕೆ ಅನ್ನೋದು. ಕಟಾರ ಸಾಹೇಬರು ಈಕೆ ನನ್ನ ಹೆಂಡತೀನೆ ಅಂತ ಸಂಸದರ ಗತ್ತಿನಲ್ಲಿ ಹೇಳಿದರೂ ಅವರ ಅನುಮಾನ ಹೆಚ್ಚೇ ಆಯಿತಂತೆ. ಕೌರ್‌ಳನ್ನು ಪಕ್ಕಕ್ಕೆ ಕರೆದು ಕೇಳಿದಾಗ ಬೆಕ್ಕು ಹೊರಬಿತ್ತಂತೆ.

"ನಾನು ಆತನ ಹೆಂಡತಿಯಲ್ಲ, ನನ್ನನ್ನು ಟೊರಾಂಟೋಗೆ ಕರೆದುಕೊಂಡು ಹೋಗಲು ಅವರಿಗೆ 30 ಲಕ್ಷ ರೂಪಾಯಿ ನೀಡಿದ್ದೆ" ಅಂದಳಂತೆ! ಇನ್ನು ಆ ಹುಡುಗ ಇತ್ತಲ್ಲ ಅವನ್ನ ಬಾಡಿಗೆ ಮಗ ಮಾಡಿಕೊಳ್ಳೋಕೆ ಕಟಾರ ಸಾಹೇಬರು ಪಡೆದಿದ್ದು ಕೇವಲ 35 ಲಕ್ಷ ರೂಪಾಯಿಗಳಂತೆ! ಈ ಸಾಹೇಬ ಮಜಾ ಉಡಾಯಿಸೋಕೆ ಅಂತ ಆಕೇನ ಕರೆದುಕೊಂಡು ಹೋಗ್ತಿದ್ದನೋ, ಮಾರಾಟಕ್ಕೆ ಕರೆದೊಯ್ಯುತ್ತಿದ್ದನೋ, ಹಣ ಪಡೆದು ಆಕೇನ ಸಾಗಾಕೋಕೆ ಪ್ರಯತ್ನಿಸುತ್ತಿದ್ದನೋ ಸಂಬಂಧಿಸಿದವರಿಗೆ ಮಾತ್ರ ಗೊತ್ತು.

ಆದರೆ ಭಾಜಪ ದುರಂತ ನೋಡಿ. ಸಂಜಯ ಜೋಷಿ ಎಂಬ ಆರೆಸ್ಸೆಸ್ ಪ್ರಚಾರಕ ಅಶ್ಲೀಲ ಭಂಗಿಯಲ್ಲಿದ್ದ ಸಿಡಿ ಹೊರಬಂದಿತ್ತು. ಇದನ್ನ ಹೇಗೋ ಸರಿತೂಗಿಸೋಣ ಅನ್ನುವಷ್ಟರಲ್ಲಿ ಏಳು ಜನ ಭಾಜಪ ಸಂಸದರು ಪ್ರಶ್ನೆ ಕೇಳಲು ಹಣ ಪಡೆದು ಸಂಸತ್ತಿನಿಂದ ಹೊರ ಹಾಕಿಸಿಕೊಂಡಿದ್ದರು. ಈಗ ಈತನ ಸರದಿ.

ಸಚ್ಚಾರಿತ್ರ್ಯದ ಭಾರತೀಯ ಜನತಾ ಪಕ್ಷಕ್ಕೆ ಇಂತಹವುಗಳೇನೂ ಹೊಸದಲ್ಲ, ಅದರ ನಾಯಕರು ಸುಸಂಸ್ಕೃತರು. ಮುಚ್ಚುಮರೆಲಿ ಇಂತಹವನ್ನು ಮಾಡಿಕೊಳ್ತಾರೆ. ಮಾಧ್ಯಮದವರೂ ಇಂತಹವನ್ನು ಕಂಡರೂ ಕಾಣದಂತೆ ಸುಮ್ಮನಿರುತ್ತಾರೆ. ಎಲ್ಲೋ ಒಂದೊಂದು ಸಲ ಯಡವಟ್ಟಾಗಿ ಬಿಡುತ್ತೆ. ಯಾವೋ ಹುಡುಗು ಮುಂಡೇವು ಇಂತಹವನ್ನೆಲ್ಲ ಬಯಲಿಗೆ ತಂದುಬಿಡುತ್ತವೆ. ಚುನಾವಣೆ ಸಮಯದಲ್ಲಿ ಹೀಗಾದರೆ ಭಾರತೀಯ ಜನತಾ ಪಕ್ಷದ ಮನಸ್ಸು ಹೇಗಿರಬೇಕು. ಅದಕ್ಕೇ ತಕ್ಷಣ ಕಟಾರ ಸಾಹೇಬರನ್ನು ಅಮಾನತಿನಲ್ಲಿಟ್ಟಿದ್ದಾರೆ. ನಂತರ ವಿಚಾರಣೆ, ತಪ್ಪಿತಸ್ಥ ಅಂತ ಕಂಡುಬಂದರೆ ಪಕ್ಷದಿಂದ ಉಚ್ಚಾಟನೆ ಮಾಡುತ್ತಾರಂತೆ!

ಇದು ಪಕ್ಷದವರ ಗೋಳಾಯಿತು. ಕಟಾರ ಅವರನ್ನು ನೋಡಿದರೆ ಕನಿಕರ ಆಗುತ್ತೆ. ಮನೆಯಲ್ಲಿ ಹೆಂಡತಿಗೆ ಅಹಮದಾಬಾದಿಗೆ ಹೋಗಿಬರ್ತೀನಿ ಅಂತ ಹೇಳಿ ಬಂದಿದ್ದು ಕೆನಡಾಕ್ಕೆ ಹಾರಲು ಪ್ರಯತ್ನಿಸಿದ್ದರಂತೆ. ಎಲ್ಲ ಯೋಚಿಸಿದಂತೆ ನಡೆದಿದ್ದರೆ ಅನುಮಾನಕ್ಕೆ ಎಡೆ ಇರುತ್ತಿರಲಿಲ್ಲ. ಈಗ ಯಡವಟ್ಟಾಗಿ ಹೋಗಿದೆ. ತಾನು ಬೇರೆ ಹೆಂಗಸಿನ ಜೊತೆ ಟೊರಾಂಟೋಗೆ ಹೋಗ್ತಿರೋದು ಡಾಗಾ ಡಂಗೂರ ಆಗಿದೆ. ಆಕೆಗೆ ಮುಖ ತೋರಿಸುವುದು ಹೇಗೆ.... ತನ್ನ ಕ್ಷೇತ್ರದ ಜನಕ್ಕೆ ಏನು ಹೇಳುವುದು... ಶಾನೆ ಕಷ್ಟ ಅಲ್ಲವಾ... ಏನು ಏನಂದ್ರಿ...... ಹೆಂಡ್ತೀಗೇನ್ರಿ ಜಾಡಿಸಿ ಒದ್ದರೆ ಮೂಲೆ ಸೇರ್ಕಳ್ತದೆ ಅಂದಿರಾ... ಇರಬಹುದು. ಆದರೆ ಜನ ಸುಮ್ಮನಿರ್ತಾರಾ... ಏನಂದ್ರಿ? ಜನ ಎನ್ರಿ ಮೂರು ದಿನ ಮಾತಾಡ್ಕಳ್ತವೆ ನಂತರ ಬಿದ್ಕಳ್ತವೆ ಅಂದಿರಾ....

ಭಾರತೀಯ ಪಕ್ಷದ ಗರ್ಭಗುಡಿಯಲ್ಲಿ ಈ ಕುರಿತು ಹೇಗೆ ಪ್ರತಿಕ್ರಿಯಿಸಿರಬಹುದು.... ಉಮಾ ಭಾರತಿ ಕುರಿತಂತೆ ಸರಸಂಚಾಲಕ ಸುದರ್ಶನ್ 'ಆಕೆ ಉತ್ತಮ ಕುಲದವಳಲ್ಲ' ಅಂದ ಹಾಗೇನೆ.... 'ಈತ ಉತ್ತಮ ಕುಲದವನಲ್ಲ ಅದಕ್ಕೇ ಹೀಗೆ ಮಾಡಿದ್ದಾನೆ... ಉತ್ತಮ ಕುಲದವನಾಗಿದ್ರೆ ಹೀಗಾಗುತ್ತಿರಲಿಲ್ಲ' ಅಂತ ತರ್ಕಿಸುತ್ತಿರಬಹುದಾ.....

-ಎಚ್.ಎಲ್. ಕೇಶವಮೂರ್ತಿ

ಬಸವಣ್ಣ ಮಾದಿಗ ಎಂದರೆ ಲಿಂಗಾಯತರಿಗೆ ಯಾಕೆ ಉರಿ?

ಎಸ್.ವಿ. ಶಾಲಪ್ಪ, ಶಿವಮೊಗ್ಗ
ವೈ.ಎಸ್.ವಿ. ದತ್ತರವರ ಮುಂದಿನ ಕಾರ್ಯಸೂಚಿ ರೇವಣ್ಣನವರನ್ನು ಮುಖ್ಯಮಂತ್ರಿ ಮಾಡುವುದೆ?
◆ ರಾಜಪುರೋಹಿತ ಕೆಲಸ ಅದೇ ಅಲ್ಲವೇ?

ಮಂಜಾಲಿ ಗುರುರಾಜ, ಬಳ್ಳಾರಿ
ಲಾಟರಿ ಮತ್ತು ಸಾರಾಯಿ ನಿಲ್ಲಿಸುವುದರಿಂದ ಯಾರಿಗೆ ಲಾಭ?
◆ ನಿಲ್ಲಿಸುತ್ತೇವೆ ಎಂದು ಹೇಳುತ್ತಲೇ ಚೆಡ್ಡಿಗಳು ಪಡೆದಿರುವ ಲಾಭ!

ಕೆ. ಶ್ರೀನಿವಾಸ್, ಮಂಡ್ಯ
ಯಡ್ಡಿ ಬಜೆಟ್‌ನಿಂದ ಲಾಭ ಯಾರಿಗೆ?
◆ ಚೆಡ್ಡಿಗಳಿಗೆ.

ಡಿ. ಎಲ್. ನಾಗರಾಜ್, ಹರಪನಹಳ್ಳಿ
ಲೈಂಗಿಕ ಶಿಕ್ಷಣದ ಬಗ್ಗೆ ಕುಮಾರಣ್ಣನ ಅಭಿಪ್ರಾಯ ಏನಿರಬಹುದು?
◆ 'ರಾಧಿಕಾ ಕಾಲೇಜ್'ನಲ್ಲಿ ಡಾಕ್ಟರೇಟ್ ಪದವಿ ಪಡೆದ ಮೇಲೆ ತಿಳಿಸುತ್ತಾರಂತೆ!

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ತುಂಟಾಟ ನಿಲ್ಲಿಸಿದ್ದೀರಲ್ಲಾ?
◆ ನೀವು ಆಟವನ್ನು ಮುಂದುವರೆಸುವುದಕ್ಕೆ ನಮ್ಮ ಆಕ್ಷೇಪಣೆ ಇಲ್ಲ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಹೆಂಡತಿ ಧರ್ಮಪತ್ನಿಯಾದರೆ, ಗಂಡ?
◆ ಸಾಕು. ಸಾಕು. ಮಕ್ಕಳನ್ನು ಧರ್ಮಕ್ಕೆ ಹುಟ್ಟಿದವರು ಅನ್ನಬೇಕಾಗುತ್ತೆ!

ಕಣ್ಣು ಮುಚ್ಚಾಲೆ

ರವಿಕುಮಾರ್, ನೆಲಮಂಗಲ
'ಮುಂಗಾರು ಮಳೆ' ಟೀಮ್ ಕಿತ್ತಾಡಿಕೊಂಡಿದೆಯಲ್ಲಾ?
◆ 'ಅನಿಸುತಿದೆ ಯಾಕೋ ಇಂದು. ಯಶಸ್ಸು ನನ್ನದೆಂದು' ಎಂಬ ಹಾಡು ಎಲ್ಲರ ನೆತ್ತಿಗೇರಿರುವುದರಿಂದ

ಅನಾಮಿಕ, ಮೈಸೂರು
ಭೈರನ 'ಆವರಣ'ವೇ ಇತಿಹಾಸ ಅಂದಿದ್ದಾಳಲ್ಲಾ ಮಾಳವಿಕಾ?
◆ ಲದ್ದಿ ಜೀವಿಗಳ ನರೀ ಕೂಗು ಗಿರಿ ಮುಟ್ಟಲ್ಲ ಬಿಡಿ!

ಶಂಕರ ಶಾಸ್ತ್ರಿ, ಉಡುಪಿ
ಅಭಿ-ಐಶ್ ಮದುವೆಗೆ ಮೂರೂ ಖಾನ್‌ಗಳನ್ನು ಆಹ್ವಾನಿಸಿಲ್ಲವಂತೆ?
◆ ಖಾನ್‌ಗಳ ಮಾತು ಇರಲಿ. ವಿವೇಕ್ ಓಬೇರಾಯನಿಗೆ ಶಿವಮೊಗ್ಗೆಯಲ್ಲಿ ದನ ಮೇಯಿಸುವ ಗತಿ ಬಂತಲ್ಲಾ?

ನಾಗರಾಜ್ ಹುಳಿಯಾರ್, ಬೆಂಗಳೂರು
ತೇಜಸ್ವಿಗೆ "ನಮ್ಮ ಪೇಪರ್ ಸಂಪಾದಕರಾಗಿ" ಎಂದು ಯಾರೋ ಕೇಳಿದ್ದರಂತೆ?
◆ ಕನ್ನಡ *rhymes* ಅನ್ನು ತೇಜಸ್ವಿ ಒಪ್ಪಿಕೊಳ್ಳುತ್ತಾರೆ ಎಂಬುದೇ ಅವರಿಗಿದ್ದ ಭ್ರಮೆ.

ಫರಾನಾ, ಚಿಕ್ಕಮಗಳೂರು
ರಾಷ್ಟ್ರಗೀತೆ ವಿವಾದದಲ್ಲಿ ಭೈರ ನಾಣಿ ಪರ ನಿಂತನಲ್ಲಾ?
◆ ಜನಿವಾರದ ನಂಟು ಅಷ್ಟು ಸುಲಭವಾಗಿ ಬಿಡಿಸಲಾಗುವುದಿಲ್ಲ. ಗೊತ್ತಾ?

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ಎಂದರೆ ಯಡ್ಡಿ ಪ್ರಕಾರ ವಿಕಾಸ ಯಾತ್ರೆಯೇ?
◆ 'ವಿಕಾಸ'ದಲ್ಲಿ 'ಕಾಸು' ಇದೆ ಎಂದು ನಂಬಿರುವ ಭ್ರಷ್ಟರು.



ಬಹುಮಾನಿತ ಪ್ರಶ್ನೆ

ವಿಜಯಕುಮಾರ್, ಬಿಳಿದಾಳೆ
ಬಸವಣ್ಣ ಮಾದಿಗ ಎಂದರೆ ಲಿಂಗಾಯತರಿಗೆ ಯಾಕೆ ಉರಿ?
◆ ಜನಿವಾರದಲ್ಲಿ 'ಭಾರ' ಹೊತ್ತಿರುವುದರಿಂದ.

ಎಂ. ಎಸ್. ವಿನಯ್, ಕುಮಟಾ
ಈಗಿನ ಸಮಾಜದಲ್ಲಿ ಸಂಭಾವಿತನಾಗಿರಬೇಕೆ?
◆ ಇದೆಲ್ಲಾ ಸಂಭಾವನೆ ಎಷ್ಟು ಎಂಬುದರ ಮೇಲೆ ನಿರ್ಧಾರವಾಗುತ್ತದೆ.

ಎಂ.ಎಸ್. ಕಾರ್ತಿಕ್, ಕುಮಟಾ
ಮದುವೆ ಆಗುವುದು ಮೂರ್ಖತನವೆನ್ನುತ್ತಾನೆ ನನ್ನ ಗೆಳೆಯ?
◆ ಈ ವಿಚಾರದಲ್ಲಿ ಗೆಳತಿಯರ ಅಭಿಪ್ರಾಯ ಕೇಳುವುದು ಒಳಿತು ಕಾರ್ತಿಕ್!

ವಾರದ ಪ್ರಶ್ನೆ:
ನಿವೃತ್ತಿ ಘೋಷಿಸಿರುವ ಪ್ರಕಾಶ್‌ಗೆ ಸೂಕ್ತವಾಗುವ ಪಾತ್ರ ಯಾವುದು?

ಏಪ್ರಿಲ್ 25ರ ಸಂಚಿಕೆಯ ನಮ್ಮ ಪ್ರಶ್ನೆ: ಇನ್ಫೋಸಿಸ್ ನಾಣಿ ಪ್ರಕಾರ ದೇಶಭಕ್ತಿ ಅಂದರೇನು?
ನಿಮ್ಮ ಉತ್ತರ: ವಿದೇಶಿ ಗುಲಾಮಗಿರಿ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಡಿ.ಎಲ್. ಚಂದ್ರಿಕಾ. ಹರಪನಹಳ್ಳಿ

ಇನ್ಫೋ ನಾಣಿ ರಾಷ್ಟ್ರಪತಿ ಆಗಕ್ಕೆ ನಾಲಾಯಕ್ಕು

ತೆಗಳಿಕೆ ಹೊಗಳಿಕೆ

'ಬಿಸವಣ್ಣ ಮಾದಿಗನೆ?' ಇದೊಂದು 'ಹೊಸ ವಿವಾದ' ಅಂತ ಪತ್ರಿಕೆ ಬರೆದಿದೆ. ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ಹಾಗೂ 'ನೂತನ ಬಗೆಯ ಸಂಶೋಧಕ' ಬಂ.ಜಯಪ್ರಕಾಶ್ ಅವರ ಸಂದರ್ಶನ ಓದಿದಾಗ ಕೇವಲ ಬಾಲಿಶ ಅನ್ನಿಸಿತು. ಬ್ರಾಹ್ಮಣರನ್ನು ವಿರೋಧಿಸುವುದಕ್ಕೆ ಬೇರೆ ಮಾರ್ಗಗಳಿವೆ. ಆದರೆ ಬಸವಣ್ಣನ ಹೆಸರಿನಲ್ಲಿ ಬಂ.ಜ ಅವರು ನಡೆಸಿರುವ ಈ ವಿಕೃತ ಮನಸ್ಥಿತಿಯ ಪ್ರತಿಫಲನ ಅನ್ನಬೇಕಾಗುತ್ತದೆ. ಇಂಥ ಸ್ವ ಪ್ರಚಾರ ಪ್ರಿಯ ವ್ಯಕ್ತಿಗಳನ್ನು 'ಸಾಂಸ್ಕೃತಿಕ ಲೋಕದ ಚಿಂತಕರು?!' ಅಂತ ಗುರುತಿಸುವುದು ನಿಜಕ್ಕೂ ಆ ಕ್ಷೇತ್ರಕ್ಕೆ ಮಾಡುವ ಅವಮಾನ ಅಷ್ಟೇ. ಇಂಥವರನ್ನು ಪತ್ರಿಕೆಗಳಾಗಲಿ, ಸಮಾಜವಾಗಲಿ ಖಂಡಿತ ಪ್ರೋತ್ಸಾಹಿಸಬಾರದು. ಸಾಂಸ್ಕೃತಿಕ ವಿಷಜಂತುಗಳು ಎಂದಿದ್ದರೂ ಸಮಾಜಕ್ಕೆ ಅಪಾಯಕಾರಿ.

ನಮ್ಮ ಕಳಕಳಿಯೇನೆಂದರೆ 'ಪತ್ರಿಕೆ' ಇಂಥ ಪೊಳ್ಳು ವಿಚಾರಗಳಿಂದ ಕೂಡಿದ ಲೇಖನ ಪ್ರಕಟಿಸಿ, ಸತ್ಯದ ನೇರ ವಕ್ತಾರರಾಗಿದ್ದ ಲಂಕೇಶರಿಗೆ ಅಪಚಾರವೆಸಗದಿರಲಿ ಅಂತ.

-ಉದಿಮೊಲ್ಲೆ ಶಿವರುದ್ರಯ್ಯ. ಮೈಸೂರು

'ಇನ್‌ಫೋಸಿಸ್‌ನ ನಾರಾಯಣಮೂರ್ತಿಗೆ ಪೊಲೀಸರು ಶರಣು' ಎಂಬ ಲೇಖನವನ್ನು ಓದಿ ನನಗೆ ಮತ್ತು ಮಿತ್ರರಿಗೆ ಬಹಳ ಸಂತಸವುಂಟಾಗಿದೆ.

ಕೇವಲ ಹಣಕ್ಕೆ ಕೈಚಾಚುವ ರಾಜಕಾರಣಿಗಳ ಹಾಗೂ ಕೆಲವು ಸ್ವಜನಪಕ್ಷಪಾತಿ ಪತ್ರಕರ್ತರ ಬೆಂಬಲವಿದ್ದರೆ ಏನನ್ನು ಬೇಕಾದರೂ ಮಾತನಾಡಬಹುದು ಎಂದು ಭಾರತದ ರಾಷ್ಟ್ರಗೀತೆಯನ್ನು ಅವಹೇಳನ ಮಾಡಿದ 'ರಾಷ್ಟ್ರದ್ರೋಹಿ' ನಯವಂಚಕ ಇನ್ಫೋಸಿಸ್‌ನ ಸಂಸ್ಥಾಪಕ ನಾರಾಯಣಮೂರ್ತಿ ಬಗ್ಗೆ ಈ ಲೇಖನವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇವೆ.

ಇಲ್ಲಸಲ್ಲದ ವಿಷಯಗಳಿಗೆ ಬಹಳಷ್ಟು ಸದ್ದು ಮಾಡಿ ಪ್ರಚಾರ ಗಿಟ್ಟಿಸುವ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿಗಳು ಹಾಗೂ ಇತರ ಮಠಾಧೀಶರುಗಳು ಈ ವಿಷಯದ ಬಗ್ಗೆ ನಿಗೂಢ ಮೌನವನ್ನು ವಹಿಸಿರುವುದು ನಮ್ಮಲ್ಲಿ ಭ್ರಾಂತಿಯನ್ನುಂಟುಮಾಡಿದೆ. ಇಂತಹ ದೇಶದ್ರೋಹಿ ವಿಪ್ರೋತ್ತಮನನ್ನು ಭಾರತದ ಅಧ್ಯಕ್ಷನನ್ನಾಗಿ ಮಾಡಿದರೆ ಈ ನಾಡಿನ ಗತಿ ಏನಾಗಬೇಡ?


ನಾರಾಯಣಮೂರ್ತಿಗೆ ಪೇಜಾವರ ಮಠದ ವಿದ್ಯಾಪೀಠಕ್ಕೆ ಅಧ್ಯಕ್ಷರಾಗುವ ಅರ್ಹತೆ ಇದೆಯೇ ಹೊರತು ಇನ್ನಾವ ಗುಣವೂ ಅವರಲಿಲ್ಲ, ಸಮಾಜ ಸೇವೆ ಮಾಡುತ್ತೇನೆಂದು ಹೇಳುತ್ತಾ ಕೀಳು ಮಟ್ಟದ ಪ್ರಚಾರ ಪಡೆದು ಹಣಬಲದಿಂದ ರಾಷ್ಟ್ರದ ಉನ್ನತ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದ ಇನ್‌ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಸುಧಾ ಮೂರ್ತಿಯವರು ತಮ್ಮ ಪತಿರಾಯ ಮಾಡಿದ ಈ ದೇಶ ಸೇವೆಯ ಬಗ್ಗೆ ಮೌನ ವಹಿಸಿರುವುದು ಅತ್ಯಂತ ಖಂಡನೀಯವಾದದ್ದು.

ವಿದೇಶಿಯರು ಬೆಂಗಳೂರಿಗೆ ಬಂದರೆ ಅವರಿಗೆ ಒಳ್ಳೆಯ ರಸ್ತೆ ಬೇಕು, ಒಳ್ಳೆಯ ವಾತಾವರಣ ಉಂಟು ಮಾಡಬೇಕು ಎಂಬ ಒಂದೇ ವಿಷಯವನ್ನು ತಮ್ಮ ಜೀವನದಲ್ಲಿ ಮುಂದಿಟ್ಟುಕೊಂಡಿರುವ ನಾರಾಯಣಮೂರ್ತಿಯವರ ಈ ವರ್ತನೆ ದುರಹಂಕಾರದ ಪರಮಾವಧಿಯಾಗಿರುತ್ತದೆ: ಅವರ ದುಷ್ಕೃತ್ಯವನ್ನು ಖಂಡಿಸುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯವಾಗಿರುತ್ತದೆ.

ಈ ಘಟನೆಯ ಬಗ್ಗೆ ವರದಿಯನ್ನು ಪಡೆದು ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆಂದು ಗೃಹ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಹೇಳಿರುವುದು ತೀರಾ ನಾಚಿಕೆಗೇಡಿನ ಸಂಗತಿಯಾಗಿರುತ್ತದೆ. ಯಾವುದೇ ವ್ಯಕ್ತಿ ದುಷ್ಕೃತ್ಯವನ್ನು ಮಾಡಿದರೆ ಅವನನ್ನು ವಿಚಾರಣೆಗೆ ಒಳಪಡಿಸಿ, ಮೊಕದ್ದಮೆಯನ್ನು ದಾಖಲು ಮಾಡುವ ಸಂಪೂರ್ಣ ಅಧಿಕಾರ ಪೊಲೀಸರಿಗೆ ಇರುತ್ತದೆ ಹಾಗೂ ಇದು ಅವರು ಮಾಡಬೇಕಾದ ಕರ್ತವ್ಯವಾಗಿರುತ್ತದೆ.

ಭಾರತೀಯ ದಂಡ 153- ಬಿ ಪ್ರಕಾರ **imputation assertion pre-judicial to national integration if committed in a public place amounts to cognizable and non - bailable offence punishable with imprisonment for 5 years and fine.** ಈ ನಿಯಮವನ್ನು ನಮ್ಮ ಪೊಲೀಸರು ಮತ್ತು ಸರಕಾರ ಪಾಲಿಸಿದರೆ ಸಾಕು, ನಾರಾಯಣಮೂರ್ತಿಗೆ ತಕ್ಕ ಶಿಕ್ಷೆ ಆಗುತ್ತದೆ.

-ಬಿ.ಎನ್. ಜ್ಞಾನಪ್ರಕಾಶ್.
ಪ್ರಗತಿಪರ ಚಿಂತನಾ ವಕೀಲರ ವೇದಿಕೆ ಅಧ್ಯಕ್ಷರು. ಬೆಂಗಳೂರು



ತೇಜಸ್ವಿ ಅವರ ಬಗ್ಗೆ ಹಿಂದೆಲ್ಲಾ ಸಾಕಷ್ಟು ಓದಿ ತಿಳಿದಿದ್ದರೂ ಅವರ ಪೂರ್ಣ ವ್ಯಕ್ತಿತ್ವದ ಪರಿಚಯವಾದದ್ದು ಕಳೆದ ಡಿಸೆಂಬರ್ ಕೊನೆಯ ವಾರದಲ್ಲಿ- ಕುಪ್ಪಳ್ಳಿಯಲ್ಲಿ ಕುವೆಂಪು ಜನ್ಮ ಶತಮಾನೋತ್ಸವದ ಮೂರು ದಿನಗಳ ಶಿಬಿರದಲ್ಲಿ! ಅವರನ್ನು ಕಂಡು ಮಾತನಾಡಿಸಿದಾಗ ತಾನೊಬ್ಬ ಸಾಹಿತಿ, ಪ್ರಗತಿಪರ ಮುಂತಾದ ಯಾವುದೇ ಈಗೋಗಳನ್ನೂ ತೋರ್ಪಡಿಸದೆ ತೀರಾ ಸಾಮಾನ್ಯನಂತೆ ಆದರೆ ಅಷ್ಟೇ ಪ್ರಜ್ಞಾವಂತ ನಾಗರಿಕನಂತೆ ಅತ್ಯಂತ ಸರಳವಾಗಿ, ಸಹಜವಾಗಿ ನಮ್ಮೊಂದಿಗೆ ಬೆರೆತಿದ್ದು, ಪರಿಸರ ಕುರಿತಾದ ತಮ್ಮ ಸ್ಲೈಡ್ ಶೋ ನೀಡಿ ಪರಿಸರ ವಿಜ್ಞಾನವನ್ನು ಸರಳವಾಗಿ ಪರಿಚಯಿಸಿದ್ದು, ಸಂವಾದದಲ್ಲಿ ಆಗಾಗ್ಗೆ ಸಿಡಿಮಿಡಿಗೊಳ್ಳುತ್ತಾ ನಮ್ಮಂತೆಯೇ ಚರ್ಚಿಸಿದ್ದು ಹಚ್ಚಹಸುರಾಗಿ ನನ್ನ ನೆನಪಿನಂಗಳದಲ್ಲಿದೆ. ಚರ್ಚೆ, ವಾದ, ಪ್ರತಿವಾದ ಗಳಿಗಾಗಿಯೇ ಮುಂದಾಗುವುದನ್ನು ಅವರು ಕಿಂಚಿತ್ತೂ ಸಹಿಸುತ್ತಿರಲಿಲ್ಲ, ಯಾವುದೇ ಒಂದು ವಿಷಯದ ಬಗೆಗಾದರೂ ಪರಿಪೂರ್ಣ ತಿಳಿವಳಿಕೆ ಇಲ್ಲದೆ ಮಾತಿಗಿಳಿದರೆ ಕಾರಂತರನ್ನು ಮೀರಿಸುವ ಬೈಗುಳ ನಿಷ್ಠುರ ನುಡಿ ಅವರದ್ದು. ಬರೆದಂತೆ ಬದುಕುವ ಬದುಕನ್ನು ಕಿಂಚಿತ್ತೂ ಸಿನಿಕತನಗಳಿಗೊಡ್ಡಿಕೊಳ್ಳದೇ ಬರೆವ ಅವರ ಬರಹಗಳೇ ಅವರನ್ನು ಶ್ರೇಷ್ಠತೆ ಎತ್ತರಕ್ಕೇರಿಸಿದೆ. ನನಗಂತೂ ಅವರಿಲ್ಲ ಎನ್ನುವುದನ್ನು ಒಪ್ಪಲು ಸಾಧ್ಯವಾಗುತ್ತಿಲ್ಲ...

-ಚನ್ನಬಸವ (ಪುತ್ತೂರ್ಕರ್), ಚಿತ್ರದುರ್ಗ

ಪೂರ್ಣಚಂದ್ರ ತೇಜಸ್ವಿಯವರ ಬಗ್ಗೆ ತಾವು ಪ್ರಕಟಿಸಿದ ಲೇಖನಗಳು ಒಬ್ಬ ಮಹಾನ್ ಲೇಖಕನಿಗೆ ಸಲ್ಲಿಸಿದ ಗೌರವವಾಗಿತ್ತು. ಅವರ ಸರಳ ಜೀವನ ಮತ್ತು ಅವರ ಅಪರೂಪದ ಬರವಣಿಗೆ ನಮಗೆಲ್ಲಾ ಉತ್ತಮ ಮಾರ್ಗದರ್ಶನವನ್ನು ನೀಡಿದೆ. ಇಂತಹ ಒಬ್ಬ ಲೇಖಕನಿಗೆ ಈವರೆಗೂ ಜ್ಞಾನಪೀಠ ಪ್ರಶಸ್ತಿ ದೊರಕದೇ ಇದ್ದದ್ದು ಮಾತ್ರ ಕನ್ನಡ ಸಾಹಿತ್ಯ ಲೋಕಕ್ಕೆ ಆದ ನಷ್ಟವೇ ಸರಿ.

-ರವಿಕುಮಾರ್. ಆರ್., ಬೆಂಗಳೂರು

ತೇಜಸ್ವಿಯವರ ನಿಧನದ ಕುರಿತು ಬರಹಗಳ ಮೂಲಕ ಪ್ರಸಾರವಾಗುತ್ತಿದ್ದ ಟೀವಿ ಸುದ್ದಿಯೊಂದರಲ್ಲಿ ಸಾಹಿತಿಯೊಬ್ಬರು ತೇಜಸ್ವಿ-ಲಂಕೇಶ್ ಇಬ್ಬರು ಸಮಾಜದ ಕಣ್ಣುಗಳಿದ್ದಂತೆ ಎಂದು ನೀಡಿದ ಹೇಳಿಕೆ ಬಿತ್ತರಗೊಳ್ಳುತ್ತಿತ್ತು. ಇದು ಅಕ್ಷರಶಃ ಸತ್ಯ. ಈಗ ಈ ಎರಡೂ ಕಣ್ಣುಗಳನ್ನು ಕಳೆದುಕೊಂಡು ಅನಾಥ ಸ್ಥಿತಿ ನಮ್ಮಂಥವರದ್ದು. ಇಬ್ಬರೂ ಕೂಡ ಯಾವ ಮುಲಾಜುಗಳಿಗೂ ಒಳಪಡದೇ ಸಮಾಜದ ಸ್ವಾಸ್ಥ ಕೆಡಿಸುವವರನ್ನು ನೇರವಾಗಿ ಝಾಡಿಸುತ್ತಿದ್ದರು.


ನಾಡಗೀತೆಯ ಮಾಧ್ವವಿವಾದದ ಬಗ್ಗೆ ಮಾತಾಡುತ್ತಾ ತೇಜಸ್ವಿಯವರೊಮ್ಮೆ ಅನವಶ್ಯಕವಾಗಿ ಮೂಗು ತೂರಿಸುತ್ತಿರುವ ಪೇಜಾವರರ ಕುರಿತು 'ಈ ಪೇಜಾವರ ಯಾರು?' ಎಂದದ್ದಾಗಲ್ಲೀ, 'ಮೋರೆಯ ಮುಖಕ್ಕೆ ಮಸಿ ಬಳಿದ ಬಗ್ಗೆ ಮಾತಾಡುತ್ತ-ಮಸಿಯಲ್ಲದೇ ಇನ್ನೇನು **Fair and Lovely** ಹಚ್ಚಬೇಕಿತ್ತೇ?' ಎಂದದ್ದಾಗಲೀ ಅವರ ಮುಲಾಜುರಹಿತ ಮಾತುಗಳಿಗೆ ಉದಾಹರಿಸಬಹುದು.

ಈಗಿನ ನಮ್ಮ ಘನ ಸರ್ಕಾರ ರಾಜ್ಯವನ್ನು, ರಾಜ್ಯ ಬೊಕ್ಕಸವನ್ನು ಕೂಳುದಂಡ ಸ್ವಾಮೀಜಿ/ಮಠಾಧೀಶರ ಪದತಲಕ್ಕೆ ಅರ್ಪಿಸಿರುವುದು ಒಂದು ಸಮಾಜದ್ರೋಹಿ ಕೆಲಸವೆನ್ನದೇ ಬೇರೆ ವಿಧಿಯಿಲ್ಲ. ಉಣ್ಣುವುದು, ಪಾದಪೂಜೆ ಮಾಡಿಸಿ ಬೋಪರಾಕ್ ಹೇಳಿಸಿಕೊಂಡು ಕರೆ ಕೊಡುವುದಷ್ಟೇ ಗೊತ್ತಿರುವ ಈ ದಂಡಪಿಂಡಗಳಿಗಾಗಿ ಕೋಟಿಗಟ್ಟಲೆ ಅನುದಾನವನ್ನು ನೀಡಿರುವ ಈ ಸರ್ಕಾರದಿಂದ ಬೇರೇನನ್ನು ತಾನೇ ಬಡಜನರು ನಿರೀಕ್ಷಿಸಿಯಾರು?

ದುರುಳರು ಪಾಪಿಗಳು ಹೆಚ್ಚಿದಂತೆ ದೇವಾಲಯ, ಮಠಮಾನ್ಯಗಳಿಗೆ ಬಲೆ ಲಾಭ ಎಂದು ದಿವಂಗತ ಜೆ.ಎಚ್. ಪಟೇಲರು ಹೇಳುತ್ತಿದ್ದರು. ತಮ್ಮ ಪಾಪದಂಶ ಚೂರಾದರೂ ಕಳಚಿಕೊಳ್ಳಲಿ ಎಂಬ ಭ್ರಮೆಯಿಂದ ಇಂತಹವರ ದೇಣಿಗೆಯೇ ಇಲ್ಲಿ ಹೆಚ್ಚು. ಏಪ್ರಿಲ್ 8ರ ಸಂಚಿಕೆಯಲ್ಲಿ ಶ್ರೀಯುತ ಭಾಸ್ಕರಮಯ್ಯರು ಹೇಳಿದಂತೆ ಈ ಪರಪುಷ್ಟ (ಬೇರೆಯವರ ಅನ್ನ ತಿಂದು ಬದುಕುವ) ಜೀವಿ ಮಠಾಧಿಪತಿ ಹೆಗ್ಗಣಗಳ ವಿರುದ್ಧ ಜನ ಸಿಡಿದೇಳುವ ದಿನ ಖಂಡಿತಾ ದೂರವಿಲ್ಲ. 'ರಸ ಋಷಿಗೆ ನಮನ' ಕಾರ್ಯಕ್ರಮದಲ್ಲಿ ಜಯಂತ್ ಕಾಯ್ಕಿಣಿಯವರು, ತೇಜಸ್ವಿಯವರಲ್ಲಿ "ಕುವೆಂಪು ಅತ್ಯಂತ ವ್ಯಗ್ರರಾಗುತ್ತಿದ್ದುದು ಯಾವಾಗ?" ಎಂದಿದ್ದಕ್ಕೆ ತೇಜಸ್ವಿ "ಮಠಾಧೀಶರ ಕುರಿತು" ಎಂದಿದ್ದರು. ಪಾದಪೂಜೆ ಮಾಡಿಸಿಕೊಳ್ಳುವ ಸುದ್ದಿ ಇರುವ ದೈನಿಕ ತರುವ ಹುಡುಗನನ್ನು ಚೆನ್ನಾಗಿ ಬೈಯ್ಯುತ್ತಿದ್ದರಂತೆ (ಯಾರದ್ದೋ ಮೇಲಿನ ಕೋಪಕ್ಕೆ). ಅಲ್ಲದೇ ಮರುದಿನದಿಂದ ಬೇರೆ ಪೇಪರ್ ಹಾಕು ಇದು ಇನ್ನು ಬೇಡ ಎನ್ನುತ್ತಿದ್ದರಂತೆ. ವಿಶ್ವಮಾನವ ಪ್ರಜ್ಞೆ ಸಾರಿದ ಕುವೆಂಪು ಅವರಂತೆ ತೇಜಸ್ವಿಗೂ ಈ ದಂಡಪಿಂಡ ಸ್ವಾಮೀಜಿಗಳ ಮೇಲೆ ಅಸಮಾಧಾನವಿತ್ತು. ಆದರೆ ಸರ್ಕಾರವೇ ಖುದ್ದು ಅವರ ಬೆಂಬಲಕ್ಕೆ ನಿಂತಿರುವಾಗ ಯಾರೇನು ಮಾಡಲು ಸಾಧ್ಯ?

-ರವಿ ಪುತ್ತೂರ. ದಕ್ಷಿಣ ಕನ್ನಡ

ಕಾಡಿನಿಂದ ತೇಲಿ ಬಂದ ಅಪ್ಪಾಜಿಯ ಧ್ವನಿ




ಆ ಕ್ಯಾಸೆಟ್ ಕೇಳಿ ಅಪ್ಪಾಜಿಯ ಧ್ವನಿಯನ್ನು ನಾನೇ ಖಚಿತಪಡಿಸಿದ್ದು. ನಿಜ ಹೇಳುತ್ತೇನೆ, ಅಂದು ಅವರ ಧ್ವನಿ ಕೇಳಿದಾಗ ನನಗೆ ಅಮೃತ ಕುಡಿದಷ್ಟು ಸಂತೋಷವಾಯಿತು. ಏಕೆಂದರೆ ಅಲ್ಲಿಯತನಕ ಅಪ್ಪಾಜಿ ಎಲ್ಲಿದ್ದಾರೆ, ಹೇಗಿದ್ದಾರೆ, ವೀರಪ್ಪನ್‌ನ ಬೇಡಿಕೆಗಳೇನು ಎಂಬುದೇ ನಮಗೆ ಗೊತ್ತಿರಲಿಲ್ಲ. ಆದರೆ ಅಪ್ಪಾಜಿಯವರ ಧ್ವನಿ ಕೇಳಿದಾಗ ಖಂಡಿತವಾಗಿಯೂ ಅವರನ್ನು ಕಾಡಿನಿಂದ ನಾಡಿಗೆ ಸುರಕ್ಷಿತವಾಗಿ ಕರೆತರುತ್ತೇವೆ ಎಂಬ ಆಶಯ ನನ್ನಲ್ಲಿ ಚಿಗುರಿತು.

ಮದ್ರಾಸಿನ ಆ ಹೋಟೇಲಿನಲ್ಲಿ ನಾನು ಮತ್ತು ...ು ಕಾಫಿ ಕುಡಿದು ಮುಗಿಸುವಷ್ಟರಲ್ಲಿ ಒಂದು ...ರ್ಯತಂತ್ರ ರೂಪಿಸಿಕೊಂಡೆವು. ನಮ್ಮ ಕುಟುಂಬದ ...ಸ್ಯರಲ್ಲಿ ಯಾರಾದರೊಬ್ಬರು ಮದ್ರಾಸಿನೊಂದಿಗೆ ...ಂತರ ಸಂಪರ್ಕ ಇಟ್ಟುಕೊಳ್ಳಬೇಕು, ಸಾಧ್ಯವಾದರೆ ...ರಾದರೊಬ್ಬರು ಇಲ್ಲೇ ಇರಬೇಕು ಎಂಬುದು ...ಲ್ಲಿ ನಿಲುವಾಗಿತ್ತು.

ಯಾಕೆಂದರೆ ನಮ್ಮ ಮನಸ್ಸು ಮೊದಲ ಬಾರಿಗೆ ...ಲ್ಪ ರಿಲ್ಯಾಕ್ಸ್ ಆಗಿದ್ದು ನಕ್ಕೀರನ್ ಗೋಪಾಲ್ ...ಜಿಯ ಧ್ವನಿ ಇದ್ದ ಕ್ಯಾಸೆಟ್‌ಅನ್ನು ತಂದನಂತರ. ಆ ...ಸೆಟ್ ಕೇಳಿ ಅಪ್ಪಾಜಿಯ ಧ್ವನಿಯನ್ನು ನಾನೇ ...ಚಿತಪಡಿಸಿದ್ದು. ನಿಜ ಹೇಳುತ್ತೇನೆ, ಅಂದು ಅವರ ...ನಿ ಕೇಳಿದಾಗ ನನಗೆ ಅಮೃತ ಕುಡಿದಷ್ಟು ...ತೋಷವಾಯಿತು. ಏಕೆಂದರೆ ಅಲ್ಲಿಯತನಕ ಅಪ್ಪಾಜಿ ...ಲ್ಲಿದ್ದಾರೆ, ಹೇಗಿದ್ದಾರೆ, ವೀರಪ್ಪನ್‌ನ ಬೇಡಿಕೆಗಳೇನು ...ಬುದೇ ನಮಗೆ ಗೊತ್ತಿರಲಿಲ್ಲ, ಆದರೆ ಅಪ್ಪಾಜಿ ...ವರ ಧ್ವನಿ ಕೇಳಿದಾಗ ಖಂಡಿತವಾಗಿಯೂ ...ರನ್ನು ಕಾಡಿನಿಂದ ನಾಡಿಗೆ ಸುರಕ್ಷಿತವಾಗಿ ಕರೆತರು...ವೆ ಎಂಬ ಆಶಯ ನನ್ನಲ್ಲಿ ಚಿಗುರಿತು.

ಅಂದು ನಾವು ನಕ್ಕೀರನ್ ಗೋಪಾಲ್ ಜೊತೆ ...ತನಾಡಿದ್ದನ್ನು ಕೆಲವರು ಟೀಕಿಸಿದರು. ಆದರೆ ...ರ ಟೀಕೆಯನ್ನೂ ಕೇಳುವ ಸ್ಥಿತಿಯಲ್ಲಿ ನಾವಿರಲಿಲ್ಲ ...ವಾ ಟೀಕಿಸಿದವರಿಗೆ ಪ್ರತ್ಯುತ್ತರ ಕೊಡುವ ಶಕ್ತಿಯೂ ...ಗಿರಲಿಲ್ಲ, ಬದಲಾಗಿ ಯಾರು ಏನೇ ಹೇಳಿದರೂ ...ನ್ನೆಲ್ಲ ನಂಬುವ ಸ್ಥಿತಿಯಲ್ಲಿದ್ದೆವು. ಹೀಗಾಗಿ ನಾವು ...ೋಪಾಲ್ ಅವರನ್ನು ನಂಬದೆವು. ತಮಿಳುನಾಡಿನ ...ುಖ್ಯಮಂತ್ರಿ ಕರುಣಾನಿಧಿಯವರ ಮಾತನ್ನೂ ...ಳಿದೆವು. ನಮ್ಮ ರಾಜ್ಯದ ಮುಖ್ಯಮಂತ್ರಿ ಎಸ್.ಎಂ. ...ಷ್ಣ ಅವರು ಹೇಳಿದಂತೆಯೂ ಕೇಳುತ್ತಿದ್ದೆವು. ಯಾರ ...ಾತು ಸರಿ? ಯಾರದು ಸರಿಯಲ್ಲ ಎಂದು ...ವ್ಯಾಖ್ಯಾನಿಸುವ ವ್ಯವಧಾನವೂ ನಮಗಿರಲಿಲ್ಲ.

ಗೋಪಾಲ್ ಅವರನ್ನು ಭೇಟಿಯಾಗಿದ್ದು ...ಗೆ ತಪ್ಪು? **He was the only person ...ho could reach Veerappan. So ...e had no option but to believe in ...im. There was ...othing we could do ...r say in this matter. ...We were totally ...elpless.** ಇಂತಹ ಇಕ್ಕಟ್ಟಿನ ...ಂದರ್ಭಗಳನ್ನು ನನ್ನ ...ಹೋದರ ರಾಘವೇಂದ್ರ ...ಂಬಾ ತಾಳ್ಮೆಯಿಂದ ...ಭಾಯಿಸುತ್ತಿದ್ದ.



ನಾವು ಕೇಳಿದ ಅಪ್ಪಾಜಿಯ ...ನಿ ಮುದ್ರಿಕೆಯನ್ನು ಕೂಡಲೇ ...ರ್ನಾಟಕ ಸರ್ಕಾರಕ್ಕೆ ನೀಡುವ ...ರ್ಧಾರ ಕೈಗೊಂಡೆವು. ಅಷ್ಟೊತ್ತಿ...ಗ್ಲಾ ಟೀವಿ ಚಾನೆಲ್‌ನವರು ಕೂಡಾ ಅದನ್ನು ...ಸಾರ ಮಾಡುತ್ತೇವೆಂದು ಫೋನು ಮಾಡಲು ...ರು ಮಾಡಿದ್ದರು. ಟೀವಿ ಚಾನೆಲ್‌ನವರು ಇದನ್ನು ...ಸಾರ ಮಾಡಿದರೆ ನಮ್ಮ ತರಹ ಅಪ್ಪಾಜಿಯ ...ಭಿಮಾನಿಗಳಿಗೂ ಅವರ ಧ್ವನಿ ಕೇಳಿ ಅವರಿಗೂ ...ಲ್ಪ ನೆಮ್ಮದಿ ಸಿಗಬಹುದು ಎಂಬ ಕಾರಣಕ್ಕೆ ನಾವು ...ಾನೆಲ್‌ನವರಿಗೂ ಅದನ್ನು ನೀಡಿದೆವು. ಒಮ್ಮೆ ...ಾನೆಲ್‌ನಲ್ಲಿ ಪ್ರಸಾರವಾದ ನಂತರ ನಿಜಕ್ಕೂ ...ಭಿಮಾನಿಗಳ ಆಕ್ರಂದನ ಸ್ವಲ್ಪ ಕಡಿಮೆಯಾಯಿತು.

ಮದ್ರಾಸಿಗೂ ವೀರಪ್ಪನ್‌ಗೂ ನಿಕಟವಾದ ...ಂಪರ್ಕ ಇದೆ ಎಂಬುದು ಖಾತ್ರಿಯಾದ ನಂತರ ...ಾವು ಮದ್ರಾಸಿನ ನಮ್ಮ ಎಲ್ಲ ಗೆಳೆಯರ ಮತ್ತು ...ತೈಷಿಗಳ ಸಹಾಯ ಮತ್ತು ಸಲಹೆಯನ್ನು ...ಡೆದುಕೊಳ್ಳುತ್ತಿದ್ದೆವು. ಈ ಸಂದರ್ಭದಲ್ಲೆಲ್ಲಾ ...ುಖ್ಯಮಂತ್ರಿ ...ರುಣಾನಿಧಿ ಅವರು ...ಮಗೆ ಎಷ್ಟೊಂದು ...ಶ್ವಾಸನೆ ...ೀಡಿದರೆಂದರೆ ...ಪ್ಪಾಜಿ ...ುರಕ್ಷಿತವಾಗಿ ...ಂಡಿತವಾಗಿ ...ರ್ತಾರೆ ಎಂಬ ...ರವಸೆ ನಮ್ಮಲ್ಲಿ ...ಮೂಡಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಸಲಹೆಯ ಮೇರೆಗೆ ನಾವು ಕೂಡಾ ಆಕಾಶವಾಣಿಯಲ್ಲಿ ಅಪ್ಪಾಜಿಗೆ ಮತ್ತು ವೀರಪ್ಪನ್‌ಗೆ ಸಂದೇಶ ರವಾನಿಸಲು ಪ್ರಾರಂಭಿಸಿದೆವು. ಮೊದಲಿಗೆ ಅಮ್ಮ ಆನಂತರ ನಾನು ಹೀಗೆ ನಮ್ಮ ಕುಟುಂಬದ ಬಹುತೇಕ ಎಲ್ಲರೂ ಆಕಾಶವಾಣಿಯ ಮೂಲಕ ಅಶರೀರ ವಾಣಿಯನ್ನು ಗಾಳಿಯಲ್ಲಿ ತೇಲಿ ಬಿಟ್ಟೆವು. ಇಂತಹ ಸಂದೇಶವನ್ನು ವೀರಪ್ಪನ್ ಕೇಳುತ್ತಾನೋ ಇಲ್ಲವೋ? ಎಂಬ ಸಂದೇಹ ನಮ್ಮನ್ನು ಕಾಡುತ್ತಿತ್ತು. ಆದರೆ ಅವೆಲ್ಲವನ್ನೂ ಆತ ಬಹಳ ಆಸಕ್ತಿಯಿಂದ ಕೇಳುತ್ತಿದ್ದ ಎಂಬ ವಿಷಯ ನಮಗೆ ಅಪ್ಪಾಜಿ ಬಂದ ನಂತರ ತಿಳಿಯಿತು.

ಈ ಸಂದರ್ಭದಲ್ಲಿ ತಮಿಳಿನ ಸೂಪರ್‌ಸ್ಟಾರ್ ರಜನೀಕಾಂತ್ ನಮಗೆ ನೀಡಿದ ಸಹಾಯವನ್ನು ನಾವು ಎಂದಿಗೂ ಮರೆಯಲು ಸಾಧ್ಯವೇ ಇಲ್ಲ. ನಾವು ಮದ್ರಾಸಿಗೆ ಹೋದಾಗಲೆಲ್ಲ ಅವರ ಮನೆಗೆ ಹೋಗುತ್ತಿದ್ದೆವು. ಅಲ್ಲಿ ಅಪ್ಪಾಜಿಯನ್ನು ಹೇಗೆ ಸುರಕ್ಷಿತವಾಗಿ ಕರೆತರಬಹುದು ಎಂಬುದರ ಬಗ್ಗೆ ಗಂಟೆಗಟ್ಟಲೆ ಅವರು ಗಂಭೀರವಾಗಿ ಚರ್ಚಿಸುತ್ತಿದ್ದರು. ಅಷ್ಟೇ ಇಲ್ಲ, ನಾವು ಜೀವನಾಸಕ್ತಿ ಕಳೆದುಕೊಂಡು ಬೆಂಗಳೂರಿನಲ್ಲೇ ಇದ್ದಾಗ ಎರಡು ಬಾರಿ ಅವರೇ ನಮ್ಮ ಮನೆಗೆ ಬಂದು ಏನೇನು ಮಾಡುತ್ತಿದ್ದೇವೆ ಎಂದು ನಮಗೆ ಹೇಳಿ ನಮ್ಮಲ್ಲಿ ಭರವಸೆ ತುಂಬುತ್ತಿದ್ದರು. ಅಷ್ಟೇ ಅಲ್ಲ, ವೀರಪ್ಪನ್ ನಿಜಜೀವನದಲ್ಲಿ ರಜನೀಕಾಂತ್ ಅವರ ದೊಡ್ಡ ಅಭಿಮಾನಿ; ರಜನಿ ಮಾತನ್ನು ಆತ ತಳ್ಳಿಹಾಕುವುದಿಲ್ಲ ಎಂಬ ವಿಷಯ ರಜನೀಕಾಂತ್‌ರಿಗೆ ತಿಳಿಯಿತು. ಈ ಸಂದರ್ಭದಲ್ಲಿ ನಮ್ಮ ಪರವಾಗಿ ರಜನೀಕಾಂತ್ ಅವರು ಅಪ್ಪಾಜಿಯನ್ನು ಬಿಡುಗಡೆ ಮಾಡು ಎಂದು ವೀರಪ್ಪನ್‌ನನ್ನು ವಿನಂತಿಸಿದ ಧ್ವನಿಮುದ್ರಿಕೆಯನ್ನು ಕಳುಹಿಸಿ ಕೊಟ್ಟರು. ಅಷ್ಟೇ ಅಲ್ಲ, ಆಕಾಶವಾಣಿಯ ಮುಖಾಂತರವೂ ಕೂಡ ರಜನೀಕಾಂತ್ ಆತನನ್ನು ವಿನಂತಿಸಿದ್ದು ಪ್ರಸಾರವಾಯಿತು. ಮಹಾನ್ ದೈವಭಕ್ತರಾದ ರಜನೀಕಾಂತ್ ಆ ಸಂದರ್ಭದಲ್ಲಿ ಅಪ್ಪಾಜಿಗಾಗಿ ಅನೇಕ ವಿಶೇಷ ಪೂಜೆಗಳನ್ನೂ ಮಾಡಿದರು.


ಅಪ್ಪಾಜಿಯ ಅಪಹರಣ ನಮ್ಮ ಕುಟುಂಬದ ಸಮಸ್ಯೆಯಾಗಿರದೇ, ಇಡೀ ಕರ್ನಾಟಕದ ಜನತೆ ಇದಕ್ಕೆ ಸ್ಪಂದಿಸಿ ತಮ್ಮ ನೋವನ್ನು ವ್ಯಕ್ತಪಡಿಸಿದ್ದರಿಂದ ನಮಗೆ ಒಂದು ರೀತಿಯ ಶಕ್ತಿ ಬಂತು. ರಾಜಕಾರಣಿಗಳು, ಪಕ್ಷ ಭೇದ ಮರೆತು ನಮ್ಮೊಂದಿಗೆ ಬಂದರು. ನಮ್ಮ ಚಲನಚಿತ್ರರಂಗದ ಕಲಾವಿದರು ಮತ್ತು ತಂತ್ರಜ್ಞರ ತ್ಯಾಗವನ್ನು ನಾವು ಮರೆಯಲು ಸಾಧ್ಯವಿಲ್ಲ. ಮಠಾಧೀಶರು, ರೈತರು, ಕಾರ್ಮಿಕರು, ಪೊಲೀಸಿನವರು, ಮಾಧ್ಯಮದವರು... ಎಲ್ಲರೂ ಅವರವರ ಶಕ್ತಿಮೀರಿ ನಮಗೆ ಈ ಸಮಸ್ಯೆಯನ್ನು ಎದುರಿಸಲು ನಮಗೆ ಮಾನಸಿಕ ಬೆಂಬಲ ನೀಡಿದರು. ಅವರಿಗೆಲ್ಲ ನಮ್ಮ ಕುಟುಂಬದ ಪರವಾಗಿ ನಾನು ಈ ಮೂಲಕ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

ಆದರೂ ಸುಮಾರು ಒಂದೂವರೆ ತಿಂಗಳಾದ ನಂತರ ಒಂದು ದಿನ ಬೆಳಿಗ್ಗೆ ಹಾಸಿಗೆಯಿಂದ ಏಳುತ್ತಲೇ ನನ್ನ ಮೂಡ್ ಖರಾಬ್ ಆಯಿತು. ಇವತ್ತು ಬರ್ತಾರೆ, ನಾಳೆ ಬರ್ತಾರೆ ಅಂತ ಅಧಿಕಾರಿಗಳು ಹೇಳ್ತನೇ ಇದ್ದಾರೆ.... ಸರ್ಕಾರದವರನ್ನು ಕೇಳಿದರೆ ಇನ್ನೇನು ಆಗ್ಬಿಡ್ತು ಆಗ್ಬಿಡ್ತು ಎನ್ನುತ್ತಿದ್ದಾರೆ. ಆದರೆ ನಮಗೆ ಮಾತ್ರ ವೀರಪ್ಪನ್ ಕಡೆಯಿಂದ ಯಾವುದೇ ಸಕಾರಾತ್ಮಕ ಸಂದೇಶಗಳು ಬರುತ್ತಿಲ್ಲ, ಎಲ್ಲರೂ ಇವತ್ತು ಬರ್ತಾರೆ, ನಾಳೆ ಬರ್ತಾರೆ ಅಂತ ಆಸೆ ಹುಟ್ಟಿಸ್ತಾರೆ ಅಷ್ಟೇ.... ಎಂದು ಬೇಸರವಾಯಿತು. ಅಂದು ನಿಜಕ್ಕೂ ನನ್ನ ತಲೆ ಕೆಟ್ಹೋಗಿತ್ತು. ನಾನು ಬೆಳಿಗ್ಗೆ ಎದ್ದವನೇ ಮನೆಯಲ್ಲಿ ಎದುರಿಗೆ ಸಿಕ್ಕ ಸಿಕ್ಕವರ ಮೇಲೆ ಕೂಗಾಡಲು ಶುರು ಮಾಡಿದೆ. ಇಂಥ ಸಂದರ್ಭದಲ್ಲಿ ನನ್ನನ್ನು ಸಮಾಧಾನಪಡಿಸಿದ್ದು ರಾಘು.

ಆ ಸಂದರ್ಭದಲ್ಲಿ ಕೆಲವು ಅಭಿಮಾನಿಗಳು ಕೂಡಾ "ನಾವೆಲ್ಲಾ ಕಾಡಿಗೆ ನುಗ್ಗುತ್ತೇವೆ" ಎಂದು ಹೇಳಿಕೆ ನೀಡಿದ್ದು ನಮ್ಮಲ್ಲಿ ಇನ್ನಷ್ಟು ಭಯ ಮತ್ತು ಆತಂಕವನ್ನು ಸೃಷ್ಟಿಸಿತು. ಸರ್ಕಾರದ ಅಧಿಕಾರಿಗಳ ಮನವಿ ಮೇರೆಗೆ ಆ ಕೂಡಲೇ ಕಾಡಿಗೆ ಹೋಗದಂತೆ ಅಭಿಮಾನಿಗಳನ್ನು ನಾವು ತಡೆದು ನಿಲ್ಲಿಸಿದೆವು. ಅಭಿಮಾನಿಗಳು ಕಾಡಿಗೆ ನುಗ್ಗಿದ್ದೇ ಆದಲ್ಲಿ ಪರಿಸ್ಥಿತಿ ಯಾವ ವಿಕೋಪಕ್ಕೆ ತೆರಳುತ್ತಿತ್ತು ಎಂದು ಊಹಿಸಲೂ ಕೂಡಾ ಸಾಧ್ಯವಿರಲಿಲ್ಲ. ಆದರೆ ಅಭಿಮಾನಿಗಳದ್ದೇನು ತಪ್ಪಿದೆ ಹೇಳಿ? ಅಪ್ಪಾಜಿಯವರ ಹಿರಿಯ ಮಗನಾಗಿ ನನಗೇ ಆ ಸಂದರ್ಭದಲ್ಲಿ ಒಮ್ಮೆ ಕಾಡಿಗೆ ನುಗ್ಗಿಬಿಡೋಣ ಎಂಬ ಸಿಟ್ಟು ಮತ್ತು ಆಕ್ರೋಶ ಉಂಟಾಗಿತ್ತು.

ಅದೊಂದು ದಿನ ಹೀಗೆ ಅಪ್ಪಾಜಿಯನ್ನು ನೆನೆಸಿಕೊಂಡು ಏಳುತ್ತಿದ್ದಾಗ ರಾಘು ಬಂದು ಹೇಳಿದ ಸುದ್ದಿ ಕೇಳಿ ನಾನು ಸ್ತಂಭೀಭೂತನಾದೆ. "ನಾಗಪ್ಪ ಮಾರಡಗಿ ವೀರಪ್ಪನ್ ಜೊತೆ ಹೋರಾಡಿಕೊಂಡು ಕಾಡಿನಿಂದ ಓಡಿಬಂದಿದ್ದಾನಂತೆ" ಎಂದ ರಾಘು. ನಾನು "ವಾಟ್....? ಇಸ್ ಇಟ್ ಟ್ರೂ" ಎಂದು ಕೇಳಿದೆ. "ನಾನಾಗಲೇ ಪೊಲೀಸರ ಜೊತೆ ಮಾತನಾಡಿದ್ದೇನೆ. ಅವರು ಈ ಸುದ್ದಿಯನ್ನು ಕನ್‌ಫರ್ಮ್ ಮಾಡಿದ್ದಾರೆ" ಎಂದ. ಆತ ಅಷ್ಟು ಹೇಳುತ್ತಿದ್ದಂತೆಯೇ ನನ್ನ ಕಣ್ಣಲ್ಲಿ ನೀರು ಸುರಿಯಲಾರಂಭಿಸಿತು. "ನಾಗಪ್ಪನ ಮೇಲಿನ ಸಿಟ್ಟನ್ನು ವೀರಪ್ಪನ್ ಖಂಡಿತವಾಗಿಯೂ ಅಪ್ಪಾಜಿಯ ಮೇಲೆ ತೀರಿಸಿಕೊಳ್ಳುತ್ತಾನೆ" ಎಂದು ನಾನು ಆತಂಕಗೊಂಡೆ. "ಅದನ್ನೆಲ್ಲ ಆಮೇಲೆ ನೋಡೋಣ. ಮೊದಲು ನಾಗಪ್ಪನನ್ನು ಭೇಟಿಯಾಗೋಣ ಬಾ" ಎಂದು ರಾಘು ನನ್ನನ್ನು ಕರೆದುಕೊಂಡು ಹೋದ. ಅಂದು ನಾನು ಬೆಡ್ ಟೀ ಮಾತ್ರವಲ್ಲ ಬಹುಶಃ ಮುಖವನ್ನು ಕೂಡಾ ತೊಳೆಯಲಿಲ್ಲ. ಹಾಗೆ ಹೋದವರಿಗೆ ಅಲ್ಲಿ ಎದುರಾದದ್ದು ಒಂದೇ ಸಮನೆ ಅಳುತ್ತಲೇ ಕೈಕಟ್ಟಿ ನಿಂತಿದ್ದ ನಮ್ಮ ನಾಗಪ್ಪ...


(ಮುಂದುವರೆಯುವುದು)



ವೀರಪ್ಪನ್‌ನೊಂದಿಗೆ ಸೆಣಸಾಡಿ ಕಾಡಿನಿಂದ ಓಡಿಬಂದ ನಾಗಪ್ಪ ಮಾರಡಗಿ

ನಿರೂಪಣೆ: ಸದಾಶಿವ ಶೆಣೈ

49



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ರಿಲಯನ್ಸ್ ರೂಪದರ್ಶಿ ಆದ ಗಣೇಶ್

'ಕಿಂಗ್ ಫಿಶರ್' ಬಿಯರ್‌ನ ರೂಪದರ್ಶಿ ಉಪೇಂದ್ರ ಮತ್ತು 'ನಾಕ್ ಔಟ್' ಬಿಯರ್‌ನ ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ದರ್ಶನ್ ಇಬ್ಬರೂ ಬೆಚ್ಚಿಬೀಳುವಂತಹ ಸುದ್ದಿಯೊಂದು 'ಮುಂಗಾರು ಮಳೆ'ಯ ಗಣೇಶ್ ಕ್ಯಾಂಪಿನಿಂದ ಬಂದಿದೆ. ಅದೇನೆಂದರೆ, ಗಣೇಶ್ ಈಗ ರಿಲಯನ್ಸ್ ಕಂಪನಿಯ ಬ್ರ್ಯಾಂಡ್ ಅಂಬಾಸಿಡರ್ ಆಗಿರುವುದು.

ಒಂದು ವರ್ಷಕ್ಕೆ ಏಳು ದಿನಗಳ ಕಾಲ ಶೂಟಿಂಗ್ ನಡೆಸಲು ಒಪ್ಪಿರುವ ಗಣೇಶ್, ಅದಕ್ಕೆಂದು ಮೂವತ್ತೈದು ಲಕ್ಷ ರೂಪಾಯಿಗಳ ಸಂಭಾವನೆಯನ್ನೂ ಪಡೆಯುತ್ತಿದ್ದಾರೆ. ಎರಡೇ ಚಿತ್ರಗಳಲ್ಲಿ ನಟಿಸಿ, ಮಾಡಲಿಂಗ್ ಜಗತ್ತಿನಲ್ಲೂ ಹಿರಿಯರನ್ನೇ ಓವರ್ ಟೇಕ್ ಮಾಡಿರುವ ಕಾಮಿಡಿ ಟೈಮ್ ಗಣೇಶ ಅವರೆಲ್ಲ ಕೈ ಕೈ ಹಿಸುಕುವಂತೆ ಮಾಡಿದ್ದಾರೆ.

ಅರಸು 100 ಎಂಬ ಸ್ನೇಹಲೋಕ

ಮೇ 5 ಪುನೀತ್ ರಾಜ್‌ಕುಮಾರ್ ನಟಿಸಿದ 'ಅರಸು' ಚಿತ್ರದ ಶತದಿನೋತ್ಸವ ಸಮಾರಂಭ ನಡೆಯಲಿದ್ದು ಅಂದು ಗಾಂಧಿನಗರದ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಲಿದೆ. ಅದು ಹೇಗೆಂದು ಗೊತ್ತಾ?




ವಜ್ರೇಶ್ವರಿ ಕಂಬೈನ್ಸ್‌ನ ಈ ಶತ ದಿನೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ವಿಷ್ಣುವರ್ಧನ್ ದಂಪತಿಗಳು ಆಗಮಿಸಲಿದ್ದಾರಂತೆ. ವಿಷ್ಣು ಮತ್ತು ರಾಜ್ ಸಂಸ್ಥೆಯ ನಡುವಿದ್ದ ದ್ವೇಷ, ಮನಸ್ತಾಪಗಳು ಗೊತ್ತಿರುವ ಜನರಿಗೆ ಈ ಸುದ್ದಿ ಕೇಳಿ ಖಂಡಿತವಾಗಿಯೂ ಆಶ್ಚರ್ಯವಾಗಬಹುದು. ಯಾಕೆಂದರೆ ವಿಷ್ಣು ಹೆಡ್ ಆಫೀಸಿನವರ ಸಿನಿಮಾ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ಇದೇ ಮೊದಲ ಬಾರಿ.

ಅದೇನೇ ಇರಲಿ, ಅಣ್ಣಾವ್ರ ಮಕ್ಕಳು ಹಳೆಯ ಮನಸ್ತಾಪದ ಅಧ್ಯಾಯಗಳನ್ನು ಮರೆತು ಸ್ನೇಹದ ಹೊಸ ಮುನ್ನುಡಿ ಬರೆಯುತ್ತಿರುವುದು ನಿಜಕ್ಕೂ ಅಭಿನಂದನೀಯ. ಅದಕ್ಕೆ ಸಾಹಸಸಿಂಹ ಸ್ಪಂದಿಸುತ್ತಿರುವುದು ಕೂಡ ಮೆಚ್ಚಬೇಕಾದದ್ದೆ. ಇಂತಹ ಕಾರ್ಯಗಳು ಅಣ್ಣಾವ್ರು ಬದುಕಿದ್ದಾಗ ನಡೆದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.



ಎನಿ ಹೌ, ಬೆಟರ್ ಲೇಟ್ ದ್ಯಾನ್ ನೆವರ್ ಎನ್ನುತ್ತಾರಲ್ಲ, ಕನಿಷ್ಠ ಈಗಲಾದರೂ ಸದಾಶಿವನಗರ ಮತ್ತು ಜಯನಗರ ಭಾಯಿ ಭಾಯಿ ಎನ್ನುತ್ತಿರುವುದು ಸಂತೋಷದ ಸಂಗತಿ.




ಕಾಡುಕುದುರೆ ಓಡಿಬಂದಿತ್ತಾ

'ಸತ್ಯವಾನ್ ಸಾವಿತ್ರಿ' ಚಿತ್ರದ ನಿರ್ದೇಶಕ ರಮೇ[ಶ್] ತನ್ನ ಸಿನಿಮಾದಲ್ಲಿರುವ ಪಾತ್ರಗಳಿಗೆ ಕುತೂಹಲಕ[ರ] ನಿಕ್ ನೇಮ್‌ಗಳನ್ನು ಕೊಟ್ಟಿದ್ದಾರೆ. ಉದಾಹರ[ಣೆಗೆ] ರಮೇಶ್‌ಗೆ ಕಾಡುಕುದ್ರೆ, ಡೈಸಿಗೆ ಗೋಲ್ಡ್ ಫಿ[ಶ್] ಅನಿರುದ್ಧ್‌ಗೆ ಸ್ಪೈಡರ್ ಮ್ಯಾನ್, ಮೋಹನ್‌ಗೆ ಫು[ಟ್] ಬಾಲ್, ಕೋಮಲ್‌ಗೆ ಟಿಪ್ಪು ಸುಲ್ತಾನ್, ಜೆನ್ನಿಫ[ರ್‌ಗೆ] ಬಾರ್ಬಿ ಡಾಲ್.... ಹೀಗೆಂದು ರಮೇಶ್ ನಾಮಕ[ರಣ] ಮಾಡಿದ್ದಾರಂತೆ. ಅಶ್ಲೀಲ ಮತ್ತು ದ್ವಂದ್ವಾರ್ಥ[ದ] ನಿಕ್‌ನೇಮ್‌ಗಳನ್ನು ಕೇಳಿ ಕೇಳಿ ಸುಸ್ತಾದ ಕನ್ನ[ಡ] ಪ್ರೇಕ್ಷಕರಿಗೆ ಇವು ಸ್ವಲ್ಪ ರಿಲೀಫ್ ಕೊಡಬಹುದೇನೊ.

ದುನಿಯಾದಲ್ಲಿ ಮಳೆ ಬಿದ್ದ[ರೆ] ಸೈನೈಡ್ ಆಗುತ್ತಾ[?]

'ಮುಂಗಾರು ಮಳೆ'ಯ ಗಣೇಶ್ ಮತ್ತು 'ದುನಿಯಾ' ಖ್ಯಾತಿಯ ವಿಜ[ಯ್] ಇವರಿಬ್ಬರನ್ನು ಜೊತೆಗೂಡಿಸಿ ಚಿತ್ರ ಮಾಡುವ ಸಾಹಸಕ್ಕೆ ಸಾರಾ ಗೋವಿಂ[ದು] ಹೊರಟಿದ್ದಾರೆ. ಈ ವಂಡರ್ ಬಾಯ್ಸ್‌ಗಳಿರುವ ಚಿತ್ರವನ್ನು ನಿರ್ದೇಶಿಸುತ್ತಿರುವ[ವರು] 'ಸೈನೈಡ್' ಖ್ಯಾತಿಯ ರಮೇಶ್. ಇಂತಹ ಅಪರೂಪದ ಕಾಂಬಿನೇಶನ್ ಚಿತ್ರ[ವು] ಗಾಂಧಿನಗರದ ಏಕತಾನತೆಯನ್ನು ಮುರಿಯುತ್ತದೆ ಎಂಬುದೇ ಸಂತೋಷದ ವಿಷ[ಯ].



ಹಾರಿಬಲ್ 'ಭಕ್ತ'


ಈ ವಾರ ಬಿಡುಗಡೆಯಾದ 'ಭಕ್ತ' ಎಂಬ ಚಿತ್ರದ ವಿಮರ್ಶೆ ಬರೆಯುವ ಅಗತ್ಯವೇ ಇಲ್ಲ, ಚಿತ್ರ ಅಷ್ಟೊಂದು ಹಾರಿಬಲ್ ಆಗಿದೆ. ಎಷ್ಟೊಂದು ಹಾರಿಬಲ್ ಎಂಬುದಕ್ಕೆ ಪುಟ್ಟ ಉದಾಹರಣೆ ಇಲ್ಲಿದೆ.

ಈ ಚಿತ್ರದ ನಾಯಕ ಅಗ್ನಿ. ಆತ ಸಂತೋಷಕೂಟ ಆರಂಭವಾದಾಗ ಎಲ್ಲೂ ಕಾಣಿಸಲಿಲ್ಲ, ನಿರ್ದೇಶಕ ಶ್ರೀರಾಮ್ ಮಾತ್ರ ಅತ್ತಿಂದಿತ್ತ ಓಡಾಡುತ್ತಿದ್ದರು. ತುಂಬಾ ಹೊತ್ತಿನ ನಂತರ ನಾಯಕ ನಟ ಅಗ್ನಿ ಪ್ರತ್ಯಕ್ಷನಾದ. "ಯಾಕೆ ಇಷ್ಟು ಹೊತ್ತು ನಾಪತ್ತೆಯಾಗಿದ್ದಿ?" ಎಂದು ಪತ್ರಕರ್ತರು ಸಹಜವಾಗಿ ಕೇಳಿದರು. "ಹೋಗ್ಲಿ ಬಿಡಿ ಸಾರ್, ಈ ಚಿತ್ರ ನಾನು ಅಂದುಕೊಂಡದ್ದರಲ್ಲಿ ಟೆನ್ ಪರ್ಸೆಂಟ್ ಮಾತ್ರ ಚೆನ್ನಾಗಿ ಬಂದಿದೆ" ಎಂದು ಆತ ಉತ್ತರಿಸಿದ್ದನ್ನು ಕೇಳಿ ಪತ್ರಕರ್ತರೆಲ್ಲಾ ಸುಸ್ತಾದರು. ಕನ್ನಡ ಚಿತ್ರರಂಗದ ಯಾವ ನಾಯಕನಟನೂ ಚಿತ್ರ ಬಿಡುಗಡೆಯಾದ ದಿನ ಈ ರೀತಿ ಹೇಳಿದ್ದೇ ಇಲ್ಲ, ನಾಯಕನಟನೇ ಹೀಗೆ ಹೇಳಿದ ನಂತರ ಈ ಚಿತ್ರ ಎಷ್ಟು ಚೆನ್ನಾಗಿದೆ ನೀವೇ ಊಹಿಸಿ.

'ಕ್ಷಣಕ್ಷಣ'ಕ್ಕೆ ಕ್ಷಣಗಣನೆ

ಮೊನ್ನೆ ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ 'ಕ್ಷಣ ಕ್ಷಣ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ ಬಹಳ ಕಲರ್‌ಫುಲ್ ಆಗಿ ನಡೆಯಿತು.

ಸಸ್ಪೆನ್ಸ್ ಚಿತ್ರದ ತುಣುಕುಗಳು, ಮ್ಯಾಜಿಕ್ ರಮೇಶ್ ಅವರ ಮ್ಯಾಜಿಕ್, ಹಾಡು, ನೃತ್ಯ... ಇವೆಲ್ಲವೂ ಯಥೇಚ್ಛವಾಗಿ ಮೂರೂವರೆ ಗಂಟೆಗಳ ಕಾಲ ನಡೆಯಿತು. ಆದರೆ ಈ ಸಮಾರಂಭದಲ್ಲಿ ಚಿತ್ರದ ಮುಖ್ಯ ಕಲಾವಿದರಾದ ವಿಷ್ಣುವರ್ಧನ್, ಪ್ರೇಮ ಮತ್ತು ಕಿರಣ್ ರಾಥೋಡ್ ಗೈರುಹಾಜರಾಗಿದ್ದರು. ಆದರೂ ಕೂಡ ಈ ಸಮಾರಂಭವನ್ನು ದೇಸಾಯಿ ತುಂಬಾ ಕುತೂಹಲಕಾರಿಯಾಗಿ ಆಯೋಜಿಸಿದ್ದರು. ಇದನ್ನು ನೋಡಿ ಹಿರಿಯರೊಬ್ಬರು ಹೇಳಿದ್ದು ಸಮಯೋಚಿತ ವಾಗಿದೆ. "ಈ ಸಮಾರಂಭದಷ್ಟೇ ಕುತೂಹಲಕಾರಿಯಾಗಿ ದೇಸಾಯಿ ಚಿತ್ರವನ್ನು ನಿರೂಪಿಸಿದಲ್ಲಿ ಚಿತ್ರ ಗೆಲ್ಲುವುದು ಗ್ಯಾರಂಟಿ. ಆದರೆ ಎಂದೂ ಯಾವತ್ತೂ ಗಿಮಿಕ್ ಮಾಡದ ದೇಸಾಯಿ ಈ ಬಾರಿ ಮ್ಯಾಜಿಕ್, ನೃತ್ಯದಂತಹ ಗಿಮಿಕ್ ಮಾಡುವುದನ್ನು ನೋಡಿದರೆ ಯಾಕೋ ಸಂಶಯ ಬರುತ್ತಿದೆ" ಎಂದರು. 'ಕ್ಷಣ ಕ್ಷಣ' ಬಿಡುಗಡೆಗೆ ಕ್ಷಣಗಣನೆ ಆರಂಭವಾಗಿರು ವುದರಿಂದ ಇದಕ್ಕೆ ಉತ್ತರ ಸದ್ಯದಲ್ಲೇ ಸಿಗಲಿದೆ.



ಸುಂದರವಾದ 'ಸೌಂದರ್ಯ'

ಕನ್ನಡದಲ್ಲಿ ಬಹಳ ಸಮಯದ ನಂತರ ಒಂದು ಸಸ್ಪೆನ್ಸ್, ಥ್ರಿಲ್ಲರ್, ಲ[ವ್] ಸ್ಟೋರಿ ತೆರೆಗೆ ಬಂದಿದೆ. ಇದರ ಹೆಸರು 'ಸೌಂದರ್ಯ'. 'ಮುಂಗಾರು ಮಳೆ'ಯ[ನ್ನು] ನೆನಪಿಸುವಂತಹ ಪ್ರಕೃತಿ ಸೌಂದರ್ಯ ಇಲ್ಲೂ ಇದೆ. ಹಂಸಲೇಖಾ ಮತ್ತೊ[ಮ್ಮೆ] ತಮ್ಮ ಬತ್ತಳಿಕೆಯಿಂದ ಸೊಗಸಾದ ಟ್ಯೂನ್‌ಗಳನ್ನು ನೀಡಿದ್ದಾರೆ. ಚೆನ್ನಗಂಗಪ್ಪ ಎಂ[ಬ] ನಿರ್ದೇಶಕ ನಿಜಕ್ಕೂ ನವಿರಾದ ನಿರೂಪಣೆಯಿಂದ ಸರ್‌ಪ್ರೈಸ್ ಹುಟ್ಟಿಸುತ್ತಾ[ರೆ]. ರಮೇಶ್ ಎಂದಿನಂತೆ ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಎಲ್ಲಕ್ಕಿ[ಂತ] ಮುಖ್ಯವಾಗಿ ಬೇಬಿ ಶ್ರೇಯಸ್ ಎಂಬ ಪುಟಾಣಿಯ ಮುಗ್ಧ ನಗು ಮ[ತ್ತು] ನಟನೆಗಾಗಿಯಾದರೂ ಈ ಚಿತ್ರ ಒಮ್ಮೆ ನೋಡಬಹುದು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44